TIGHT BINDING BOOK

TEXT PROBLEM WITHIN THE BOOK ONLY

TEXT FLY WITHIN THE BOOK ONLY

UNIVERSAL LIBRARY
OU_198753
UNIVERSAL LIBRARY

English Classics

for

Kanarese Readers.

ಪ್ರತಾಪರುದ್ರದೇವ.

ಅಡ್ವೊಕೇಟ್.

ಎಂ. ಎಲ್. ಶ್ರೀಕಂಠೇಶಗೌಡರಿಂದ

ವಿರಚಿತವಾದುದು.

ಮೈಸೂರು :

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

1895.

ಕಾಪಿರೈಟ್ ರಿಜರ್ವ್ಡ್.

TO

THE BELOVED MEMORY

OF

HIS HIGHNESS CHAMARAJENDRA WADIYAR

THE LATE LAMENTED MAHARAJA OF MYSORE

THIS WORK

IS

WITH THE GRACIOUS PERMISSION

OF

HER HIGHNESS THE MAHARANI REGENT C. I.

OF MYSORE.

DEDICATED

BY

THE AUTHOR.

ಪೀಠಿಕೆ.

ಭಾಷಾಂತರಿಸಲ್ಪಟ್ಟಿರುವ ಗ್ರಂಥಗಳ ನಿಸ್ಸಾರವನ್ನು ಕಂಡು ಭಾಷಾಂತರಿಸುವವರನ್ನು ಹೇಳನಂಗೈಯಲು ; ಯುರೋಪು ಖಂಡದ ಅನೇಕ ಭಾಷೆಗಳಿಗೂ, ಭಾಷಾಗ್ರಂಥಗಳಿಗೂ, ಮಾತೃಸ್ಥಾನವಾದ ಇಟಲಿ ದೇಶದಲ್ಲಿ 'ಟ್ರ್ಯಾಡುಟ್ಟೋರಿ ಟ್ರ್ಯಾಡಿಟರಿ' (*Traduttori Traditari*) ಅಂದರೆ ಭಾಷಾಂತರಿಸುವವರು ವಿಶ್ವಾಸಘಾತುಕರೆಂಬ ಸಾಮತಿಯನ್ನು ಹೇಳುವದುಂಟು. ಅದರ ಅಭಿಪ್ರಾಯವೇನೆಂದರೆ.—ಪರಭಾಷೆಯ ಉತ್ತಮಗ್ರಂಥಗಳನ್ನು ನೋಡಿ ಅದರಲ್ಲಿ ವಿಶ್ವಾಸವಿಟ್ಟು ಭಾಷಾಂತರಿಸಲುಪಕ್ರಮಿಸಿ ಮೂಲಗ್ರಂಥವಲ್ಲಿರತಕ್ಕ ಅರ್ಥಾತಿಶಯಗಳನ್ನು ತಮ್ಮ ಭಾಷೆಗೆ ಕಟ್ಟಿಕೊಳ್ಳದೆ ಮೂಲಗ್ರಂಥದಲ್ಲೇ ಬಿಟ್ಟು, ರಸವಿದ್ದ ಕಡೆಯೋ ರಸವೆಲ್ಲವನ್ನು ನಿಲ್ಲಿಸಿ ಅದರ ಕಸವನ್ನುಮಾತ್ರ ತಾವು ಹೊಸದುಮಾಡಿಕೊಂಡು ಮೂಲಕೃತಿಪತಿಯ ಖ್ಯಾತಿಯನ್ನು ಪ್ರಚುರಪಡಿಸುವದಕ್ಕೆ ಬದಲಾಗಿ ಅದಕ್ಕೆ ಕುಂದಕವನ್ನು ತಂದು ವಿಶ್ವಾಸಘಾತುಕರಾಗುವರೆನ್ನುವದು. ಆ ಸಾಮತಿಯು ರೂಢಿಯಲ್ಲಿದ್ದರೂ, ಭಾಷಾಂತರಿಸಲುಪಕ್ರಮಿಸುವ ಪ್ರತಿಯೊಬ್ಬನು ಆ ಸಾಮತಿಯನ್ನು ಸುಳ್ಳೆನಿಸಿ ಅದನ್ನು ಹೇಳುವವರ ಬಾಯನ್ನು ಮುಚ್ಚಿಸಬೇಕೆಂಬ ಉದ್ದೇಶದಿಂದಲೇ ಪ್ರಾಯಶಃ ಪ್ರಯತ್ನಿಸುವನು. ಆದರೆ ಆ ಪ್ರಯತ್ನವು ಎಷ್ಟರಮಟ್ಟಿಗೆ ಸಾರ್ಥಕವಾಯಿತುವೆತ್ತೆ ಆಗಬಹುದೆಂದು ಹೇಳಬೇಕಾದರೆ ಭಾಷಾಂತರಿಸಲ್ಪಡುವ ಎರಡು ಭಾಷೆಗಳಿಗೂ ಇರುವ ಪರಸ್ಪರ ಅನುಕೂಲ ಅನನುಕೂಲಗಳನ್ನು ಗಣಿಸಗೆತರದೆ ಹೇಳುವದಕ್ಕಾಗುವದಿಲ್ಲ.

ಈ ಸಾಮತಿಯು ಆ ದೇಶದಲ್ಲಿ ವಾಡಿಕೆಗೆ ಬಂದಾಗ ಆ ಜನಗಳಿಗೆ ನಮ್ಮ ಭರತಖಂಡದ ಭಾಷೆಗಳ ವಿಷಯವು, ಪ್ರಕೃತದಲ್ಲಿ ನಮ್ಮ ಕನ್ನಡ ಭಾಷೆಯ ನಡವಳಿಕೆಯು ತಿಳಿದಿತ್ತೆಂದು ಹೇಳುವದಕ್ಕಾಗುವದಿಲ್ಲ. ಆ ಜನ

ಗಳಿಗಿಪು ತಿಳಿದಿದ್ದರೆ ಈ ಸಾಮತಿಯನ್ನವರು ಹೇಳುತ್ತಲೇ ಇರಲಿಲ್ಲ. ಒಂದುವೇಳೆ ಹೇಳಿದರೂ ತಕ್ಕ ಪ್ರತಿಷೇಧಗಳೊಡನೆ ಹೇಳುತ್ತಿದ್ದರೆನುವದ ರಲ್ಲಿ ಸಂದೇಹವಿಲ್ಲ.

ಭಾಷಾಂತರಿಸಿದ ಕಾವ್ಯವು ನಿಸ್ಸಾರವಾಗಿರಲು ಭಾಷಾಂತರಿಸಲು ಪ್ರತಿಬಂಧಕಗಳಾದ ಕಾರಣಗಳಿದ್ದರೆಹೊರ್ತು ಅಲ್ಲದಿದ್ದರೆ ಆಗಕೂಡದಷ್ಟೆ. ಅಕಾರಣವಾಗಿ ನಿಸ್ಸಾರವಾಗಿದ್ದರೆ ಭಾಷಾಂತರಿಸಿದವನಲ್ಲಿ ತಕ್ಕಯೋಗ್ಯತೆಯಿಲ್ಲವೆಹೊರ್ತು ರಸವತ್ತಾಗಿ ಭಾಷಾಂತರಿಸಲು ತೊಂದರೆ ಏನೂ ಇರುವದಿಲ್ಲ. ಒಬ್ಬನಲ್ಲದಿದ್ದರೆ ಅವನಿಗಿಂತಲು ಬುದ್ಧಿವಂತನಾದ ಮತ್ತೊಬ್ಬನು ಸರಿಯಾಗಿ ಭಾಂಷಾಂತರಿಸಿ ಆ ಸಾಮತಿಯನ್ನು ತಿರಸ್ಕರಿಸುವನು. ನಮ್ಮ ಕನ್ನಡದಲ್ಲಿರುವ ಮುಖ್ಯನಾದ ಗ್ರಂಥಗಳು ಸಂಸ್ಕೃತದಿಂದ ಕನ್ನಡಿಸಲ್ಪಟ್ಟಿರುವವು. ಅವುಗಳಲ್ಲಿ ಕೆಲವು ಮೂಲವಿದ್ದಂತೆ ಕ್ರಮವಾಗಿ ಭಾಷಾಂತರಿಸಲ್ಪಟ್ಟಿರುವವು. ಮತ್ತೆ ಕೆಲವು ಸಂಸ್ಕೃತ ಮೂಲಗ್ರಂಥವನ್ನು ಸಂಕ್ಷೇಪವಾಗಿ ತೆಗೆದುಕೊಂಡು ಕನ್ನಡಕ್ಕೆ ಭಾಷಾಂತರಿಸಲ್ಪಟ್ಟಿರುವವು. ಸಂಸ್ಕೃತಗ್ರಂಥಗಳನ್ನು ಕನ್ನಡಿಸುವಲ್ಲಿ, ನಿಸ್ಸಾರನಾಗಲು ಪ್ರತಿಬಂಧಕಗಳು ಎಷ್ಟರಮಟ್ಟಿಗಿರುವವು? ಆ ಇಟ್ಯಾಲಿಯನ್ ಸಾಮತಿಗೆ ಈ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಅವಕಾಶವಿರುವದು?

(೧) ಮೂಲ ಗ್ರಂಥವನ್ನು ಸಂಸ್ಕೃತದಲ್ಲಿ ಹೇಳಿದವರು, ಯಾವ ಜನರು, ಯಾವ ದೇಶದಲ್ಲಿ, ಯಾವ ಜನಗಳ ಮಧ್ಯದಲ್ಲಿ, ಯಾವ ಪದಾರ್ಥ, ಯಾವ ವಿಷಯಗಳನ್ನು ಕುರಿತು, ಯಾವ ರೀತಿ, ಯಾವ ಬೆಟ್ಟಗುಟ್ಟಗಳಲ್ಲಿ, ಯಾವ ನದಿಗಳ ತಟದಲ್ಲಿ, ಯಾವ ವನಾಂತರಗಳಲ್ಲಿ, ಯಾವ ಋತುಭೇದಗಳಲ್ಲಿ, ಯಾವ ಆಕಾಶಮೋಡಗಳ ಕೆಳಗೆ ಕೂತು ಬರೆದರೊ, ಅವೆಲ್ಲವೂ ಕನ್ನಡಿಗರ ತಿಳುವಳಿಕೆಯಲ್ಲಿರತಕ್ಕವಾಗಿರುತ್ತವೆ.

(೨) ಸಂಸ್ಕೃತದಲ್ಲಿರತಕ್ಕ ಪುರಾಣ, ಇತಿಹಾಸ, ನೀತಿ, ನ್ಯಾಯ, ಮತ, ಆಚಾರವ್ಯವಹಾರಗಳೂ ಕನ್ನಡಿಗರದಾಗೇ ಇರುತ್ತವೆ.

(೩) ಸಂಸ್ಕೃತಗ್ರಂಥಗಳಲ್ಲಿ ಯಾವಯಾವದು ಕಾವ್ಯರಚನೆಯಾಗಿರುವದೋ ಕನ್ನಡದಲ್ಲೂ ಅದೇ ಕಾವ್ಯರಚನೆಯಾಗಿರುವವು.

(೪) ವಾಕ್ಯಬಂಧನ ಕಾವ್ಯಬಂಧನಗಳು, ಸಂಸ್ಕೃತದಲ್ಲಿ ಯಾವರೀತಿ ಇರುವವ್ರೊ, ಕನ್ನಡದಲ್ಲೂ ಅವು ಅದೇ ರೀತಿ ಇರಬಹುದಲ್ಲದೆ, ಸಂಸ್ಕೃತ ವ್ಯಾಕರಣದ ಅನೇಕ ನಿರ್ಬಂಧಗಳು ಕನ್ನಡದಲ್ಲಿಲ್ಲ.

(೫) ಸಂಸ್ಕೃತದಲ್ಲಿರುವ ಅಲಂಕಾರ ಲಕ್ಷಣಗಳೇ ಕನ್ನಡದಲ್ಲಿ ಅಲಂಕಾರ ಲಕ್ಷಣಗಳಾಗಿರುವವು.

(೬) ಸಂಸ್ಕೃತ ಛಂದಸ್ಸೇ ಕನ್ನಡದಛಂದಸ್ಸಾಗಿರುವದು.

ಸಂಸ್ಕೃತವನ್ನು ಕನ್ನಡಿಸುವಲ್ಲಿ ಈ ವಿಷಯಗಳಲ್ಲಿ ಯಾವದೊಂದು ಪ್ರತಿಬಂಧಕವೂ ಇಲ್ಲ. ಭಾಷಾ ವ್ಯತ್ಯಾಸದಿಂದುಂಟಾಗುವ ಶಬ್ದ ವ್ಯತ್ಯಾಸದ ಪ್ರತಿಬಂಧಕ ಒಂದೇ ಇರತಕ್ಕದ್ದು. ಸಂಸ್ಕೃತದಲ್ಲಿ ಕನ್ನಡಕ್ಕಿಂತಲೂ ಶಬ್ದಗಳೂ, ಶಬ್ದಾರ್ಥವೂ, ಶಬ್ದಾರ್ಥದಾರಢ್ಯವೂ ಹೆಚ್ಚಾಗಿರುವದರಿಂದ ಸಂಸ್ಕೃತವು ಕನ್ನಡಕ್ಕಿಂತಲು ಉನ್ನತಸ್ಥಿತಿಯಲ್ಲಿರುವದು. ಭಾಷಾಂತರಿಸಲು ಇದೊಂದೇ ಮುಖ್ಯ ಪ್ರತಿಬಂಧಕವಾಗಿರತಕ್ಕದ್ದು. ಆದರೆ ಇದು ಭಾಷಾಂತರಿಸುವವನಿಗೆ ಎಷ್ಟರಮಟ್ಟಿಗೆ ಪ್ರತಿಬಂಧಕವಾಗಿರುವದು. ಕಾಲವೆಗಳಿಂದ ಗಂಟುಹಾಕಲ್ಪಟ್ಟಿರುವ ಎರಡು ತಟಾಕಗಳಲ್ಲಿ ಹೆಚ್ಚು ನೀರಿರುವ ತಟಾಕದ ನೀರು ಮತ್ತೊಂದು ತಟಾಕಕ್ಕೆ ಹರಿಯುವಂತೆ ಸಂಸ್ಕೃತಶಬ್ದಗಳು ನಿರಂತರವಾಗಿ ಕನ್ನಡಕ್ಕೆ ಬರುತ್ತಲೇ ಇರುವವು. ಹೀಗಿರುವಲ್ಲಿ ಶಬ್ದಾತಿಶಯದಿಂದ ಔನ್ನತ್ಯಸ್ಥಿತಿಯಲ್ಲಿರುವ ಸಂಸ್ಕೃತವನ್ನು ಕನ್ನಡಿಸುವಲ್ಲಿ ಭಾಷಾಂತರಿಸಿದ ಗ್ರಂಥವು ನಿಸ್ಸಾರವ್ಯಾತಕ್ಕಾಗಬೇಕು. ಉನ್ನತಪ್ರದೇಶದಲ್ಲಿರುವ ತಟಾಕವು ಕಾಲವೆಯಿಂದ ಗಂಟುಹಾಕಲ್ಪಟ್ಟಿರುವ ಕೆಳಗಣ ತಟಾಕಕ್ಕಿಂತಲೂ ಎಷ್ಟು ದೊಡ್ಡದಾದರೂ, ಎರಡೂ ತಟಾಕಗಳ ನೀರಿನಲ್ಲಿ ಸಾರವು ನೀರಿನಮಟ್ಟವೂ ಒಂದೇಸಮನಾಗಿರುವದೆ ಹೊರ್ತು ಮತ್ತೆ ಹ್ಯಾಗಿದ್ದೀತು. ಮೇಲಣತಟಾಕದ ನೀರಿನ ಸಾರ ಮಾತ್ರವೇ ಅಲ್ಲದೆ ಕೆಳಗಣ ತಟಾಕದ ನೀರಿನಲ್ಲೇನಾದರು ಸಾರವಿದ್ದರೆ ಅದು ಇದ್ದುಕೊಂಡು ಮೇಲಣ ತಟಾಕದ ಸಾರಕ್ಕಿಂತಲು ಕೆಳಗಣ ತಟಾಕದ ಸಾರವು ಅತಿಶಯವಾಗಿರಬಹುದಷ್ಟೆ. ವ್ಯತ್ಯಾಸವೇನಂದರೆ ಒಂದರಲ್ಲಿ ನೀರು ಹೆಚ್ಚಾಗಿರುವದು ಮತ್ತೊಂದರಲ್ಲಿ ನೀರು ಕಡಮೆಯಾಗಿರುವದು. ಈ

ಕಾರಣದಿಂದ ಸಂಸ್ಕೃತದಲ್ಲಿ ಕನ್ನಡಕಿಂತಲೂ ಬಹಳವಾಗಿ ಗ್ರಂಥಗಳಿರ ಬೇಕೆ ಹೊರ್ತು ಕನ್ನಡಿಸಿದ ಗ್ರಂಥದಲ್ಲಿ ಸಂಸ್ಕೃತದ ಸಾರವಿಲ್ಲದೆ ಇರಲು ಕಾರಣವೇನು ಇಲ್ಲ. ಈ ಸಂದರ್ಭದಲ್ಲಿ ಆ ಇಟಾಲಿಯನ್ ಸಾಮತಿಗೆ ಅವ ಕಾಶವೆಲ್ಲಿರುವದು ?

ಪಂಚದ್ರಾವಿಡಭಾಷೆಗಳಲ್ಲಿ ಒಂದಾದ ಕನ್ನಡವು, ಬಂಗಾಳಿ ಗುಜರಾತಿಯಂತೆ, ಸಂಸ್ಕೃತದಿಂದ ಹುಟ್ಟಿದ ಭಾಷೆಯಲ್ಲದಿದ್ದರು, ನಿರಾ ತಂಕವಾಗಿ ಸಂಸ್ಕೃತಶಬ್ದಗಳನ್ನು ಕನ್ನಡಕ್ಕೆ ತೆಗೆದುಕೊಳ್ಳುತ್ತಿರುವರು. ಸಂಸ್ಕೃತದಲ್ಲಿ ಪಾಂಡಿತ್ಯವಿದ್ದರೇನೆ ಕನ್ನಡದ ಕಾವ್ಯವನ್ನು ಬರಿಯಲುಪ ಕ್ರಮಿಸುವರು, ಸಂಸ್ಕೃತದಲ್ಲೂ ಕನ್ನಡದಲ್ಲೂ ಶಕ್ತರಾದ ಉಭಯಕವಿತಾ ವಿಶಾರದರು ಬರೆದ ಕನ್ನಡ ಗ್ರಂಥಗಳೇ ಕನ್ನಡದಲ್ಲಿ ಮಹಾಕಾವ್ಯವೆನ್ನಿಸಿ ಕೊಂಡು ಶೋಭಿಸುತ್ತಿರುವವು.

ವೃತ್ತ ‖ "ಅಂಭಃಕುಂಭೀನ ಕುಂಭೀನಸ ಮಕರ ಮಹಾಕೂರ್ಮಕೀ
ರ್ಣೋರ್ಮಿಮಾಲಾ| ಜೃಂಭದ್ದಂಭೋಳಿ ಹಸ್ತಾಹತ ಚಕಿತ ಗತ
ಕ್ಷ್ಮಾಧ್ರವಿಸ್ಫಾರವಿದ್ಯು | ತ್ಸಂಭಿಂನಾಭೋಭೃದುದ್ಯತ್ತಟ ಚಟುಳ
ಚಳನ್ಮೀನಫೇನಪ್ರತಾನಂ | ಶುಂಭದ್ಗಂಭೀರವಂ ರಂಜಿಸಿದುದವ
ಮದತ್ತೇಂದ್ರಭದ್ರಂಸಮುದ್ರಂ" ‖

ಮಹಾಕವಿಪ್ರಣೀತವಾದ ಈ ವೃತ್ತವು ಕನ್ನಡಿಗರಿಗೆಲ್ಲರಿಗೂ ಗೊತ್ತೇ ಇರುವದು. ಕನ್ನಡದಕಾವ್ಯಗಳಲ್ಲಿರುವ ಉದ್ದಾಮಪದ್ಯಗಳಲ್ಲಿ ಇದನ್ನು ಒಂ ದೆಂದು ಎಲ್ಲರೂ ಒಪ್ಪುವರು. ಇದೇ ವೃತ್ತವು ಸಂಸ್ಕೃತಕಾವ್ಯಗಳಲ್ಲಿದ್ದರೆ ಆಗ ಈ ವೃತ್ತದಲ್ಲಿ ಎಷ್ಟರಮಟ್ಟಿಗೆ ವ್ಯತ್ಯಾಸ ತೋರುವದು? ಪದ್ಯಕಾವ್ಯ ಮಾತ್ರವೆ ಅಲ್ಲ.—

ಗದ್ಯ.—"ಅದಭ್ರ ಶರದಭ್ರ ಶಕಲವಿಭ್ರಮಾವಹ ಶುಭ್ರಾಂಶುಕಾಂತ ಶಿಲಾ ಕಾಂತನಿರ್ಮಿತಹರ್ಮ್ಯಾಗ್ರಸಿಬದ್ಧ ಧರ್ಮಮಯ ಕೇತನಗಳನಿಸಿದ ನೀಕೇತ ನಂಗಳೊಳಂ ಅಮಂದಮಂದರ ಮಹೀಧರ ಮಥ್ಯಮಾನಪಯೋಧರರಾಶಿರಿಂಗ ತ್ತರಂಗಂಗಳಂತೆ ತರಂಗೊಂಡ ತುರಂಗಗಳೊಳಂ ...."

ಕನ್ನಡ ಗದ್ಯಪದ್ಯಗಳನ್ನು ಬರೆಯಲು ಸಂಸ್ಕೃತಶಬ್ದಗಳ ಅನು

ಕೂಲ ಈರೀತಿ ಇರುವದು ಮಾತ್ರವಲ್ಲದೆ ಭಾಷಾನುಕೂಲದಿಂದ ಸಂಸ್ಕೃತ ಶಬ್ದಗಳನ್ನು ಶ್ಲೇಷಾರ್ಥಗಳಲ್ಲಿ ಪ್ರಯೋಗಿಸಿ ವಾಕ್ಯವನ್ನುರಚನೆಪಡಿಸಿದ್ದರೆ, ಅದೇ ಶಬ್ದವನ್ನು ಅದೇ ಶ್ಲೇಷಾರ್ಥಗಳಲ್ಲೇ ಕನ್ನಡದಲ್ಲೂ ಪ್ರಯೋಗಿಸಿ ಕನ್ನಡ ಕಾವ್ಯವನ್ನೂ ಅದೇ ರೀತಿ ರಚನೆಪಡಿಸುವರು.

ಸಂಸ್ಕೃತದ ಶಬ್ದಗಳ ಸಹಾಯ ಕನ್ನಡಕ್ಕೆ ಈ ರೀತಿ ಇದ್ದು, ಮೊದಲೆಹೇಳಿದರೀತಿ ಸಂಸ್ಕೃತಗ್ರಂಥಗಳನ್ನು ಕನ್ನಡಿಸಲು ಮತ್ಯಾವ ಪ್ರತಿಬಂಧಕಗಳೂ ಇಲ್ಲದೆ ಇರುವಲ್ಲಿ ಆ ಇಟಾಲಿಯನ್ ಸಾಮತಿಯನ್ನು ಹೇಳಲು ಅವಕಾಶವಿರುವದೆ ? ಅದನ್ನು ಹೇಳಿದರೆ ಭಾಷಾಂತರಿಸತಕ್ಕವನು ಹೇಳಿದವನ ಬಾಯಿಮೇಲೆ ಬಡಿದು ಮುಚ್ಚಿಸುವನು.

ಸಂಸ್ಕೃತಾಭಿಮಾನಿಗಳಲ್ಲಿ ಕುಹಕಿಗಳಾದವರು ಯಾರಾದರೂ ಇದನ್ನು ನೋಡಿ, ಈತನಿಗೆ ಸಂಸ್ಕೃತಬರದೆ ಇರುವದರಿಂದ, ಕುರುಡನಿಗೆ ಬೆಳಕಿನ ಸೊಗಸು ತಿಳಿಯದೆ ದೀವಿಗೆಯನ್ನು ಹಿಯ್ಯಾಳಿಸುವಂತೆ ಕನ್ನಡದಲ್ಲಿ ಸಂಸ್ಕೃತಶಬ್ದಗಳನ್ನು ಪ್ರಯೋಗಿಸುತ್ತಿರುವದನ್ನು ವ್ಯಂಗ್ಯಾರ್ಥದಲ್ಲಿ ನಿಂದಿಸುತ್ತಿರುವನೆಂದು ಆಕ್ಷೇಪಿಸಲುಪಕ್ರಮಿಸಿ, ಸಂಪದ್ಯುಕ್ತನಾದ ಸಂಸ್ಕೃತ ಸಹಾಯವಿಲ್ಲದೆ ಬಡಕನ್ನಡವನ್ನು ಬರೆಯುದಕ್ಕಾಗುವದೆ ? ಹಾಗೆ ಬರೆಯಲುಪಕ್ರಮಿಸಿ ಅದು ಅಸಾಧ್ಯವಾಗಿ ಕಂಡು ಸಂಸ್ಕೃತಶಬ್ದಗಳನ್ನು ಇರುವಂತೆಯೇ ತೆಗೆದುಕೊಳ್ಳದೆ, ಅಣ್ಣಯ್ಯನಂತೆ ಅವುಗಳ ಕಿವಿ ಮೂಗುಗಳನ್ನು ಕುಯಿದು ಅವಕ್ಕೆ ಕೊಂಬು ಕೋಡುಗಳನ್ನು ಹುಟ್ಟಿಸುತ್ತ ತದ್ಭವವೆಂದು ಶಬ್ದಗಳನ್ನು ತಬ್ಬಿಬ್ಬು ಮಾಡಿ ಉಪಯೋಗಿಸುವದರಲ್ಲಿ ಗುಣವೇನಿರುವದೆನ್ನಬಹುದು. ಆದರೆ ಕನ್ನಡದಲ್ಲಿ ಸಂಸ್ಕೃತಶಬ್ದಗಳನ್ನು ಪ್ರಯೋಗಿಸುತ್ತಿರುವದನ್ನು ಆಕ್ಷೇಪಿಸುವದು ನನ್ನ ಉದ್ದೇಶವಲ್ಲವೆಂದರೆ ಅದು ಸಾಕಾದ ಉತ್ತರವಲ್ಲವೆಂದವರನ್ನಬಹುದು. ಸಾಮಾನ್ಯವಾಗಿ, ಪ್ರಶ್ನೆಗೆ ಪ್ರಶ್ನೆ ಉತ್ತರವಲ್ಲದಿದ್ದರೂ, ಕೆಲವು ಸಂದರ್ಭದಲ್ಲಿ ಪ್ರಶ್ನೆಗೆ ಪ್ರಶ್ನೆಯೇ ಉತ್ತರವಾಗಿರುವದಲ್ಲದೆ, ಮತ್ತೆ ಪ್ರಶ್ನಿಸಲು ಅವಕಾಶ ಕೊಡದೆ ಇರುವದು. ಬರಿ ಅನ್ನದಲ್ಲೇ ಸಾಕಾದಷ್ಟು ರುಚಿಯಿಲ್ಲದಕಾರಣ ತಿನ್ನುವದಕ್ಕಾಗದು. ಅದರ ಜೊತೆಗೆ ರಸವತ್ತಾಗುವಂತೆ ಸಾರು ತುಪ್ಪವನ್ನು ಸೇರಿಸಿ ಭೋಜನಮಾಡುವ ರೀತಿ

ಯಿಂದ ಬರಿ ಕನ್ನಡದಿಂದಲೆ ಕನ್ನಡ ಕಾವ್ಯವನ್ನು ಬರೆಯುವದಕ್ಕಾಗುವದಿಲ್ಲ; ಪ್ರಯತ್ನಪಟ್ಟು ಬರವರೂ ರಸವತ್ತಾಗುವದಿಲ್ಲ. ಅದರ ಜೊತೆಗೆ ಸಂಸ್ಕೃತ ಶಬ್ದಗಳನ್ನು ಸೇರಿಸಿ ರಸವತ್ತಾಗಿ ಮಾಡಬೇಕೆನ್ನುವವರು; ಅನ್ನ ಸಾರು ತುಪ್ಪಗಳಲ್ಲಿಲ್ಲದ ರುಚಿಗಳನ್ನು ಚಟ್ಟಣಿ ಪಲ್ಯ ಮುಂತಾದವುಗಳಿಂದ ಪರಿಗ್ರಹಿಸಿ ಭೋಜನವನ್ನು ಇನ್ನೂ ರವತ್ತಾಗಿ ಮಾಡಲು ಯಾತಕ್ಕೆ ಆಕ್ಷೇಪಿಸುವರು? ಕನ್ನಡ ಸಂಸ್ಕೃತಗಳೆರಡರಲ್ಲೂ ಇಲ್ಲದ ವಿಷಯಗಳೂ, ಶಬ್ದಗಳೂ, ಶಬ್ದಪ್ರಯೋಗಚಾತುರ್ಯವೂ, ವಾಕ್ಯಬಂಧನ ಕಾವ್ಯಬಂಧನಗಳ ರೀತಿಯೂ, ಲಕ್ಷಣ ಅಲಂಕಾರಗಳೂ, ಕವಿತಾಚಮತ್ಕಾರಗಳೂ, ಹಿಂದುಸ್ತಾನಿ ಇಂಗ್ಲೀಷ್ ಮುಂತಾದ ಇತರ ಭಾಷೆಗಳಿಂದ ತೆಗೆದುಕೊಂಡು ಕನ್ನಡವನ್ನು ರಸವತ್ತಾಗಿ ಮಾಡಿದರೇತಕ್ಕೆ ಆಕ್ಷೇಪಣೆ? ಅನ್ನದಂತಿರುವ ಕನ್ನಡದಲ್ಲೇ ರುಚಿ ಸಾಲದು. ಅದನ್ನು ರಸವತ್ತಾಗಿ ಮಾಡುವದಕ್ಕಾಗಿ ಸಾರು ತುಪ್ಪದಂತೆ ಸಂಸ್ಕೃತವನ್ನು ಬೆರಸಲುದ್ಯೋಗಿಸಿ, ಹೊಂದಲಿ ಹೊಂದದೆ ಇರಲಿ, ಆವಶ್ಯಕವಿರಲಿ ಇಲ್ಲದೆ ಇರಲಿ, ಸಂಸ್ಕೃತಶಬ್ದಗಳನ್ನು ಕನ್ನಡಕ್ಕೆ ಬೆರಸುತ್ತ ಕಡೆಗೆ ಅನ್ನವನ್ನು ಬಿಟ್ಟೇಬಿಟ್ಟು, ಬರಿ ಸಾರ-ತುಪ್ಪವನ್ನೇ ಕುಡಿಕುಡಿದು ಭೋಜನವಾಯಿತೆಂದು ಬಾಯಿ ಸವರುತ್ತಿರುವದು ಭೋಜನವೋ? ಬಾತಾಕಾನಿತನವೋ?

2. ಆ ಇಟಾಲಿಯನ್ ಸಾಮತಿಯನ್ನು ಸಂಸ್ಕೃತಗ್ರಂಥಗಳನ್ನು ಕನ್ನಡಿಸುವ ಸಂದರ್ಭಕ್ಕಾಗಿ ಹೇಳಿದಂತೆ ಕಾಣುವದಿಲ್ಲ. ತಮ್ಮ ನೆರೆಹೊರೆ ಭಾಷೆಗಳಲ್ಲಿ ಭಾಷಾಂತರಗಳು ನಡೆಯುತ್ತಿರುವ ಸಂದರ್ಭಗಳನು ಮಾತ್ರ ಕುರಿತು ಹೇಳಿರಬಹುದು. ಆಯಿತು ಆ ಸಂದರ್ಭದಲ್ಲೂ ಅದು ಎಷ್ಟರ ಮಟ್ಟಿಗೆ ಅನ್ವಯಿಸುವದು?

ಆ ಭಾಷೆಗಳಂತೆಯೇ ನಮ್ಮ ದೇಶದಲ್ಲೂ ಕನ್ನಡ ತೆಲುಗು ಮುಂತಾದ ಭಾಷೆಗಳಿರುವವು ಒಂದಾನೊಂದು ಕಾಲದಲ್ಲಿ ಒಂದೇ ತಟಾಕವಾಗಿದ್ದು ಕಾಲಕ್ರಮದಿಂದ, ಮಧ್ಯದಲ್ಲಿ ಒಂದು ಏರಿ ನಿರ್ಮಿತವಾಗಿ ತಟಾಕದ್ವಯವಾಗಲು, ಒಂದರ ನೀರು ಮತ್ತೊಂದಕ್ಕೆ ಹೋಗಲು ಅವಕಾಶವಿಲ್ಲದೆ ಅವುಗಳ ನೀರಿನಲ್ಲಿ ಪರಿಮಾಣವೂ, ನೀರುಮಟ್ಟವೂ, ಸಾರವೂ, ವ್ಯತ್ಯಾ

ಸಮಾಗಿರಬಹುದಾಗಿರುವಂತೆಯೋ, ಈ ಎರಡು ಭಾಷೆಗಳೂ ಉತ್ಪತ್ತಿ ಕಾಲದಲ್ಲಿ ಒಂದೇ ಆಗಿದ್ದರೂ, ಕಾಲಕ್ರಮದಿಂದ ಎರಡಾಗಿ ಪ್ರತ್ಯೇಕಿಸಲ್ಪಟ್ಟು ಪ್ರತ್ಯೇಕವಾಗಿ ವೃದ್ಧಿಯನ್ನೂ, ಬದಲಾವಣೆಗಳನ್ನೂ ಹೊಂದುತಿರುವವು. ಹೀಗಿರತಕ್ಕ ಭಾಷೆಗಳಲ್ಲಿ ಭಾಷಾಂತರಿಸುವವನು ಆ ಸಾಮತಿಯನ್ನು ನಿರಾಕರಿಸಲು ಪ್ರತಿಬಂಧಕಗಳೇನಿರುವವು? ಅಥವ ಅಂತಹ ಪ್ರತಿಬಂಧಕಗಳಿದ್ದರೂ ಅವು ಎಷ್ಟರಮಟ್ಟಿಗಿರುವವು? ಈ ಭಾಷೆಗಳಲ್ಲೂ ಮೇಲೆ ಹೇಳಿದಂತೆ ಶಬ್ದವ್ಯತ್ಯಾಸದ ಪ್ರತಿಬಂಧಕವೇ ಹೊರ್ತು ಸಂಸ್ಕೃತ ಕನ್ನಡದಂತೆಯೇ ಲಕ್ಷಣ, ಅಲಂಕಾರ, ಛಂದಸ್ಸು, ಪುರಾಣ, ಇತಿಹಾಸ, ಮುಂತಾದ ವಿಷಯಗಳಲ್ಲಿ ಯಾವದೊಂದು ಪ್ರತಿಬಂಧಕವೂ ಇಲ್ಲ. ಈ ಭಾಷೆಗಳ ಛಂದಸ್ಸು ವ್ಯಾಕರಣ ಮುಂತಾದ ಕೆಲವು ಅಂಶಗಳಲ್ಲಿ ಕೊಂಚಕೊಂಚ ವ್ಯತ್ಯಾಸ ತೋರಿದರೂ, ಅವು ಅಲ್ಪವಾಗಿರುವದರಿಂದ ಗಣನೆಗೆ ತೆಗೆದುಕೊಳ್ಳದೆ ಇರಬಹುದು. ನಿರಾತಂಕವಾಗಿ ಸಂಸ್ಕೃತಶಬ್ದವನ್ನು ಕನ್ನಡಕ್ಕೆ ತೆಗೆದುಕೊಳ್ಳುತ್ತಿರುವಂತೆ ತೆಲುಗು ಶಬ್ದವನ್ನು ತೆಗೆದುಕೊಳ್ಳಕೂಡದಾದ್ದರಿಂದ ಈ ಶಬ್ದವ್ಯತ್ಯಾಸದಿಂದುಂಟಾಗುವ ಪ್ರತಿಬಂಧಕವು ಕೊಂಚಮಟ್ಟಿಗೆ ಭಾಷಾಂತರಿಸುವ ಕಾಲದಲ್ಲಿ ತೋರಿಸಿಕೊಳ್ಳದೆ ಇರುವದಿಲ್ಲ. ಆದರೆ ಅಂತಹ ಸಂದರ್ಭಗಳೆಷ್ಟಿರುವವು. ಉನ್ನತಪ್ರದೇಶದಲ್ಲಿರುವ ಆ ಅಪರಿಮಿತವಾದ ಸಂಸ್ಕೃತ ತಟಾಕದ, ಶಬ್ದಕಾವ್ಯರಚನಾ ಸರಣಿಯು ಕನ್ನಡದ ತಟಾಕಕ್ಕೆ ಹರಿದು ಬರುತ್ತಿರುವದು ಮಾತ್ರವೇ ಅಲ್ಲದೆ, ತೆಲುಗಿಗೂ ಅದೇರೀತಿ ಹರಿಯುತ್ತಿರುವದು. ಈ ಸಂದರ್ಭದಲ್ಲಿ ಕನ್ನಡತಟಾಕಕಿಂತಲು ತೆಲುಗು ತಟಾಕದಲ್ಲಿ ನೀರಿನ ಪರಿಮಾಣವೂ ಮಟ್ಟವು ಸಾಲವು ಕಮ್ಮಿಯಾಗಿದ್ದ ಪಕ್ಷದಲ್ಲಿ ಕನ್ನಡ ತಟಾಕಕ್ಕೆ ಕಾಲವೆ ತೆಗೆದವನ ತಪ್ಪಿತವಲ್ಲದೆ ಈ ಎರಡಕ್ಕೂ ಮೂಲಾಧಾರವಾದ ತಟಾಕದದಿಂದ ಬೇರೆ ಅಲ್ಲವಷ್ಟೆ. ಬುದ್ಧಿಶಾಲಿಯಾದವನು ಕಾಲವೆಯನ್ನು ಕ್ರಮಪಡಿಸಿದರೆ ಎರಡು ತಟಾಕಗಳಲ್ಲಿರತಕ್ಕ ವ್ಯತ್ಯಾಸವನ್ನು ಹೋಗಲಾಡಿಸುವದು ಸಾಧ್ಯವೆ. ಈ ಸಂದರ್ಭದಲ್ಲೂ ಆ ಇಟಾಲಿಯನ್ ಸಾಮತಿಗೆ ಅವಕಾಶವೆಲ್ಲಿರುವದು?

ಸಕಲ ಕಾವ್ಯರಚನಾ ಸಹಾಯವೂ ಶಬ್ದಸಹಾಯವೂ ಸಂಸ್ಕೃತದಿಂದ ಕನ್ನಡ ತೆಲುಗುಗಳಿಗೆ ಏಕರೀತಿಯಾಗಿರುವದರಿಂದ ಇವೆರಡು ಭಾಷೆಗ

ಳಲ್ಲೂ ಸಂಸ್ಕೃತಮಿಶ್ರಭಾಗದಲ್ಲಿ ಮಾತ್ರ ವ್ಯತ್ಯಾಸತೋರಲು ಕಾರಣವಿಲ್ಲ. ಆದರೆ ಅಚ್ಚ ಕನ್ನಡ ಅಚ್ಚ ತೆಲುಗು ಭಾಗಗಳಲ್ಲೇ ಕೆಲವು ರಸವತ್ತಾದ ವಿಷಯಗಳಿರುವವು. ಆ ರಸವತ್ತಾದ ಭಾಗಗಳ್ಯಾವುವು?. ದೇಶೀಯಶಬ್ದಗಳು ಆ ಶಬ್ದಗಳ ಪ್ರಯೋಗ ಚಾತುರ್ಯವೇ ಅಲ್ಲವೆ ಮುಖ್ಯವಾದ ಆ ರಸವತ್ತೆಂಬುವ ಭಾಗ? ಅಂತಹ ಶಬ್ದಗಳಿಂದಲೂ ಅವುಗಳ ಪ್ರಯೋಗ ಚಾತುರ್ಯದಿಂದಲೂ ಕಾವ್ಯರಸವತ್ತಾಗುವದು, ಯಮಕ, ಪ್ರಾಸ, ಶಬ್ದಶ್ಲೇಷೆ, ಅರ್ಥಶ್ಲೇಷೆಗಳಲ್ಲಿ ತಾನೇ; ಈ ಸಂದರ್ಭಗಳಲ್ಲಾದರೂ ಆ ಸಾಮತಿಗೆ ಅವಕಾಶ ಉಂಟೋ?

ತೆಲುಗು ಗ್ರಂಥದಲ್ಲಿ ತೆಲುಗುಭಾಷೆಯು ಅನುಕೂಲವಿದ್ದಂತೆ ಕೆಲವು ಸ್ಥಳಗಳಲ್ಲಿ ಶ್ಲೇಷಾರ್ಥಗಳಲ್ಲೂ, ಕೆಲವುಕಡೆ ಯಮಕಪ್ರಾಸಸ್ಥಾನಗಳಲ್ಲೂ, ತೆಲುಗುಶಬ್ದಗಳನ್ನು ಚಮತ್ಕಾರದಿಂದಪ್ರಯೋಗಿಸಿ, ಗ್ರಂಥವನ್ನು ರಚನೆಗೈದಿರಬಹುದು. ಅವನ್ನು ಕನ್ನಡಿಸುವಲ್ಲಿ ಅದೇ ಸ್ಥಾನದಲ್ಲಿ ಅದೇ ಸ್ವಾರಸ್ಯವನ್ನುತೋರಿಸಲು ಕನ್ನಡಭಾಷೆಯು ಅನುಕೂಲಯಿಂದ್ದತೆ ಅದೇ ವಿಧದ ಕನ್ನಡ ಶಬ್ದಗಳು ಸಿಕ್ಕದೆ ಇರಬಹುದು. ತೆಲುಗಿನ ಶಬ್ದವನ್ನು ಕನ್ನಡಕ್ಕೆ ತೆಗೆದುಕೊಳ್ಳಕೂಡದು. ಆದರೆ ತೆಲುಗಿನ ಗ್ರಂಥವನ್ನು ಕನ್ನಡಿಸಿದಲ್ಲಿ ಅದರ ಸ್ವಾರಸ್ಯವೆಲ್ಲ ಕನ್ನಡಗ್ರಂಥದಲ್ಲಿ ಯಾತಕ್ಕಿರಬಾರದು; ತೆಲುಗಿನ ಗ್ರಂಥದ ಹತ್ತನೆ ಪದ್ಯವನ್ನು ಚಕಾರ ಯಮಕಪ್ರಾಸಗಳಿಂದ ತೆಲುಗುಭಾಷೆ ಅನುಕೂಲತೆಯಿಂದಂತೆ ರಸವತ್ತಾಗಿ ಮಾಡಿ ಹನ್ನೆರಡನೆ ಪದ್ಯವನ್ನು ಸಾಧಾರಣವಾಗಿ ಹೇಳಿದ್ದರೆ, ಅವನ್ನು ಕನ್ನಡಿಸುವಲ್ಲಿ ಕನ್ನಡ ಗ್ರಂಥದಲ್ಲಿ ಹತ್ತನೆ ಪದ್ಯವನ್ನು ಸಾಧಾರಣವಾಗಿ ಹೇಳಿ ಕನ್ನಡದ ಅನುಕೂಲವಿದ್ದಂತೆ ಹನ್ನೆರಡನೆ ಪದ್ಯವನ್ನು ಚಕಾರವಲ್ಲದಿದ್ದರೆ ಜಕಾರ ಯಮಕ ಪ್ರಾಸಗಳಿಂದ ರಸವತ್ತಾಗಿ ಮಾಡಿ ತೆಲಗಿನ ಕಾವ್ಯದ ಜೊತೆಗೆ ತರಬಹುದಷ್ಟೆ. ತೆಲುಗಿನಲ್ಲಿ ಯಾವದಾದರು ಒಂದು ಸ್ಥಳದಲ್ಲಿ ಯಾವದಾದರು ಒಂದು ತೆಲುಗುಶಬ್ದವನ್ನು ಶ್ಲೇಷಾರ್ಥಗಳಿಂದ ಪ್ರಯೋಗಿಸಿ ಚಮತ್ಕಾರ ತೋರಿಸಿದ್ದಲ್ಲಿ ಕನ್ನಡಭಾಷೆಯಲ್ಲಿ ಅದೇ ರೀತಿ ಹೇಳಲು ಅನುಕೂಲವಿಲ್ಲದಿದ್ದರೆ, ಅನುಕೂಲಪಟ್ಟ ಸ್ಥಳದಲ್ಲಿ ಅದಕ್ಕೆ ಅತಿಶಯವಾಗಿಲ್ಲದಿದ್ದರೂ ಅದೇ ಸ್ವಾರಸ್ಯವನ್ನು ಕನ್ನಡಶಬ್ದದಿಂದ ತೋರಿಸಬಹುದಷ್ಟೆ. ಅನೇಕವಾಗಿದ್ದರೆ ಹೊರ್ತು ಒಂದೆರಡು ಪದ್ಯಗಳನ್ನು ಗ್ರಂಥವೆನ್ನುವದಿಲ್ಲ. ಮೂಲಗ್ರಂಥದ ಯಾವಭಾಗದಲ್ಲಿ ಸ್ವಾರಸ್ಯವು ಒಪ್ಪುವದೋ

ಭಾಷಾಂತರಿಸಿದ ಗ್ರಂಥದ ಆ ಭಾಗದಲ್ಲಿ ಇಲ್ಲದಿದ್ದರು, ಭಾಷಾಂತರಿಸಿದ ಒಟ್ಟು ಗ್ರಂಥನಲ್ಲಿದ್ದರೆ ಎರಡು ಗ್ರಂಥಗಳಲ್ಲಿಯೂ ಸ್ವಾರಸ್ಯವೆಂಬುದು ಒಂದೆಯಾಗಿ ತಾನೆ ಇರುವದು. ಜೂಜಿನಲ್ಲಿ ಓಡುವ ಎರಡು ಕುದರೆಗಳಲ್ಲಿ ಕೆಲವು ಹೆಜ್ಜೆಗಳು ಒಂದು ಕುದರೆ ಮುಂದಾಗಿಯು ಮತ್ತೆ ಕೆಲವು ಹೆಜ್ಜೆಗಳು ಮತ್ತೊಂದು ಕುದರೆ ಮುಂದಾಗಿಯು ಇದೇರೀತಿ ಹಿಂದುಮುಂದಾಗುತ್ತ ಓಡುತ್ತಿರಬಹುದು. ಆದರೆ ಪರ್ಯವಸಾನವು ಜಯಸ್ತಂಭದ ಬಳಿ ಬಂದಾಗತಾನೆ ? ಒಂದೇಸಮನಾಗಿ ಎರಡು ಕುದುರೆಗಳೂ ಅಲ್ಲಿಗೆ ಬಂದರೆ, ಗೆದ್ದದ್ದಾವದು ? ಸೋತದ್ದಾವದು? ದಾರ್ಢ್ಯವಿದ್ದರೆ ಕನ್ನಡ ಕುದುರೆಯೇ ಮುಂದಾಗಿ ಯಾತಕ್ಕೆ ಬರಬಾರದು ? ಈ ರೀತಿ ಆ ಇಟಾಲಿಯನ್ ಸಾಮತಿಗೆ ಈಸಂದರ್ಭದಲ್ಲೂ ಅವಕಾಶವಿಲ್ಲವೆಂದು ಹೇಳಿದರೆ ಕೆಲವರು ಒಪ್ಪದಿರಬಹುದು. ಆದರೆ ಆ ಸಾಮತಿಯನ್ನು ಪ್ರತಿಷೇಧಗಳೊಡನೆ ಹೇಳಬೇಕೆನ್ನುವದರಲ್ಲಿ ಕೊಂಚವೂ ಸಂದೇಹವಿಲ್ಲ. ಪ್ರತಿಷೇಧಗಳನ್ನು ವಿವರಿಸುವಾಗ ಮೂಲಸೂತ್ರವೆ ಕರಗಿಹೋಗುವವೊ ಇಲ್ಲವೋ ವಾಚಕರೇ ಆಲೋಚಿಸಿಕೊಳ್ಳಬಹುದು.

ಆದರೆ ಈ ರೀತಿ ರಸವತ್ತಾಗಿ ಭಾಷಾಂತರಿಸಬೇಕಾದರೆ, ಕರ್ಣಾಟ ಸಂಸ್ಕೃತ ನಿಘಂಟು ವ್ಯಾಕರಣಗಳನ್ನ ಗಟ್ಟಿಮಾಡಿಕೊಂಡು, ಶಬ್ದಗಳ ಮಗ್ಗವನ್ನು ಹಾಕಿ ಪದ್ಯಗಳನ್ನು ನೇಯುತ್ತ, ಶಬ್ದಾಟೋಪವನ್ನು ಮಾಡುವವರಿಂದ ಸಾಧ್ಯವಲ್ಲ. ನಾಗವರ್ಮ ಹೇಳುವಂತೆ ನಿಜವಾದ ಕವಿತಾಶಕ್ತಿಯಿದ್ದರೇನೆ ಇದು ಸಾಧ್ಯ.—

ಕಂ ॥ " ಮಳೆಯಿಲ್ಲದೆ ಪೊಯ್ದನೀರಿಂ ।
ಬೆಳಗುಮೆಂಥರೆ ಮರುಗಿ ಕುದಿದು ಶಾಸ್ತ್ರದ ಬಲದಿಂ ॥
ದಳುಪಿಂ ಪೇಳ್ದೊಡಮದುಕೋ ।
ಮಳಮಕ್ಕುಮೆಸಹಜಮಿಲ್ಲದಾತನಕಬ್ಬಂ ॥ "

೫. ಆ ಇಟಾಲಿಯನ್ ಸಾಮತಿಯು ಯಾವ ಸಂದರ್ಭಕ್ಕಾಗಿ ಹುಟ್ಟಿತೊ ಆ ಸಂದರ್ಭದಲ್ಲಿ ಅದು ಅನ್ವಯಿಸುವದು ಕೊಂಚವಾಗಿದ್ದರೂ, ಮತ್ತೆ ಇನ್ನ್ಯಾವ ಸಂದರ್ಭದಲ್ಲಾದರು ಅದು ಅನ್ವಯಿಸುವದೆ ? ಪ್ರಾಯಶಃ ಅದು ರೂಢಿಗೆ ಬಂದಾಗ ಆ ಜನಗಳಿಗೆ ಕನ್ನಡವೆಂಬ ಭಾಷೆಯೊಂದಿರುವದು.

ಆದಕ್ಕೆ ಇಂಗ್ಲೀಷಿನ ಮಹಾಗ್ರಂಥಗಳನ್ನು ಭಾಷಾಂತರಿಸತಕ್ಕ ಪ್ರಮೇಯು ಬಿಳಬಹುದೆಂಬದಾಗಿ ಗೊತ್ತಿರಲಾರದು. ಅಂತಹ ಕಾಲ ಈಗ ಒದಗಿರುವದರಿಂದ ಈ ಸಂದರ್ಭದಲ್ಲಾದರು ಅದು ರೂಢಿಗೆ ಬಂದದ್ದು ಸಾರ್ಥಕವಾಗಿರುವದೊ? ಇಂಗ್ಲೀಷು ಗ್ರಂಥವನ್ನು ಕನ್ನಡಿಸುವಲ್ಲಿ ಪ್ರತಿಬಂಧಕಗಳೇನಾದರು ಉಂಟೊ? ಇದನ್ನು ಭಾಷಾಂತರಿಸೇ ತಿಳಿಯೋಣ.—

"The summer sun, whose early power
Was wont to gild Matilda's bower,
And rouse her with his matin ray
Her dutious orisons to pay,
That morning sun has three times seen
The flowers unfold on Rokeby green,
But sees no more the slumbers fly
From fair Matilda's hazel eye."

....

ಸಂಸ್ಕೃತಗ್ರಂಥಗಳನ್ನು ಕನ್ನಡಿಸುವಲ್ಲಿ ಕನ್ನಡಕ್ಕೆ ಸಂಸ್ಕೃತ ಸಹಾಯು ವಿರುವಂತೆ ಇದನ್ನು ಇಂಗ್ಲೀಷು ಸಹಾಯದಿಂದ ಕನ್ನಡಿಸಿದರೆ ಆ ಸಾಮತಿಗೆ ಇಲ್ಲೂ ಅವಕಾಶವಿರುವದಿಲ್ಲ. ಆದರೆ ಆ ರೀತಿ ಕನ್ನಡಿಸುವದಕ್ಕಾಗುವದಿಲ್ಲವೆನ್ನಬಹುದು. ಯಾತಕ್ಕಾಗುವದಿಲ್ಲ?

ಸಮ್ಮರ್‌ಸನ್ನಿನರ್ಲಿಪವರುಂ।
ಯೂಜ್ವುಗಿಲ್ಡ್‌ಮೆಟಿಲ್ಡಬವರಂ।
ಅಂಡ್ ರೌಜ್ ಹರ್ ತನ್ನಾಮ್ಯಾಟಿನ್‌ರೇಯೊಳ್।
ಹರ್‌ಡ್ಯೂಟಿಯಸ್ ಆರಿಜನ್ಸ್‌ಟಪೇಯಲ್।

....

ಎಲೈ ಮಿತ್ರರಾದ ವಾಚಕರೆ! ಇದನ್ನು ನೋಡಿ ನೀವು ನಗದಿರಿ. ಮೊದಲು ಉದಾಹರಿಸಿದ ವೃತ್ತವಚನಗಳಲ್ಲಿರುವ ಕನ್ನಡಕ್ಕಿಂತಲು ಇದರಲ್ಲಿ ಕನ್ನಡ ಕಡಮೆಯಾಗಿಲ್ಲ. ಅವುಗಳಲ್ಲಿ ಸಂಸ್ಕೃತವೂ ಸಂಸ್ಕೃತಕಾವ್ಯ

ರಚನಾಸಹಾಯವೂ ಇರುವದಕ್ಕಿಂತ ಹೆಚ್ಚಾಗಿ ಇದರಲ್ಲಿ ಇಂಗ್ಲೀಷೂ ಇಂಗ್ಲೀಷು ಕಾವ್ಯರಚನೆಸಹಾಯವೂ ಇಲ್ಲ. ಆರೀತಿ ಬರೆದರೆ ಯಾತಕ್ಕೆ ಒಪ್ಪುತ್ತೀರಿ ? ಈ ರೀತಿ ಬರದರೆ ಯಾತಕ್ಕೆ ನಗುತ್ತೀರಿ ? ಕೆಲವರಿಗಿದು ಅರ್ಥವಾಗುವದಿಲ್ಲವೆನ್ನಬಹುದು. ಕೆಲವರಿಗೆ ಅದೂ ಅರ್ಥವಾಗುವದಿಲ್ಲ. ಆದರೆ ಈ ಉಭಯ ಕವಿತಾವ್ಯಾಜ್ಯವನ್ನು ನಾನಾ ಭಾಷಾವಿಶಾರದರ ತೀರ್ಮಾನಕ್ಕೆ ಬಿಟ್ಟು ಇದರ ಕನ್ನಡ ಭಾಷಾಂತರವನ್ನು ನಿರೀಕ್ಷಿಸುತ್ತಿರುವಂತೆ ಸಾಧ್ಯನಾದಮಟ್ಟಿಗೆ ಮಾಡಿ ಭಾಷಾಂತರಿಸಲು ಪ್ರತಿಬಂಧಕವೇನಾದರು ಉಂಟೆ ನೋಡೋಣ.—

ಕಂ || ದಿನಮಣಿ ನವಕಿರಣದೊಳೆಲೆ |
ಮನೆಯಂ ಪೊಂಬಣ್ಣಗೈಯ್ಯುತ ಬಸಂತದೊ ಳಾ |
ವನಜಾಕ್ಷಿ ಮೆಟಿಲ್ಡಯನು ಶ |
ಯನದಿಂದೇಳಿಸುವ ಪೂಚಿಸಲವಳುದಯದೊಳ್ |
ಕಂ|| ದಿನಮೂರುಂ ನೋಡಿದನಾ |
ದಿನಮಣಿರೋಕ್ಬ್ಯವನದಲ್ಲಿವಿಕಸಿತಸುಮಮಂ |
ದಿನಮೂರಾಯ್ತಾದಿನಮಣಿ |
ಯನವಕಿರಣನೋಡಿ ನಿದ್ದೆಬಿಟ್ಟೇಳ್ದವಳಂ ||

ಈಗತಾನೆ ಬಂದದ್ದು ಬನ್ತು ! ಇಲ್ಲದ್ದು ಸೇರಿತು ! ನಿನ್ತದ್ದು ನಿನ್ತೇ ಹೋಯಿತು. ಈ ಭಾಷಾಂತರವು ಮೂಲವನ್ನು ಎಷ್ಟರಮಟ್ಟಿಗೆ ವ್ಯಕ್ತಪಡಿಸುತ್ತಿರುವದೊ ರಸಿಕರಾದವರೇ ಗ್ರಹಿಸಿಕೊಳ್ಳುವದು. ಒಂದು ವೇಳೆ ಎಲ್ಲಾ ವಿಷಯದಲ್ಲು ಮೂಲದಂತೆ ಈ ಭಾಷಾಂತರಿಸಿದ್ದಿರುವದೆಂದರು, ಒಂದು ವಿಷಯದಲ್ಲಿದು ಮೂಲದಂತಿಲ್ಲವೆಂದು ಸ್ಪಷ್ಟವಾಗಿ ಕಾಣುತ್ತಿರುವದು. ಹತ್ತಿದಕೂಡಲೆ ಮೇಲಿರತಕ್ಕ ಸವಾರನನ್ನು ಲಕ್ಷಿಸದೆ ತನ್ನ ಸೊಕ್ಕು ಅಡಗುವವರಿಗೂ, ತಾನೇತಾನಾಗಿ ಓಡುವ ಕೊಬ್ಬಿದ ತೇಜಿಯಂತೆ ಓದಲುಪಕ್ರಮಿಸಿದವನನ್ನೇ, ತಾನಾಗಿ ಎಳದುಕೊಂಡು ಹೋಗುತ್ತಿರುವ ಆ ಸರ್ ವಾಲ್ಟರ್ ಸ್ಕಾಟಿನ ಪದ್ಯದ ಹಿಂದೆ, ಈ ಕನ್ನಡದ ಕಂದಪದ್ಯಗಳು ಕುಂಟುಕತ್ತೆಯಂತೆ ಎರಡು ಅಡಿಗಳಿಗೊಂದುಸಲ ಕುಂಟುತ್ತಿರುವದು, ವ್ಯಕ್ತ

ವಾಗಿದೆ. ಕನ್ನಡಿಸುವವನ ಬಾಯಲ್ಲಿ ಸಂಸ್ಕೃತದ ಸುಲಿದ ಬಾಳೆಹಣ್ಣಿಗೆ ಬದಲಾಗಿ ಈ ಗಂಟು ಲಗಾವ್ಯಾತಕ್ಕಿರುವದು ? ಛಂದೋವ್ಯತ್ಯಾಸದಿಂದಲೇ ಅಲ್ಲವೆ ? ಈಗ ಭಾಷಾಂತರಿಸಿದ್ದು ಸರ್ವಸಾಮಾನ್ಯವಾದ ಪದ್ಯ. ಈ ಕೆಳಗಿನ ಲಾರ್ಡ್ ಟೆನಿಸನ್ನಿನ ಪದ್ಯವನ್ನು ಪ್ರಯತ್ನಿಸಿದರೆ ಗತಿಯೇನು.—

"Half a league, half a league,
Half a league onward
All in the valley of Death
Rode the six hundred
'Forward, the Light Brigade!
Charge for the guns!' he said:
Into the Valley of Death
Rode the six hundred."

. . . .

ಇದರಮುಂದೆ ಆ ಕನ್ನಡ ಕುಂಟುಕತ್ತೆಯು ಬೆನ್ನಿನಮೇಲೆ ಕರ್ಣಾಟಕದಲ್ಲಿರುವ ಈಚಲು ಚಬ್ಬೆಗಳನ್ನೆಲ್ಲಾ ಮುರಿದರೆ ತಾನೆ ಸಾಗುವದೆ ?

ಕಾವ್ಯಕ್ಕೆ ಅಂದಕೊಡತಕ್ಕ ಅನೇಕ ಅಂಗಗಳಲ್ಲಿ ಛಂದಸ್ಸು ಒಂದಾಗಿರುವದು. ಇದೇ ರೀತಿ ಲಕ್ಷಣ, ಅಲಂಕಾರ, ಉಪಮಾನ, ಪುರಾಣ, ಇತಿಹಾಸ, ನೀತಿ, ನ್ಯಾಯ, ಮತ, ಆಚಾರ, ವ್ಯವಹಾರಗಳು, ವ್ಯತ್ಯಾಸವಾಗಿರುವಲ್ಲಿ ಭಾಷಾಂತರಿಸುವವನ ಪಾಡೇನು ? ಮೊದಲು ಶಬ್ದಗಳ ಅನಕೂಲತೆ ಹ್ಯಾಗಿರುವದು ? ಇಂಗ್ಲೀಷಿನ ಒಂದು ಶಬ್ದವನ್ನೂ ಕನ್ನಡಕೆ ತೆಗೆದುಕೊಳ್ಳಲು ಅಧಿಕಾರವಿಲ್ಲ. ಚಿಂತೆಯಿಲ್ಲ. ಕನ್ನಡದಲ್ಲಾದರೂ ಇಂಗ್ಲೀಷಿಗೆ ತಕ್ಕ ಶಬ್ದಗಳು ದೊರಕುವವೋ ? ಪ್ರಪಂಚದಲ್ಲಿ ರಸವತ್ತಾಗಿರುವ ವಿಶಿಷ್ಟಭಾಷೆಗಳನ್ನೂ ಸಂದಿಸುತ್ತಿರುತ್ತಾ ಆ ಭಾಷೆಗಳಲ್ಲಿರತಕ್ಕ ಅಸಾಧಾರಣವಾದ ಶಬ್ದಗಳನ್ನೂ ಅವರಕಾವ್ಯಗಳ ರಚನಾಚಮತ್ಕಾರಗಳನ್ನು ತೆಗದುಕೊಂಡು ಮತ್ತೆ ತೆಗದುಕೊಳ್ಳುತ್ತ ಸಮುದ್ರದಂತಾಗಿರುವ ಇಂಗ್ಲೀಷುಭಾಷೆಯ ಶಬ್ದಗಳಿಗೆ ಸಾಮಾನ್ಯ ವಿಷಯವನ್ನು ಬರಿಯಬೇಕಾದರೂ ಹತ್ತುಪಂಗ್ತಿಗೆ

ಹದಿನಾರುಕಡೆ ಪರಭಾಷೆಯ ಸಹಾಯವನ್ನಪೇಕ್ಷಿಸುವ ಕನ್ನಡದಲ್ಲಿ ಸಮಾನಾರ್ಥವನ್ನು ಕೊಡುವ ಪ್ರತಿಶಬ್ದಗಳನ್ನು ದೊರಕಿಸಿಕೊಳ್ಳಬೇಕು. ಇಲ್ಲದಿದ್ದರೆ ಸಂಸ್ಕೃತದಲ್ಲಿ ಹುಡಕಬೇಕು. ಆ ಸಂಸ್ಕೃತವೊ ಭರತಖಂಡದಲ್ಲೇ ಹುಟ್ಟಿ, ಬೆಳದು, ಲಯವಾಗಿ, ಸಾವಿರಾರುವರುಷಗಳಾಯಿತು. ಈಗ ಇಂಗ್ಲೀಷು ಅದರ ಸಾರವನು ತೆಗೆದುಕೊಂಡಿರುವದಲ್ಲದೆ ಪ್ರತಿದಿನವೂ ಬೆಳೆಯುತ್ತಲೇ ಬರುತ್ತಿರುವದು. ಇಂತಹ ಭಾಷೆಯ ಉತ್ತಮ ಗ್ರಂಥವನ್ನು ಆ ಸಾಮತಿಗೆ ಎಡೆಗೊಡದೆ ಕನ್ನಡಿಸಬೇಕೆನ್ನುವದು ಆ ಇಂಗ್ಲೆಂಡ್ ದೇಶವಿರತಕ್ಕ ಪಶ್ಚಿಮ ಸಮುದ್ರದ ನೀರನ್ನು ನಮ್ಮ ಕರ್ಣಾಟಕದ ರಾಜಧಾನಿಯ ದೊಡ್ಡ ಕೆರೆಗೆ ತರಲು ಮಧ್ಯದಲ್ಲಿರತಕ್ಕ ಅನೇಕ ಸಾವಿರ ಮೈಲಿಗಳ ನೆಲವನ್ನೂ, ಅನೇಕ ಉನ್ನತಪರ್ವತಗಳನ್ನೂ, ಅಗಾಧವಾದ ನದಿಗಳನ್ನೂ, ಅಘೋರವಾದ ಅರಣ್ಯಗಳನ್ನೂ, ದಾಟಿಸಿ ಬರುವಂತೆ ಕಾಲುವೆಯನ್ನು ತೆಗೆಯಬೇಕೆಂದು ಪ್ರಯತ್ನಪಟ್ಟಂತಲ್ಲವೆ? ಅದನ್ನು ನಮ್ಮ ದೊಡ್ಡ ಕೆರೆಗೆ ತಿರುಗಿಸಿದರೆ ನಮ್ಮ ಈಗಿನ ಕೆರೆಯು ಅದರ ಪ್ರವಾಹವನ್ನು ಹಿಡಿಯುವದು ಎಲ್ಲಾದರೂ ಹೋಗಲಿ; ಕೆರೆಯೇ ಉಳಿಯುವದೊ ಕೊಚ್ಚಿಹೋಗುವದೊ?

ಇನ್ನೂರ ನಲವತ್ತು ಕೋಟಿ ಪ್ರಜೆಗಳಿಂದ ಕೂಡಿದ ಭರತಖಂಡದ ಸಾಮ್ರಾಜ್ಯಕ್ಕಿಂತಲೂ ಅತಿಶಯವಾದ, ಆ ಕವಿರಾಜ ಸಾರ್ವಭೌಮನಾದ, ಷೇಕ್‌ಸ್ಪೀರ್ ಇಂತಾ ಇಂಗ್ಲೀಷ್‌ಭಾಷೆಯ ಅನುಕೂಲಗಳು ಸಾಲದೆ ಇದ್ದ ನಿರ್ಬಂಧಗಳನ್ನೆಲ್ಲ ಉಲ್ಲಂಘಿಸಿ ಮನಸ್ಸಿ ಬರೆದದ್ದು, ಛಂದಸ್ಸಿಗೂ, ವ್ಯಾಕರಣಕ್ಕೂ, ಶಬ್ದಾರ್ಥಕ್ಕೂ, ವಿರುದ್ಧವಾಗಿರುವದೆಂದು ಹೇಳಲು ಪಂಡಿತರಿಗೆ ಶಕ್ತಿ ಸಾಲದೆ ಅವನು ಬರೆದದ್ದೇ ಛಂದಸ್ಸು, ಅವನು ಬರೆದದ್ದೇ ವ್ಯಾಕರಣ, ಅವನು ಕೊಟ್ಟ ಅರ್ಥವೇ ಶಬ್ದಾರ್ಥವೆಂದು, ಷೇಕಸ್ಪೀರ್ ಛಂದಸ್ಸು, ಷೇಕಸ್ಪೀರ್ ವ್ಯಾಕರಣ, ಷೇಕಸ್ಪೀರ್ ನಿಘಂಟುಗಳಿಗೆ ಅವಕಾಶವನ್ನುಂಟುಮಾಡಿ ಹುಟ್ಟಿರುವ ಅವನ ಕಾವ್ಯಗಳಲ್ಲಿ, ವಿಜಾತೀಯವಾದ ಗಂಭೀರತೆಯೂ, ಕಾವ್ಯರಸವೂ, ಉಳ್ಳ ಉತ್ತಮ ಕಾವ್ಯವನ್ನು ಭಾಷಾಂತರಿಸಲು ಈ ಬಡ ಕನ್ನಡದ ಪ್ರಾಸ, ಗಣ, ಮಾತ್ರೆ, ಛಂದಸ್ಸಿನ ಕತ್ತರಿಗೆ ಸಿಕ್ಕಿ ಒದ್ದಾಡಲೇಬೇಕಾದ ಕರ್ಣಾಟಕದ ಸುಂಡಗಳು ಪ್ರಯತ್ನಿ

ಸುವ ಸಂದರ್ಭದಲ್ಲೇ ಆವಿಸೂಯಸ್ ಪರ್ವತವು ತನ್ನ ಜ್ವಾಲಾವದನ ದಲ್ಲಿ ಆ ಸಾಮತಿಯನ್ನು ಘರ್ಜನಂಗೈಯ್ಯುತಿರುವದು.

ಆದರೆ ವಿಷಯವಿಚಾರಗಳು ಸಮೃದ್ಧಿಯಾಗಿಯೂ ಹಲವು ಬಗೆ ಯಾಗಿಯೂ, ಕಾಲಾನುಗುಣವಾಗಿಯೂ, ಇರುವ ಗ್ರಂಥಗಳನ್ನು ಭಾ ಷಾಂತರಿಸುವಾಗ ಪ್ರತಿಬಂಧಕಗಳು ವಿಶೇಷವಾಗಿರುವದಿಲ್ಲ. ಅವು ಫಲ ವತ್ತಾಗಿರದೆ ಬರೀ ಕವಿತಾಭ್ರಾಂತಿಯಿಂದಲೂ, ಶಬ್ದಚಮತ್ಕಾರದಿಂದಲೂ ಕೂಡಿರುವ ಗ್ರಂಥಗಳನ್ನು ಕನ್ನಡಿಸುವಾಗ ವಿಷಯದಲ್ಲಿ ವಿಶೇಷವಿಲ್ಲದೆ ಪದೇಪದೆ ಎಳದಾಡಿ ಬೇಜಾರಾಗಿರುವ ಸಂಗತಿಗಳನ್ನು ಗೊತ್ತಾಗುವಂತೆ ಹೇಳಿದರೆ ; ಅಯ್ಯೋ ! ಇದೇನು, ಹೇಳಿದ್ದೇಹೇಳಿದ ಕಿಸುಬಾಯಿದಾಸನೆಂದು ಬಿಡುವರು. ಅದನ್ನು ತಪ್ಪಿಸುವದಕ್ಕೇನೆ, ಇರುವ ಕನ್ನಡ, ಇದ್ದ ಕನ್ನಡ, ಇಲ್ಲದೇ ಇದ್ದ ಕನ್ನಡ, ಇರಬಾರದ ಕನ್ನಡವೂ ಸಾಲದೆ ಕನ್ನಡದ ಜೊತೆಗೆ ಸಂಸ್ಕೃತವನ್ನು ಕರಪಲವಾಡಿಸುತ್ತ ಶಬ್ದಾಟೋಪ ಪಟಾಟೋಪಗಳಲ್ಲಿ ವಿಷಯವನ್ನು ಔಸದಿದ್ದರೆ ಮಾನವುಳಿಯುವದಿಲ್ಲ. ಇಂಗ್ಲೀಷು ಗ್ರಂಥಗಳಿ ರತಕ್ಕ ಪುಸ್ತಕದ ಅನೇಕ ಮಾಡಗಳಲ್ಲಿ ಒಂದು ಮಾಡದ ಒಂದು ಸಾಲಿಗೂ ಸಂಸ್ಕೃತ ಗ್ರಂಥಗಳೆಲ್ಲ ಸಮನಾಗುವದಿಲ್ಲವೆಂದು ಲಾರ್ಡ ಮಕಾಲೆ ಹೇಳು ವದರಲ್ಲಿ ಉತ್ಪ್ರೇಕ್ಷೆಯೂ ಅಹಂಬ್ರಹ್ಮತ್ವವೂ ಇರುವದೇನೋ ನಿಜ. ಆದರೆ ಇಂಗ್ಲೀಷು ಗ್ರಂಥಗಳಲ್ಲಿರುವಷ್ಟು ಸ್ವಾರಸ್ಯ ಸಂಸ್ಕೃತ ಗ್ರಂಥ ಗಳಲ್ಲಿಲ್ಲ; ಷೇಕಸ್ಪೀರಿನಲ್ಲಿರತಕ್ಕ ಸ್ವಾರಸ್ಯ ಕಾಳಿದಾಸನಲ್ಲಿಲ್ಲವೆಂದಾದರೂ ಒಪ್ಪಬೇಕು.

ಸಂಸ್ಕೃತ ಗ್ರಂಥಗಳಲಿ ಮಹತ್ತರವಾದ ಬ್ರಹ್ಮಾಸ್ತ್ರ, ವಿಮಾನ, ತಪೋ ಶಕ್ತಿಗಳು, ಈ ಸಾಪ ಮದ್ದು ಗುಂಡು, ರೈಲ್, ವಿದ್ಯುಚ್ಛಕ್ತಿಗಳಕಾಲದಲ್ಲಿ, ಅದ್ಭುತ ಭ್ರಾಂತಿಗಳಾಗಿ ರುಚಿಸದಿರುವವು. ಇನ್ನೂ ಅವುಗಳನ್ನೇ ಕಟ್ಟ ಕೊಂಡು ಹೆಣಗಾಡದೆ ಕಾಲಾನುಗುಣವಾದ ಗ್ರಂಥಗಳಿಂದಲೂ, ಅವುಗಳ ರೀತಿಯಿಂದಲೂ, ಕನ್ನಡದ ಗ್ರಂಥಗಳನ್ನು ಪ್ರಚುರತೆಗೆ ತರಲು ಆಂಗ್ಲೇಯ ಕರ್ಣಾಟಕ ವಿದ್ಯಾವಂತರು “ ಸಿರಿಗನ್ನಡಂಗೆಲ್ಗೆ ” ಅಂದರೇನೆ ಕನ್ನಡ ವು ಮುಂದೆ ವೃದ್ಧಿಯಾಗುವದು. ಆದರವರು ಕೆಲವು ಮಾತಿನ ಗಿಳಿಗಳು

" ಬೆಕ್ಬಂತ್ ! ಬೆಕ್ಬಂತ್ ! ವ್ಯಾವ್ ! ವ್ಯಾವ್! " ಅಂದರೆ, ಬೆಕ್ಕು ಬಂದರೆ ನಿಮ್ಮನ್ನು ಹೊತ್ತುಕೊಂಡು ಹೋಗುತ್ತೆನ್ನದೆ ಶಬ್ದಾಟೋಪಕ್ಕೆ ಭ್ರಾಂತಿಸುತ್ತಾ, ಅಮ್ಮಮ್ಮ ! ಇದು ಯಾರಕೈಲಾಗುವದು ! " ರಾಮಾಯಣ ಅಂಬೋದು ಸಾಮಾನ್ಯವಲ್ಲ ಆಳಿಗೆ ಆಳು ಹೊರೆ" ಎಂದ ರಸಿಕನಂತೆ " ಕನ್ನಡವೆಂಬೋದು ಸಾಮಾನ್ಯವಲ್ಲ ಕಿವಿ ಒಡೆದು, ಹಲ್ಲು ಉದರಿಹೋಗುವದು" ಇದರ ಗೋಜಿಗೆ ಹೋಗಬಾರದು, ತೊಟ್ಟಿಲ ಬಿಡುವಾಗ ಕಲಿತ ಕನ್ನಡ ಚಟ್ಟಸನೇರುವದಕ್ಕೆ ಮುಂಚೆ ತಾನಾಗಿ ಬಾಯಿಗೆ ಬರುವದು, ನಾವು ಪಟ್ಟವನ್ನಾಳುವಾಗಲೇ-

"My daughter !—oh, my ducats !—oh my daughter !
Fled with a Christian !—oh my Christian ducats!—
Justice ! the law ! my ducats ! and my daughter ! "

ಎನ್ನುತಿರದೆ ಕನ್ನಡದೇಳಿಗೆಯನ್ನು ಮನಸ್ಸಿನಲ್ಲಿಡ ಬೇಕೆಂದು ಅವರನ್ನು ಪ್ರಾರ್ಥಿಸುವದೆ ಈ ಪೀಠಿಕಾಪ್ರಸಂಗದುದ್ದೇಶವು.

ಪ್ರತಾಪರುದ್ರದೇವ ನಾಮಾಂಕಿತದಿಂದ ಕನ್ನಡಿಸಿರುವ ಈ ನಾಟಕದಲ್ಲಿ ಪ್ರಯತ್ನವನ್ನು ಮೀರಿ, ನಿಸ್ಸಾರವಾಗಿರಬಹುದಾದ ಅಂಶಗಳಲ್ಲದೆ; ಒಂದು ವಿಷಯದಲ್ಲಿ ಪ್ರಯತ್ನಪೂರ್ವಕವಾಗಿ ಮೂಲಗ್ರಂಥದ ಮುಖ್ಯರಸ ಭಂಗವನ್ನೆಸಗಿರುವದಕ್ಕಾಗಿ ವಿಷಾದಿಸದೆ ಇರಲಾಗದು. ನೋಟಕರಿಗೆ ತಕ್ಕ ಪಾತ್ರಗಳು, ಪಾತ್ರಕ್ಕೆ ತಕ್ಕವೇಷ, ವೇಷಕ್ಕೆತಕ್ಕಭಾಷೆ, ಭಾಷೆಗೆತಕ್ಕ ನಟನೆಗಳಿಲ್ಲದೆ, ಬೆಳಕುಹುಟ್ಟಿ ಅರಿದಾಳದ ಹರಿ ಹರ ಬ್ರಹ್ಮಾದಿ ದೇವತೆಗಳು ಕಾಲಿಗೆ ಗೆಜ್ಜೆಕಟ್ಟಿ ಮೊದಲೆ ತಾಳಗಳನ್ನು ಹಾಕಿಕೊಂಡು ಜನರೆದುರಿಗೆ ಕುಣಿದುಕುಪ್ಪಳಿಸುವ; ಯಕ್ಷಗಾನದ ಆಟಗಳು ರಸಿಕರಾದವರಿಗೆ ಅಸಹ್ಯವನ್ನುಂಟುಮಾಡುವವೆಂದು, ಮಹಾಕವಿಗಳು ಶೃಂಗಾರಾದಿನವರಸ ಗರ್ಭಿತವಾಗಿ ಛಂದೋಬದ್ಧವಾದ ಕಾವ್ಯಗಳನ್ನು ನಾಟಕ ರೂಪವಾಗಿ ಕಲ್ಪಿಸುವರು. ಪಂಡಿತಪಾಮರ ಹೃದಯ ರಂಜನಶಕ್ತರಾದ ಆ ಕವಿಶ್ರೇಷ್ಠರು, ರಸಪತ್ತಾದ ಛಂದೋಂಬುಧಿಯನ್ನು ಮಥಿಸಿ ತೆಗೆದ ನಾಟಕರತ್ನಗಳಲ್ಲಿರತಕ್ಕ

ಕವಿಹೃದಯವನ್ನೂ, ಕವಿತಾಚಮತ್ಕಾರವನ್ನೂ, ನಟನಾಕೌಶಲ್ಯದಿಂದ ತೋರಿಸಿದರೆ ನೋಟಕರಿಗೆ ಸಾಕಾದಷ್ಟು ಆನಂದವನ್ನುಂಟುಮಾಡುವವು. ಆದರೆ ಕವಿಹೃದಯವನ್ನು ತಾನು ತಿಳಿದ,ಕೊಂಡು,ಅನಂತರ ಪರರಿಗೆ ತೋರ್ಪಡಿಸಲಾರದ ನಟಕನು, ಸಂಗೀತಸಹಾಯದಿಂದ, ಹಾಗು ಹೀಗು ಕಾಲಹರಣ ಮಾಡಬೇಕೆಂದು ಕಕ್ಕಲಾತಿಪಡುವನು. ನಾಟಕಗಳಿಗೆ ಸಂಗೀತ ಸೇರಿಸಿದರೆ ಕೆಲವು ಸಂದರ್ಭಗಳಲ್ಲಿ ಶೃಂಗಾರಾದಿ ಕೆಲವು ರಸಗಳೊಡನೆ ಅದು ಬೆರಸಿಕೊಂಡು ವಿಶೇಷ ಕುಂದಕ ಮಾಡದಿದ್ದರೂ, ಭಯಾನಕಮುಂತಾದ ಮತ್ತೆ ಕೆಲವು ರಸಗಳೊಡನೆ ಅದನ್ನು ಹೇಳಿದರೆ ಸಕ್ಕರೆಗುಪ್ಪನ್ನು ಬೆರಸಿದಂತೆ ರಸಭಂಗವಾಗಿ ಕವಿತಾಚಮತ್ಕಾರವನ್ನೆಲ್ಲಾ ಕೆಡಿಸಿ ನಾಟಕವನ್ನು ಅಸಾರನಾಗಿ ಮಾಡುವದು. ರೌದ್ರಭಯಾನಕ ರಸಪ್ರಧಾನವಾದ ಈ ಪ್ರತಾಪರುದ್ರದೇವನಾಟಕದ ಶಬರಸ್ವಭಾವವನ್ನು ಸಾಧ್ಯವಾದಮಟ್ಟಿಗೂ ಕಮ್ಮಿಮಾಡದೆ ಇರಬೇಕು. ಇದಕ್ಕೆ ಸಂಗೀತ, ಕುಚೋದ್ಯಗಳನ್ನು, ಬೆರಸಿದರೆ ರಸಭಂಗವಾಗುವದಲ್ಲದೆ ಮುಖ್ಯರಸಗಳು ಕಮ್ಮಿಯಾಗುವವು. ಅದುಕಾರಣ ಪಂಡಿತಪಾಮರರಚನೆಯಾಗುವಂತೆ ಸಂಗೀತವನ್ನು ಬಿಟ್ಟು ಸಾಧ್ಯವಾದಮಟ್ಟಿಗೆ ವಚನದೊಂದಿಗೆ ನಾನಾಬಗೆಯಾದ, ಸಮಾಸಮ ಪಾದ ವೃತ್ತಗಳಿಂದಲೂ, ರಗಳೆಗಳಿಂದಲೂ, ಕಾವ್ಯಭಾಗವನ್ನು ಹೇಳಿರುವದು. ಪತ್ರಗಳ ಕೆಳಗಡೆ ಅಧಮಪಕ್ಷಕ್ಕಾಗಿ ಕೊಟ್ಟಿರುವ ಸಣ್ಣ ಅಕ್ಷರದ ರಾಗ ಮಟ್ಟುಗಳನ್ನು ಬಿಟ್ಟು ಕಾವ್ಯಭಾಗದ ಸಾರವನ್ನೇ ಹಿಡಿದು ನಟಿಸಿದರೆ ರಜನೆ ಕೊಡುವದರಲ್ಲಿ ಸಂದೇಹವಿಲ್ಲ. ಆದರೆ ಆರೀತಿ ನಟಿಸಬೇಕೆಂದರೆ ಕೊಂಚಶ್ರಮ ತೆಗೆದುಕೊಳ್ಳಬೇಕು. ಇದನ್ನುಕಂಡು ನಟಿಸತಕ್ಕವರು ಈ ನಾಟಕದ ಗೋಜಿಗೆಹೋಗಿ ಆ ಶ್ರಮವನ್ನು ನಾವ್ಯಾತಕ್ಕೆ ತೆಗೆದುಕೊಳ್ಳಬೇಕು. ಇತರ ನಾಟಕಗಳಿಂದ ನಮಗೆ ಪಾಟ ಹಾಕಿರುವಂತೆ "ಅಂತು ಇಂತು" ಆಟವಾಯಿತು ಭಾಗವತರಿಗೆ ಕೊಟ್ಟದ್ದೆಂತೂ ಸಂತು ಎನ್ನೋಣವೆಂದರೆ, ಇದನ್ನು ನಟಿಸತಕ್ಕವರೇ ಇಲ್ಲದೆ ಕಾನನದ ಬೆಳದಿಂಗಳಂತೆ ಬರೆದದ್ದೂ ವ್ಯರ್ಥವಾಗುತ್ತೆಂದು, ತನಗೆ ಅಸಂಗತವಾಗಿ ತೋರುವದನ್ನು ಉದರಪೋಷಣೆಗಾಗಿ ಸಂಗತವಾದದ್ದೆಂದು ಹೇಳಿಕೊಂಡು ಪರಾಶ್ರಯವನ್ನು ಮಾಡುವವನಂತೆ, ಉತ್ತಮಪಕ್ಷವಲ್ಲದಿದ್ದರೆ ಅಧಮಪಕ್ಷವಾಗಿಯಾದರೂ ಇರಲೆಂದು ಈ ನಟನಾ ಜನ

ಗಳ ಆಶ್ರಯಕ್ಕಾಗಿ ಅವರ ಅನುಕೂಲತೆಗೆತಕ್ಕಂತೆ ಕೆಳಭಾಗದಲ್ಲಿ ಸಣ್ಣ ಅಕ್ಷರಗಳಲ್ಲಿ ಕೆಲವು ಮಟ್ಟುಗಳನ್ನು ಸೇರಿಸಿ ಮಹಾಕವಿಯ ಉತ್ತಮಕಾವ್ಯವನ್ನು ಕೆಡಿಸಿದ್ದಕ್ಕಾಗಿ ಅವನ ಕ್ಷಮಾಪಣೆಯನ್ನಾದರೂ ಬೇಡಬೇಕು.—

ಕಂ ॥ ಪುರಜನರರಿವರೆ ಅಂತಃ ।
ಪುರದೊಳ್ಕಿರೆವ ಕುಲನಾರಿಯರ ಸೊಬಗಂ ಪಾ ।
ಮರರರಿವರೆ ಕವಿಮನದಿಂ ।
ಪೊರಪೊಣ್ಮುವ ಸೊಬಗುವಡೆದ ಸರಸತಿ ಪರಿಯಂ ॥

ಪರಪರಿಚುಂಬಿತ ಸಿಧ್ಮಾ ।
ಧರದಿಂ ಪೊರಸಾರ್ವ ಪಾದರಿಯರರ್ಥವಿಹೀ ।
ನ ರಸಜ್ಞಾಟೋಪ ಕಿವಿಯು ।
ನಿರಿಬುತ್ತಿರೆ ತೂಗುವರ್ತಲೆಯು ಕೋಣನವೋಲ್ ॥

ಸಕ್ಕರೆಗುಪ್ಪಂ ಬೆರಸು ।
ತ್ತುಕ್ಕಿಸಿ ತಿನಲಿಕ್ಕುತಿರ್ಪ ನಟನಾಜನರೀ ।
ಕಕ್ಕುಲತೆಗಾಗಿಯೇ ಚಂ !
ದಕ್ಕಿಕ್ಕಲು ಗೀತವನ್ನುನಾಂ ಮನಮಿತ್ತುಂ ॥

ಇದರಿಂ ಮೆಚ್ಚರು ಮನ್ನಿಸು ।
ಬುಧಜನ ಕವಿರಾಜಸಾರ್ವಭೌಮನೆ ! ನಿನ್ನೀ ॥
ಮುದವೀವ ಕಾವ್ಯಶಶಿಪೊಳೆ ।
ಯದೆ ಗಾನಗ್ರಹಣವಾಗಿ ಕರ್ಣಾಟಕದೋಳ್ ॥

ಈ ನಮ್ಮ "ಅಂತು ಇಂತು" ನಟಕರಲ್ಲಿ ಕೆಲವರು ನಾಡಿಕೆಯಲ್ಲಿರತಕ್ಕ ನಾಟಕಗಳೊಳಗೆ ಗದ್ಯದ ಬೇಜಾರನ್ನು, "ಅಂತು ಇಂತು" ಹೋಗಲಾಡಿಸಲು ಅಲ್ಲೊಂದಿಲ್ಲೊಂದು ಪದ್ಯಗಳಿರುವವು. ನಮಗೇನೆ ಅವರ ಅಭಿಪ್ರಾಯ ತಿಳಿಯದೆ ಹಾಗೂ ಹೀಗೂ ತಟಾಯಿಸುತ್ತಿರುವೆವು. ಕೇಳತಕ್ಕವರ ಪಾಡು ಕಂಡೇ ಇದೆ; ಅಂತಾದ್ದರಲ್ಲಿ ಈ ನಾಟಕದಲ್ಲಿ ಒಂದೊಂದುಕಡೆಯೇ ಎಂಟು ಹತ್ತು ಪದ್ಯಗಳವರಿಗಿವೆ, ಮುಂದೇನುಗತಿ! ಇವುಗಳ ಸಂಗಡ ಹೆಣಗಾಡಲುಪಕ್ರಮಿಸಿದರೆ ಭಾಗವತರಿಗೆ ದುಡ್ಡು ಹುಟ್ಟತಕ್ಕದ್ದು

ಹಾಸ್ಯಾಗೆನ್ನಬಹುದು. ಆದರೆ ಪದ್ಯಗಳನ್ನು ಈರೀತಿ ಬರೆದಿರುವದು "ಅಂತು ಇಂತು" ಗದ್ಯದ ಬೇಜಾರನ್ನು ಕಳೆಯುವದಕ್ಕಲ್ಲ. "ಅಂತು ಇಂತು" ಗದ್ಯದಿಂದುಂಟಾಗುವ ಬೇಜಾರಿಗೇನ ಅವಕಾಶಕೊಡದೆ ಇರಬೇಕೆಂದು ಬರೆದಿರುವದು. ಸಾಧಾರಣವಾಗಿ ನಾಟಕಗಳಲ್ಲೆಲ್ಲ ಪಾತ್ರಗಳ ಪರಸ್ಪರ ಉಕ್ತಿಪ್ರತ್ಯುಕ್ತಿಗಳ ಚಮತ್ಕಾರವೆ ಇರತಕ್ಕ ಸ್ವಾರಸ್ಯ. "ಕಿಗ್‌ಲಿಯರ್" "ಒಥೆಲೆ" ಮುಂತಾದ ಉತ್ತಮ ನಾಟಕಗಳ ರಚನಾಶಕ್ತಿಯೇ ಇದು. ಆದರೆ ಈ ನಾಟಕವಲ್ಲಿ ರಚನಾಸ್ಥಾನಗಳಾಗಿರುವವು ಮುಖ್ಯಪಾತ್ರಗಳ ಸ್ವಯಂಸಂಭಾಷಣೆಯ ಸ್ಥಳಗಳು. ಅಂತಹ ಸ್ವಯಂಸಂಭಾಷಣೆಯೂ ದೀರ್ಘವಾಗಿಯೂ, ವಿಶೇಷವಾಗಿಯೂ ಇರುವವು. ಅನೇಕ ಸಂಗತಿಗಳನ್ನು ಸ್ವಯಂಸಂಭಾಷಣೆಯಲ್ಲಿ ದೀರ್ಘವಾಗಿ ಹೇಳಬೇಕಾದರೆ ಸಾಧ್ಯವಾದಮಟ್ಟಿಗೂ ಕೆಲವು ಮಾತುಗಳಿಂದಲೇ ರಸವತ್ತಾಗಿ ಹೇಳಿ ಜಾಗ್ರತೆ ಪೂರೈಸದಿದ್ದರೆ, ಹುಚ್ಚನಾದವನು ದಾರಿಯಲ್ಲಿ ನಿಂತು ತನ್ನಷ್ಟಕ್ಕೆತಾನೆ ನಿರಂತರವಾಗಿ ಮಾತನಾಡಿಕೊಳ್ಳುವಂತಿರುವದು. ಅನೇಕ ವಿಷಯವನ್ನು ಕೆಲವು ಶಬ್ದಗಳಿಂದ ಹೇಳುವದನ್ನು ಕ್ರಮಪಡಿಸುವದಕ್ಕೇನೆ ಛಂದಶ್ಶಾಸ್ತ್ರ ಹುಟ್ಟಿರುವದು. ಹಾಡುವದಕ್ಕೆ ಪದ್ಯಗಳನ್ನು ಬರಿಯುವದಕ್ಕಲ್ಲ. ಅದುಕಾರಣವೇ ಈ ನಾಟಕದಲ್ಲಿ ದೀರ್ಘಸಂಭಾಷಣೆಯನ್ನು ಪದ್ಯಗಳ ರೂಪದಲ್ಲಿ ಕೆಲವು ಕಡೆ ಬರೆದಿರುವದು. ಇದರಲ್ಲಿರುವ ಪದ್ಯಗಳನ್ನು ಯಾವದಾದರು ಒಂದು ರಾಗ ಧಾಟಿಯನ್ನನುಸರಿಸಿ "ಹಾಗು ಹೀಗು" ತಟಾಯಿಸದೆ ಅನೇಕ ಕಡೆ ಗದ್ಯದಂತೆಯೇ ಹೇಳತಕ್ಕದ್ದು. ಅರ್ಥವನ್ನನುಸರಿಸಿ ಅವಶ್ಯಕವಿದ್ದಕಡೆ ಸಂಧಿಗಳನ್ನು ಬಿಡಿಸಿಕೊಂಡು ಅವುಗಳಲ್ಲಿರತಕ್ಕ ಸಂಗತಿಯನ್ನು ನಟನಾ ಸಹಾಯದಿಂದಲೂ, ಗದ್ಯರೀತಿ ಅರ್ಥಲಾಲಿತ್ಯದಿಂದಲೂ, ಜನರಿಗೆ ತಿಳಿಯುವಂತೆ ಹೇಳಲು ಸುಲಭಭಾಷೆಯಲ್ಲಿರುವವು. ಹೀಗೆ ಅವುಗಳನ್ನು ಹೇಳುವದರಿಂದ, ಸಂಭಾಷಣೆಯು ಲಂಬಿಸಿದ್ದರೂ ಪದ್ಯದ ಗಾಂಭೀರ್ಯವೂ ಗದ್ಯದ ಅರ್ಥಲಾಲಿತ್ಯವೂ ಸೇರುವದರಿಂದ ಕೇಳತಕ್ಕವರಿಗೆ ಇಂಗ್ಲೀಷು "ಬ್ಲ್ಯಾಂಕುವರ್ಸ್"ನಂತೆ ಬೇಜಾರಿಗೆ ಅವಕಾಶಕೊಡುವದಿಲ್ಲ.

ಆದರೆ ಹಾಗೂಹೀಗೂ ತಟಾಯಿಸುತ್ತಿದ್ದ ಪದ್ಯಗಳಿಗೆ ಹೀಗೆಲ್ಲ ಯಾತಕ್ಕೆ ಶ್ರಮಪಡಬೇಕು ? ಸಂಗೀತವನ್ನು ಸೇರಿಸುವದು ಸರಾಗವೆಂದು.-

ಕಪಿಗಳೇ ಅಬ್ಬರಿಸಲಿ, ರಾಕ್ಷಸರೇ ಶಂಖನಾದ್ಯವಮಾಡುತ್ತಿರಲಿ, ಸೀತೆಯೆ ಅಳುತ್ತಿರಲಿ, ರಾವಣನ ತಲೆಗಳೇ ಉದುರುತ್ತಿರಲಿ, ಲಕ್ಷ್ಮಣನೇ ಮೂರ್ಛೆ ಹೋಗಿರಲಿ, ದೇವದುಂದುಭಿಯೇ ಆಗುತ್ತಿರಲಿ, ಅಮ್ಮಂದಿರೆದರಿಗೆ ಆಚಾರ್ಯರು ಯಥಾಪ್ರಕಾರವೇ ಪುರಾಣಹೇಳುತ್ತಿರುವಂತೆ ಪದ್ಯಗಳನ್ನು ಹೇಳಲು ಪಕ್ರಮಿಸಿ, ಅವು ಹೆಚ್ಚಾಗಿ ಕಂಡುಬಂದರೆ ಆ ತಪ್ಪಿಗೆ ಭಾಗವತರೇ ಗುರಿಯಾಗಿರುವರು.

ಕಂದವನ್ನು ಗದ್ಯದಂತೆ ಹೇಳುವ ಪಕ್ಷಕ್ಕೆ ಕಂದದ ಧಾಟಿಯೇನಾಗಬೇಕೆಂದು ಕೆಲವರನ್ನಬಹುದು. ಕಂದ ಪದ್ಯಕ್ಕೆ ಧಾಟಿ ಎಂದರೇನು? ಬರೆದವನ ಅರ್ಥಾತಿಶಯವನ್ನನುಸರಿಸಿ ಓದುವದಲ್ಲದೆ ಪ್ರತ್ಯೇಸ್ಯಾವ ಧಾಟಿಯನ್ನು ಸೂತ್ರಿಸಿರುವದು? "ಕನ್ನಪಕ್ಕೆ ಯತಿಯಿಲ್ಲ ಕೋಣನಿಗೆ ಮತಿಯಿಲ್ಲ" ಎಂದು ತಿಳಿಯದೆ ಕಂದಪದ್ಯದಲ್ಲೂ ಯತಿಹುಡುಕುವ ಗತಿ ಕೆಟ್ಟವರ ಅರಣ್ಯರೋದನವನ್ನು ಕುರಿತು ತಾನೇ ಕವಿರಾಜಹಂಸನು ಹಾಸ್ಯಮಾಡುತ್ತಿರುವದು.—

ಕಂ || "ಮಾಸಿತಪದಮಂ ಪದಸಂ |
ಧಾನಮನರ್ಥ ಪ್ರತೀತಿಯುಂ ಕವಿಸ್ಕೃದಯು ||
ಸ್ಥಾನವನರಿಯದದೇಂ ಕ |
ಣ್ಣೀನೆಯು ಕರಡಿಯುಪ್ರಾಲೊರಲುವಂ ವಾಚಕನೇ" ||

ಆದರೆ ಈ ಪದ್ಯಗಳನ್ನು ಪಾಠಕರು ಕಂಡು, ಇದೇನು! ಪದ್ಯಗಳು ಹೀಗೇನೇ ಇರತಕ್ಕದ್ದು? 'ತರಿಪುರಕೆಹೋಗಿಬರುವನು' ಎಂದು ನಾಲ್ಕು ಮಾತ್ರೆಯ ಮೂರುಗಣವಿದ್ದಮಾತ್ರಕ್ಕೆ ಪದ್ಯವೊಂದು ಪಾದವಾಯಿತೆ? "ಕಂ || ತುಂಗತುರಂಗಗ್ರೀವಾ | ಸಂಗಿಸಟಾಪಟ್ಟ ಪಟಲಸಂಕಾಶಪರಿ|| ತ್ವಂಗತ್ತರಂಗ......" ಎನ್ನುವವಮಟ್ಟಿಗಿಲ್ಲದಿದ್ದರೂ, "ವೃತ್ತ || ಶಾತಂ ಶಸ್ತ್ರಂಗೊಳಲಿಪ್ಪಂಗದುದದಪದೆಸೀಂಕಂಡುತಕಾಪ್ರೆಶ್ಯಾರ್ಗವಂಸಾ | ದರ್ಗಿತ ಕರ್ಣಂ........."ಎನ್ನುವಮಟ್ಟಿಗಾದರೂ ಇರಬಾರದೆ? ಈ ಗದ್ಯದಂತೆ **ಹೇಳಬೇಕಾದ ಪದ್ಯಗಳಲ್ಲಿ, "ಪದಚ್ಛೇದ ಪದವಿಭಾಗವನ್ನು ಮಾಡತಕ್ಕದ್ದೇನಿರುವದು?" 'ಪ್ರತಿಪದಾರ್ಥಗಳನ್ನು ಹೇಳತಕ್ಕದ್ದೇನಿರುವದು?' ಕನ್ನ**

ಡದಲ್ಲಿ ಅನೇಕವಾಗಿ ಇರಬೇಕಾದದ್ದಿವು. ಕಲಿಸತಕ್ಕದ್ದೂ, ಕಲಿಯತಕ್ಕದ್ದೂ, ಕೇಳತಕ್ಕದ್ದೂ ಮುಖ್ಯವಾಗಿವುತಾನೆ? ಅಷ್ಟೇ ಇಲ್ಲವಲ್ಲ. ಇದರಲ್ಲಿ ತಿಳಿದುಕೊಳ್ಳತಕ್ಕದ್ದೇನಿರುವದು. ಒಂದುಸಲ ಓರೆಗಣ್ಣಿನಿಂದನೋಡಿ ಮುಂದಕ್ಕೆ ಸವಾರಿಬೆಳಸಿ ಎನ್ನಬಹುದು. ಶಬ್ದಗಳಿಗಾಗಿಯೇ ಕಾವ್ಯಗಳನ್ನು ಬರೆಯುತ್ತ ಶಬ್ದಪರಿಚಿತಿಗಾಗಿಯೇ ಕನ್ನಡವಕಾವ್ಯಗಳನ್ನೋದುತ್ತಿರುವವರ ಈ ಆಕ್ಷೇಪಣೆಗೆ ಸಮಾಧಾನಹೇಳೋಣವೆಂದರೆ ಮೂಲಗ್ರಂಥವಲ್ಲೇ 'ಪದಚ್ಛೇದ' 'ಪದವಿಭಾಗ' 'ಪ್ರತಿಪದಾರ್ಥಗಳಿಲ್ಲ' ಇವೆಲ್ಲ ಪೂರೈಸಿದನಂತರ ಮತ್ತಿನ್ನೇನಾದರೂ ಕಾವ್ಯಗಳಲ್ಲಿರಬೇಕಾದರೆ ಅವುಗಳನ್ನು ತಿಳಿಯಲು ಸಾವಧಾನವಾಗಿ ಪರಿಶೋಧಿಸುವ ಶ್ರಮವುಂಟಾದೀತು. ಸಾಮಾನ್ಯವಾಗಿ ಯಾವದೊಂದು ವಿಶೇಷವು ತೋರದೆ ಸಾಧಾರಣವಾಗೊಂದರ್ಥವಾಗುತ್ತಿದ್ದರೂ, ಕಥಾಸಂದರ್ಭ, ಪಾತ್ರಸ್ವಭಾವ, ಪದಪ್ರಯೋಗ, ಸಮಯಗಳಿಂದ ತೋರುವ ವ್ಯಂಗಾರ್ಥ, ಭಾವಾರ್ಥಗಳನ್ನು, ಅನ್ವಯಗಳನ್ನು, ಗ್ರಹಿಸುವಲ್ಲಿ ಅಸಾಧಾರಣವಾದ ಶಾಸ್ತ್ರ, ನ್ಯಾಯ, ವ್ಯವಹಾರಗಳ, ಪರಿಚಿತಿಬೇಕಾದೀತು.

"ಕಂ ॥ ಧೃಡವಾದಪೊಡವಿಯೇ! ಸಿಂ।
ಗುಡುಗದಿರೀಗಡಿಯ ನಾನಿಡಲ್ವದಹತಿಯಿಂ ॥
ನಡಗುತೆ ನೀನೀಕಾವಳ।
ಗಡಣಂಗೈದಿರ್ಪ ಭುವನಕಲಕದಿರೀಗಳ್ ॥"

ಗ್ರಹಿಸಬೇಕೆಂದರೆ ಸಾಧಾರಣವಾಗಿ ಕಾಣುವ ಈ ಪದ್ಯದಲ್ಲೇ ವಿಶೇಷಗುಣ ತೋರಬಹುದು. ಇವರಂತೆಯೇ ಹಲವುಕಡೆ ಇರಬಹುದು. ಈ ವಿಷಯದಲ್ಲಿ ಮೂಲವನ್ನು ತಡಕಾಡಿದರೆ ಯಾವಸಹಾಯವೂ ದೊರೆಯಲಾರದು.

ಈ ನಾಟಕದ ಪ್ರಥಮಾಂಕದಲ್ಲಿ ಪಟ್ಟಣವನ್ನು ಕುರಿತು ಬರುತ್ತಿರುವ ಓಢ್ರಮಹಾರಾಜನಾದ ವಿಜಯಧ್ವಜನನ್ನು ವೀರಸೇನನು ಎದರುಗೊಳ್ಳುವದಕ್ಕೆ ಬದಲು ಅವನ ಅರಸಿಯು ಆ ಕೆಲಸವನ್ನು ಮಾಡುವಳು. ಮೂಲದಲ್ಲೂ ಇದೇರೀತಿ ಇದ್ದರೆ ಅದು ಇಂಗ್ಲೀಷು ಜನಗಳ ನಡೆವಳಿಕೆಗೆ ಸರಿಯಾಗಿರಬಹುದು. ಕನ್ನಡ ನಾಟಕದಲ್ಲಿಯೂ ಅದೇರೀತಿ ಇರುವದು

ಆಕ್ಷೇಪಣೆಗೆ ಕಾರಣವಾಗಿರುವದು. ನಮ್ಮ ದೇಶದಲ್ಲಿ ಅಂತಹ ಸ್ತ್ರೀಯರು ಅಂತಃಪುರವನ್ನು ಬಿಟ್ಟು ಹೊರಕ್ಕೆ ಬರುವದಿಲ್ಲ. ಅವಳು ಈ ರೀತಿ ಬಂದದ್ದು ಸ್ತ್ರೀಸ್ವಭಾವಕ್ಕೆ ವಿರುದ್ಧವಾದ ಗಂಡುಬೀರಿತನದಂತೆ ಕಾಣುವದೆಂದು ಕೆಲವರು ಆಕ್ಷೇಪಿಸಬಹುದು. ಆದರೆ ಸ್ಥಳಸಂಕೋಚವಾದ್ದರಿಂದ ಇದಕ್ಕೆ ಸಮಾಧಾನವನ್ನು ಹೇಳಲು ನಮ್ಮ ಬಾಲಿಕಾಪಾಠಶಾಲೆಯ ಸರಸ್ವತಿಯರಿಗೂ, ಅವರಬಂಧರಿಗೂ, ಈ ವಿಷಯವನ್ನು ಬಿಟ್ಟಿರುತ್ತೇ.

ಮೂರನೆ ಅಂಕದಲ್ಲಿ ರಾಜಮಂಡಲಿಯ ಔತಣವನ್ನು ಪ್ರತ್ಯಕ್ಷ ಹೇಳಿದೆ; ಆದರೆ ಅದನ್ನು ತೋರಿಸುವಾಗ ಜನರೆದುರಿಗೆ ಅರ್ಧವಸ್ತ್ರ ಬಿಚ್ಚಿಕೊಂಡು ಅಂಗಕ್ಕೆಲ್ಲ ಉಡಿಗೆ ಅಥವ ಪಟ್ಟೆಗಳನ್ನು ಹಾಕಿಕೊಂಡು ಪದ್ಮಾಸನದಲ್ಲಿ ಎಲೆಮುಂದೆ ರಾಜರುಗಳು ಕೂತುಕೊಳ್ಳಬೇಕೊ? ಅಲ್ಲದೆ ಶರಾಯಿ ಮೋಜ ಹಾಕಿಕೊಂಡು ಠೀವಿಯಾಗಿ ಮೇಜಿನಸುತ್ತ ಕೂತುಕೊಳ್ಳಬೇಕೆ ಹೇಳಿಲ್ಲ. ಆದರೂ ಚಿಂತೆ ಇಲ್ಲ. "ಇನ್ನೊಂದಾವರ್ತಿ ಪಾನವಾಗಲಿ" ಎಂದು ಎತ್ತಿಕೊಳುತ ಸುರಾಪಾನವನ್ನು ಹೇಳಿದೆ. ಚಂಡಾಲ ಮುಂತಾದ ಜನಗಳಲ್ಲಿ, ಅಥವ ಶೂರಸೇನ ನಾಟಕದಲ್ಲಿ ಹೇಳಿರುವಂತೆ ಸಿಪಾಯಿ ಮುಂತಾದ ಜನಗಳಲ್ಲಿ ಇದನ್ನು ಹೇಳಿದ್ದರೆ ಒಂದುವೇಳೆ ಚಿಂತೆಯಿಲ್ಲ. ಅದನ್ನು ಇಂತಾ ಉತ್ತಮ ಪಾತ್ರಗಳಲ್ಲಿ ಹೇಳಿರುವದು ಹಿಂದೂ ನಡವಳಿಕೆಗೆ ವಿರುದ್ಧವೆಂದು ಕೆಲವು ಆಚಾರಶೀಲರು ಆಕ್ಷೇಪಿಸಬಹುದು. ಆದರೆಅದನ್ನು ಹೇಳಿರುವದು ರಾತ್ರಿಕಾಲದಲ್ಲಿ ಮತ್ತೆ ಅದು ನಡಿಯುವದು ರಾತ್ರಿಕಾಲದಲ್ಲಿ. ಸುರಾಪಾನವನ್ನು ರಾತ್ರಿಕಾಲದಲ್ಲಿ ಹೇಳಿದರೆ ನಮ್ಮ ಆಚಾರಶೀಲರಲ್ಲೂ ಅನೇಕರು ಆಕ್ಷೇಪಿಸುವಂತೆ ಕಾಣುವ————

ನಟನೆಗೆ ಅನುಕೂಲವಾಗಲೆಂದು ಪ್ರಕೃತಾನುಸಾರ, 'ನೋಡಿ' 'ನಿಟ್ಟುಸುರುಬಿಟ್ಟು,' 'ನಗುತ್ತ', 'ಲಜ್ಜೆಯಿಂದ,' ಮುಂತಾದ ನಟನಾ ಸೂಚಕಗಳನ್ನು ಈಗಿರುವ ಕರ್ಣಾಟಕ ನಾಟಕಗಳಲ್ಲಿ ಹೇಳಿರುವದುಂಟು. ಆದರೆ ಇವುಗಳನ್ನು ಸಂದರ್ಭಾನುಸಾರ ನಟಕರೆ ತಿಳದುಕೊಳ್ಳಬಹುದಾದ ವಿಷಯಗಳಾದ್ದರಿಂದ, ಇಂಗ್ಲೀಷು ನಾಟಕಗಳಂತೆ ಇಂತಾ ವಿಷಯಗಳನ್ನು ಈ ನಾಟಕದಲ್ಲಿ ಹೇಳಿಲ್ಲ.

ಎಲೈ ದಯಾಳುಗಳಾದ ವಾಚಕರೆ! ಈ ದೀರ್ಘವಾದ ಪೀಠಿಕೆಯಿಂದ ಇದುವರಿಗೆ ನಿಮ್ಮನ್ನು ಬೇಜಾರು ಪಡಿಸಿದ್ದೆ ಸಾಕು. ಇನ್ನು,—

"ಬಿಟ್ಟಿದ್ದ ಬಿಟ್ಟಂತೆ ತೊಟ್ಟದ್ದ ತೊಟ್ಟಂತೆ
ಒಟ್ಟಾಗಿ ಸೇರುತ್ತ ಚಟ್ಟವನ್ನೇರುತ್ತ
ಪಟ್ಟಾದಗಾಳೀಲಿ ಮುಟ್ಟುವೆವು ಮುಗಿಲೆಂದು"

ಶಕ್ತಿಗಳು ಆತುರಪಡುತ್ತಿರುವವು; ಆದರೆ ಅಚ್ಚಿಗೆ ಕೊಡುವದಕ್ಕೆ ಮುಂಚೆಯೂ, ಅಚ್ಚುಹಾಕುತ್ತಿರುವ ಕಾಲದಲ್ಲೂ, ಈ ಕಾವ್ಯದಲ್ಲಿ ಶುದ್ಧಾಶುದ್ಧಗಳನ್ನು ನೋಡಿ, ಮೈಸೂರು ನಾರ್ಮಲ್ ಸ್ಕೂಲು ಕನ್ನಡ ಪಂಡಿತರು ಮ॥ರಾ ಶ್ರೀನಿವಾಸರಾಘವಾಚಾರ್ಯರವರು ಮಾಡಿದ ಸಹಾಯಗಳಿಗೆ ನಾನು ಕೃತಜ್ಞನಾಗಿರುವದನ್ನು ತಿಳಿದು, ದಯಮಾಡಿಸಬಹುದು.—

ಕಂದ ॥ ಕಬ್ಬಿಗರೆರದೆ ತನ್ನಯ ।
ಕಬ್ಬವನಿರೆ ಕೋವಿದರ್ಗೆ ಸಲ್ಲದದಿಕ್ಕುಂ ॥
ಕಬ್ಬೀವುದೆತಾಂ ಬೆಲ್ಲವ ।
ಕಬ್ಬಿಣದುರೆ ಗಾಣದಲ್ಲದಂ ನೆಗ್ಗದಿರಲ್ ॥

ಮೈಸೂರು.
ತಾ॥ ೧೬ನೇ ಡಿಶಂಬರು, ೧೯೧೫.

ಪ್ರತಾಪರುದ್ರದೇವ.

ಕಂ || ವಾಣಿಯೆ ಕರ್ಣಾಟಕದೊಳ್ |
ರಾಣಿಯು ಸೋಜಿಗವೆ ಪೇಳ್ ಕಬ್ಬವ ಗೌಡಂ ||
ಜಾಣಾಗಿದೋದಿರಿ ನೀವ್ ಬಿ |
ನ್ನಾಣವ ಕಾಣುವಿರಿದರೋಳುಮನ್ನಿಸಿ ತಪ್ಪಂ ||

MACBETH.

ಪಾತ್ರಗಳು.

ವಿಜಯಧ್ವಜ.—	ಓಢ್ರದೇಶದ ಮಹಾರಾಜ.
ಪ್ರತಾಪರುದ್ರದೇವ.— ಪ್ರತಾಪಸಿಂಹ.	ವಿಜಯಧ್ವಜನ ಮಕ್ಕಳು.
ವೀರಸೇನ.— ಶೂರಸೇನ.—	ವಿಜಯಧ್ವಜನ ಸೇನಾಪತಿಗಳು.
ಆದ್ರಿ.—	ಶೂರಸೇನನ ಮಗ.
ಜಯಸಿಂಹ.— ನಂದರಾಜ — ಕಳಿಂಗರಾಯ.— ವಾಮದೇವ.— ಮಿತ್ರ — ನಳ.—	ಓಢ್ರದಲ್ಲಿ ಉಪರಾಜರು.
ಪಾರ್ಶ್ವಕ.—	ಗೃಹಪಾಲಕ.
ಶೇಖರ —	ಮಗಧಸೇನಾಪತಿ.
ಶೇಖರನಮಗ.—	
ಚಂದ್ರವಲ್ಲಿ.—	ವೀರಸೇನನ ಅರಸಿ.

ಜಯಸಿಂಹನ ಪತ್ನಿಪುತ್ರರು, ಒಬ್ಬ ವೈದ್ಯ, ಒಬ್ಬ ವೃದ್ಧ, ಒಬ್ಬ ಚೇಟ, ಪದಾತಿಗಳು, ಪರಿವಾರ, ಸೇವಾಜನಗಳು, ಘಾತುಕರು, ಸೈನ್ಯಗಳು, ಶಕ್ತಿಗಳು, ಯಕ್ಷಿಣಿ, ಭೂತಗಳು.

ಪ್ರತಾಪರುದ್ರದೇವ.

ನಾಂದಿ.

ವೃತ್ತ || ಷೇಕಸ್ಪೀರಕವಿಸಾರ್ವಭೌಮನೊರೆದಾ ಸತ್ಕಾವ್ಯಚಂದ್ರಂಲಸ|
ಚ್ಛ್ರೀಕರ್ಣಾಟಕಭಾಷೆಯಂ ಬೆಳಗುತಂ ಶ್ರೀಕಂಠನಿಂದೊಪ್ಪಿರೆ |
ಲ್ಕ್ರೀಕರ್ಣಾಟಜನಂಗಳೀಕ್ಷಿಸುತೆ ಮಾದಾನಂದದಿಂದಿರ್ದೊಡೀ |
ಶ್ರೀಕರ್ಣಾಟದೊಳೆರ್ಕೆ ಪೆರ್ಚಿ ಮುದಮುಂ ವಾಣೀವಿಲಾಸಂಸ್ಥಿರಂ||

೧ನೇ ಅಂಕ.

೧ನೇ ಸ್ಥಾನ:-ಮರುಭೂಮಿಯಲ್ಲಿ ಗುಡಗು ಮಿಂಚಾಗುತ್ತಿರುವದು

ಪ್ರವೇಶ :-ಮೂರುಶಕ್ತಿಗಳು.

೧ನೇ ಶಕ್ತಿ.-ತಿರಗ ನಾವು ಸೇರತಕ್ಕದ್ದು ಯಾವಾಗ ?

೨ನೇ ಶಕ್ತಿ.-ಗಡಬಿಡಿಯಾದಾಗ! ಯುದ್ಧವನ್ನು ಗೆದ್ದಾಗ! ಸೋತಾಗ!

೩ನೇ ಶಕ್ತಿ.-ಪ್ರದೇಶವೆಲ್ಲಿ ?

೨ನೇ ಶಕ್ತಿ.-ಕಾವಲು.

೩ನೇ ಶಕ್ತಿ.-ವೀರಸೇನನ ಕಾಣುವದಕ್ಕೊ ?

೧ನೇ ಶಕ್ತಿ.-ಬಂದೆ! ಬಂದೆ! ಮಾರ್ಜಾಲ!

ಎಲ್ಲರು.—ನಡಿ! ನಡಿ! ಮೊಳಜೆಕ್ಕ ಕೂಗಿತು! ಬಂದೆ! ಬಂದೆ!

ರಗಳೆ॥ ಬಿಟ್ಟದ್ದ ಬಿಟ್ಟಂತೆ ತೊಟ್ಟದ್ದ ತೊಟ್ಟಂತೆ।
ಒಟ್ಟಾಗಿ ಸೇರುತ್ತ ಚಟ್ಟವನ್ನೇರುತ್ತ।
ಪಟ್ಟಾದಗಾಳೀಲಿ ಮುಟ್ಟುವೆವುಮುಗಿಲನ್ನು।
ಬಿಟ್ಟದ್ದ ಬಿಟ್ಟಂತೆ ತೊಟ್ಟದ್ದ ತೊಟ್ಟಂತೆ॥ ೨ ॥ *

ನಿಷ್ಕ್ರಾಂತಾಃ ಸರ್ವೇ.

೨ನೇ ಸ್ಥಾನ.—ದಂಡಿನಪಾಳಯ.

ಪ್ರವೇಶ—ವಿಜಯಧ್ವಜ, ಪ್ರತಾಪರುದ್ರದೇವ, ಪ್ರತಾಪಸಿಹ್ಮ, ಕಳಿಂಗ ರಾಯ ಪರಿವಾರ ಜನಗಳು.

ವಿಜಯಧ್ವಜ.—(ಗಾಯಗಳಿಂದ ರಕ್ತಸೋರಿಸುತ್ತ ಬರುತ್ತಿರುವ ಒಬ್ಬ ಪದಾತಿಯನ್ನು ಕಂಡು) ಅಲ್ಲಿ ಬರುತ್ತಿರುವ ರಕ್ತಾಂಗನಾದ ಪದಾತಿ ಯಾರು? ಈಗವನಿರತಕ್ಕವಸ್ಥೆಯನ್ನು ನೋಡಿದರೆ

---

* ರಾಗ.—ನಾದನಾಮಕ್ರಿಯೆ, ಆದಿತಾಳ ಚಾಪು.

ತೆಂಗೀ। ಮಾಟವಮಾಡುವ ॥ ಪ ॥ ಒಟ್ಟಾಗಿಸೇರಿ ॥ ಅ ॥
ಚಟ್ಟಸಾವೇರಿತಂಗಿ। ಮುಟ್ಟಿನಾವ್ಮೋಡತಂಗಿ। ಮಾಟಮಾಡಲುನಾ। ಮ್ಮಾಟವಮಾಡುವತಂಗಿ ॥ ೧ ॥ ಯಂತ್ರಕಟ್ಟುವತಂಗಿ। ಮಂತ್ರಮಾ ಡುವತಂಗಿ। ತಂತ್ರದಿಂದಲೆನಾ। ವ್ಯಾಂತಾರದೊಳುತಂಗಿ ॥ ೨ ॥ ಕಾವಲೊಳಗೆತಂಗಿ। ಸೇರಿನಾವೆಲ್ಲತಂಗಿ। ವೀರಸೇನನ ನೋಡಲ್। ದಾರೀಕಾಯುವತಂಗಿ ॥ ೩ ॥

ಇನ್ನೇನೋ ಬಂದು ಹೊಸದಾದ ದ್ರೋಹವಾರ್ತೆಯನ್ನು ತಂದಿರುವನಂತೆ ಕಾಣುತ್ತೆ.

ಪ್ರತಾಪರುದ್ರದೇವ.—ಜಯಸ್ಯಾ! ಇವನೇ ನನ್ನನ್ನು ಶತ್ರುಗಳ ಬಂಧನದಿಂದ ಬಿಡಿಸಬೇಕೆಂದು ಧೈರ್ಯದಿಂದ ಯುದ್ಧವಮಾಡಿದ ಧೀರನು. ಎಲೈ ಧೀರನೆ! ನಿನಗೆಕ್ಷೇಮ ಉಂಟಾಗಲಿ. ನೀನು ಬರುವಾಗ ಯುದ್ಧರಂಗವಿದ್ದ ಸ್ಥಿತಿಯನ್ನು ಪ್ರಭುಗಳಿಗರಿಕೆಮಾಡು.

ಪದಾತಿ.—ನೀರಿನಲ್ಲೀಜುತ್ತ ಬಲಗುಂದಿ ಒಬ್ಬರನ್ನೊಬ್ಬರು ತಬ್ಬಿಕೊಂಡು ಇಬ್ಬರೂ ಮುಳಗಿ ಹೋಗುವವರಂತೆ, ಯುದ್ಧರಂಗದಲ್ಲಿ ಜಯಾಪಜಯವು ಅನುಮಾನಕ್ಕಾಕರವಾಗಿತ್ತು. ಭೂಮಿಯ ದುರಾಚಾರಗಳಿಗೆಲ್ಲ ಮಾತೃಸ್ಥಾನವಾಗಿ, ದ್ರೋಹವೇ ಮೂರ್ತಿಮತ್ತಾಗಿರುವ, ದಯಾರಹಿತನಾದ ಆ ಮೆದಕೇರಿ ನಾಯಕನು, ತನ್ನ ಪಶ್ಚಿಮದ್ವೀಪದ ಪದಾತಿಗಳನ್ನು ಅಶ್ವಬಲವನ್ನು ನಮ್ಮವರ ಮೇಲೆ ತಳ್ಳಲು, ಜಯಲಕ್ಷ್ಮಿಯು ಅವನಂ ತನ್ನ ಕಟಾಕ್ಷದಿಂದ ನೋಡುತ್ತಿದ್ದಳು. ಆದರೆ ನಮ್ಮ ವೀರಸೇನನು ತನ್ನ ಹೆಸರಿಗೆ ತಕ್ಕ ಪರಾಕ್ರಮದಿಂದ, ಖಡ್ಗಹಸ್ತನಾಗಿ ಅರಿಪಜ್ತಿಗಳಲ್ಲಿ ಕಾಣಿಸಿಕೊಂಡು, ತನಗೆದುರಾಗಿ ಬಂದ ಅರಿಭಟರಂ, ಯಮಪುರಿಗೆ ದಾಳಿಯನ್ನಿಡಿಸಿ, ಆ ದುರಾತ್ಮನನ್ನು ಹಿಡಿದವನ ಶಿರಚ್ಛೇದನಂಗೈದವನ ತಲೆಯಂ ನಮ್ಮ ಕೋಟೆ ಬತೇರಿಯಮೇಲಿಡಿಸಿರುವನು.

ವಿಜಯಧ್ವಜ.—ಆಹಾ! ತಮ್ಮನೆ! ಶಾಬಾಸು! ಶಾಬಾಸು! ನೀನೇಧೀರನು!

ಪದಾತಿ — ಕಂದ || ಪಡೆಗೊಡೆವ ಚಂಡಮಾರುತ |
ಪೊಡವಿಯೊಳುರೆ ಸುಳಿಯುವಂತೆ ರಣದೊಳ್ ಕಲಿತ ||
ಮ್ಮಡರಲ್ಗಡಗಡನರಿಗಳ್ |
ನಡುಗಿದರಾ ವೀರಸೇನನ ಗತಿಗೆ ಹತಿಗೆ || ೩ ||

ಜಯಸಿರಿಯಂ ಮುಂದಲೆಯಿಂ |
ಭಯಪಡದೆಳೆವುದನು ನೋಡುತೋಡಿದರಾಳ್ಗಳ್ ||
ಹಯಲಕ್ಷದಿಂ ಮೆರೆವತ |
ನ್ನಯಪೊಸ ಬಲವಂ ವಿದರ್ಭ ಮುನ್ನೂಂಕಿದನೈ || ೪

ವಿಜಯಧ್ವಜ.— ಹಾಹಾ ! ಇದನ್ನು ಕಂಡು ನಮ್ಮ ದಳಪತಿಗಳಾದ ವೀರಸೇನ ಶೂರಸೇನರು ಭಯಭ್ರಾಂತರಾಗಿ ಬೆದರಲಿಲ್ಲವೆ ?

ಪದಾತಿ — ಕಂದ || ಆಗಸನೆ ಕೇಳ್ನನ್ನೀರಧಿ |
ಕರಿದಕೆ ಬೆದರಿದರು ಗುಬ್ಬಿಗಾಗೃಧ್ರನುಮೇಣ್ ||
ಮೆರಿಪುಲ್ಲೆಗೆ ಕಡುಸಿಂಗಬೆ |
ದರುವಂತಿವರೀರ್ವರಾರಣಾಂಗಣದತ್ತಲ್ || ೫ ||

ದಂಡೊಳಗೊಂದು ಪಿರಂಗಿಗೆ |
ಗುಂಡೆರಡನ್ನಿಟ್ಟುಪೊಡೆವತೆರದಿವರೀರ್ವರ್ ||
ಚಂಡಗದೆವಿಡಿದರಿಸಿರವ |
ಚಂಡಾಡಿದರರರೆ ! ಪಗೆಯು ಪೊಳಯದೆತ್ತಂ || ೬ ||

ಇನ್ನು ನಾನು ಮಾತನಾಡಲಾರೆ. ನನಗೆ ಚೈತನ್ಯ ಕಮ್ಮಿಯಾಗು

ತ್ತಿರುವದು. ನನ್ನ ಗಾಯಗಳು ಆದರಣೆಯನ್ನಪೇಕ್ಷಿಸುತ್ತಿರುವವು.

ವಿಜಯಧ್ವಜ – ನಿನ್ನ ಯೋಗ್ಯತೆಯನ್ನು ನಿನ್ನ ಮಾತುಗಳು ಮಾತ್ರವಲ್ಲದೆ ನಿನ್ನ ಗಾಯಗಳೂ ತೋರಿಸುತ್ತಿರುವವು. ಇವೆರಡರಿಂದಲು ನಿನ್ನ ಘನತೆ ವ್ಯಕ್ತವಾಗುತ್ತಿರುವದು. ನಿವ್ಯಾರಾದರು ಇವನನ್ನು ವೈದ್ಯಶಾಲೆಗೆ ಕರದೊಯ್ಯುವದು. (ಊಳಿಗದವನು ಪದಾತಿಯನ್ನು ಕರೆದುಕೊಂಡು ಹೋಗುವನು)

ಪ್ರವೇಶ – ನಂದರಾಜ.

ಅಲ್ಲಿ ಬರುತ್ತಿರುವವರ್ಯಾರು?

ಪ್ರತಾಪರುದ್ರದೇವ. – ಜಿಯ್ಯಾ! ಪ್ರಖ್ಯಾತವಾದ ನಂದರಾಜರಂತೆ ಕಾಣುವದು.

ನಂದರಾಜ – ಪ್ರಭುಗಳಿಗೆ ದೈವಾನುಗ್ರಹವಿರಲಿ.

ವಿಜಯಧ್ವಜ – ಎಲೈ ಮಿತ್ರನೆ! ಸುಖಾಗಮನವೆ? ನೀನೀಗೆಲ್ಲಿಂದ ಬಂದಿರುವೆ?

ನಂದರಾಜ – ಜಿಯ್ಯಾ! ಮುನವಳ್ಳಿಕಣವೆಯಿಂದ ಬಂದಿರುವೆನು. ಅಲ್ಲಿ ವಿದರ್ಭನ ಪತಾಕೆಗಳು, ಸೂರ್ಯಕಿರಣಗಳಗೆಡೆಗೊಡದೆ ನಮ್ಮ ಸೈನ್ಯಕ್ಕೆ ಭಯೋತ್ಪಾತವನ್ನುಂಟುಮಾಡುತ್ತಿದ್ದವು. ಆದರಜೊತೆಗೆ ನಮಗೆ ಸಾಮಂತನಾಗಿದ್ದ ಬರ್ಬರನು ಕೂಡ :–

ಕಂದ || ಎಣಿಸಲ್ಕಾಗದ ಬಲದಿಂ |
ರಣದೊಳ್ಕೆರೆಯುವ ವಿದರ್ಭಸೈನ್ಯವಸೇರ್ದಾ ||

ಕಣವೆಯೊಳು ನವ್ಮ್ರಪಡೆಯುಂ ।
ಕೆಣಕುತಯುದ್ಧವನುವಮಾಡಿವಂದ್ರೋಹಿಸುತಂ॥೭॥

ಹೀಗಾದುದ ನವ್ಮ್ರ ವಲ್ಲಭೇಶನಾದ ವೀರಸೇನನು ಕಂಡು, ಹಿಡಿಂಬಿಯರಸನಂತೆ ;—

ರಗಳೆ॥ ಕೊಳುಗುಳದ ಘಾತಿಯುಂ ನವ್ಮ್ರವರ ಭೀತಿಯುಂ ।
ಪಲ್ಗಡಿವು ನೋಡುತಂ ಮೀಸೆಗಳ್ತರಪುಳಕಂ ।
ಖಡ್ಗವಂ ಪಿಡಿದವಂ ಕಾಳಗವ ಮಾಳ್ದವಂ ।
ಮೋಳ್ಪೀಳ್ವಧೀರರಂ ಧೀರರೋಳ್ಶೂರರಂ ।
ಬರುತಿರುವ ತೇಜಿಯುಂ ಬರ್ಭರನ ವಾಜಿಯುಂ ।
ತೋಳ್ತಿತರಿಯುತಂ ತರಿವವರ ಸೀಳುತಂ ।
ಗೆಲಿದಿರ್ಪ ಯುದ್ಧವಂ ಮುರಿದಿರ್ಪ ಗರ್ವವಂ ।
ಜಡಿವವನ ಕೇಶವಂ ಪಿಡಿದಿರ್ಪಕೈಗಳಂ ॥ ೮ ॥

ವಿಜಯಧ್ವಜ —ಭಲ ! ಭಲ ! ಭಾಪುರೆ !

ನಂದರಾಜ —ಇವನಿಗೆ ಮೂಲಬಲವಾದ ವಿದರ್ಭನು :—

ಕಂದ ॥ ಕಡುಯುದ್ಧದೆಮಡಿಮಡಿಯುತೆ ।
ಪೊಡವಿಯೊಳಡಗಲ್ಕೆತನ್ನಪಿಡಿಯುಂಪಡೆಯುಂ ।
ಬೋಡೆಯಲ್ಬೇಡೆಂದಡಿಯುಂ ।
ಪಿಡಿವಮಬೇಡುತಿಪವೀರಸೇನನನೀಗಳ್ ॥ ೯ ॥

ಮಹಾಪ್ರಭು ! ಇದುಮಾತ್ರವೆ ಅಲ್ಲ. ಆ ವೀರಸೇನನ ಶೌರ್ಯ ವನ್ನು ವರ್ಣಿಸಲಸಾಧ್ಯವಾಗಿರುವದು :-

ವೃತ್ತ || ಪಿಡಿಯೆ ತನ್ನನುಜಾತರಂ ವರವೀರಸೇನ ವಿದರ್ಭನುಂ |
ಪಿಡಿದು ಲಕ್ಷ ಧನಂಗಳಂ ಕರನೀಡಿ ಬೇಡುತಲಿರ್ಪ ನೀ |
ಗಡಿಯು ಮೋಲವ ನಿಟ್ಟು ತಾಂಸಿರ ಬಾಗಿ ನಿಂತಿಹ ನೀಗಳುಂ |
ಕೊಡುವೆ ಕಪ್ಪವ ಮುಂದೆ ನಾನಿಲಿಸಿನ್ನುಯುದ್ಧವ ನೆನ್ನು
ತ || ೧೦ ||

ವಿಜಯಧ್ವಜ.— ಕಂದ || ತಿರೆಯು ರುಣ ತೀರಿದುದು ಬ |
ರ್ಭರಂಗೆ ನೀನವನ ಶೂಲ ಕೇರಿಸುತೀಗಳ್ ||
ವರವೀರಸೇನನಿಗವನ |
ಸಿರಿಯಂ ಮೋಣವನ ತಿರೆಯು ನೀಯುಲ್ವೇಳ್ಕುಂ||೧೧||

ನಂದರಾಜ.— ಜೆಯ್ಯಾ ! ಆದೇರೀತಿ ಮಾಡಿಸುವೆನು.

ವಿಜಯಧ್ವಜ —ರಾಜದ್ರೋಹಿಯಾದ ಆ ಬರ್ಭರನನ್ನಗಲಿದ ಭಾಗ್ಯ ಲಕ್ಷ್ಮಿಯು ಮುಂದೆ ಧುರಧೀರನಾದ ವೀರಸೇನನನ್ನು ವರಿಸಿ ಬಾಳು ವಳು.

ನಿಷ್ಕ್ರಾಂತಾಃ ಸರ್ವೇ.

೩ನೇ ಸ್ಥಾನ.-

ಕಾವಲಲ್ಲಿ ಗುಡಗು ಮಿಂಚಾಗುತ್ತಿರುವದು.

ಪ್ರವೇಶ.—ಮೂರುಶಕ್ತಿಗಳು.

೧ನೇ ಶಕ್ತಿ—ತಂಗಿ! ನೀನೆಲ್ಲಿರ್ದೆ?

೨ನೇ ಶಕ್ತಿ—ಪಂದಿಗಿಂದಿಕೊಲ್ಲುತ್ತಿರ್ದೆ.

೩ನೇ ಶಕ್ತಿ.—ಅಕ್ಕ! ನೀನೆಲ್ಲಿರ್ದೆ?

೧ನೇ ಶಕ್ತಿ.—ಬರ್ವನಾವಿಕನ ಮಡದಿ ಮಡಿಲೊಳ್ ಉಮ್ಮತ್ತಿಕಾಯ್ಗಳಿಟ್ಟು, ಮಲಕು! ಮಲಕು! ಮಲಕು! ಮಾಡುತ್ತಿರ್ದಳ್; ನನಗೊಂದೀಯೆಂದೆ, "ತೊಲಗು! ತೊಲಗು! ತೊಲಗು! ಪಿಶಾಚಿ!" ಎಂದಾಕಿವಿಮೂಳ ಪೇಳ್ದಳ್, ಆದೊಡವಳ :—

ರಗಳೆ || ಗಂಡನು ಪೋಗಿರುವಂ ದಂಡಿನೊಳವ ನಿರುವಂ |
ಹಡಗಿನ ಮೇಲಿರುತಂ ತಡಿಯನು ಸೇರ್ದವನಂ |
ಕಂಡರೆ ಬಿಡದವನಂ ತುಂಡನು ಗೆಯ್ದವನಂ |
ಕೆಂಡದ ಮೇಲಿಡುತಂ ಮುಂಡೆಯಮಾಡಿವಳಂ||೧೨||

೨ನೇಶಕ್ತಿ.—ನಿನ್ನ ಪಡಂಗುಗೆ ನಾನೊರ್ಗಾಳಯೀವೆಂ.

೧ನೇ ಶಕ್ತಿ.—ನೀಂ ದಯಾಳು.

೩ನೇ ಶಕ್ತಿ.—ನಾಂ ಮತ್ತೊಂದೀವೆಂ.

೧ನೇ ಶಕ್ತಿ.— ರಗಳೆ ||

ಉಳಿದಗಾಳಿ ಕೈಯೊಳಿಹುದು ಕೊಳಗದಲ್ಲಿ ಕೂತುಕೊಂಡು |
ಗಾಳಿಯಲ್ಲಿ ತೂರಿಕೊಂಡು ಹೊಳೆಯೊಳಲ್ಲಿ ತೇಲಿಕೊಂಡು |
ಮಳೆಯೊಳೆತ್ತಲೋತುಕೊಂಡು ಹಳ್ಳಪಳ್ಳ ಹುಡಕಿಕೊಂಡು |
ನಳ್ಳಿಯನ್ನು ತಿಂದುಕೊಂಡು ಕೊಳ್ಳಿಯನ್ನು ಹಿಡಿದುಕೊಂಡು||೧೩

ಅಂತು ಇಂತುಸೇರುವೆ ಗಂಡನನ್ನು ಕೊಲ್ಲುವೆ | *
ಕೊಂದು ರಕ್ತಹೀರುವೆ ಹೀರಿ ಕೇಕಹಾಕುವೆ |
ತಂತಿಗಿಂತಿ ಮೀಟುವೆ ತಾಳಗೀಳ ಹಾಕುವೆ |
ಸುತ್ತಮುತ್ತನೋಡುವೆ ಸುತ್ತಿ ಸುತ್ತಿ ಕುಣಿಯುವೆ |
ಮುಂಡೆಯನ್ನು ಹಿಡಿಯುವೆ ಮುಂಡೆಬುಂಡೆ ಮಾಡುವೆ|
ಬಂಟಿಹೆಂಡೆ ತರಿಸುವೆ ಕಂಡಕಂಡ ತಿನ್ನುವೆ |
ಬುಂಡೆಬುಂಡೆ ಮೊಗಿಯುವೆ ಬಂಡಿಬರಿದು ಮಾಡುವೆ|
ಹಿಗ್ಗಿ ಹಿಗ್ಗಿ ತೇಗುವೆ ಹಿಗ್ಗಿ ಕೇಕ ಹಾಕುವೆ || ೧೪ ||

೨ನೇ ಶಕ್ತಿ.—ನನ್ನ ಕಯ್ಯೊಳೇನಿಪ್ಪುದು ?

---

* ಈ ರಗಳೆಯ ಎರಡೆರಡು ಪಾದಗಳನ್ನು ಒಂದೊಂದು ಚರಣವನ್ನಾಗಿ ನಾಲ್ಕು ಚರಣಗಳಾಗಿ ಮಾಡಿಕೊಂಡು ಅವಕ್ಕೆ ಈ ಕೆಳಗಣ ಪಲ್ಲವಿ ಅನುಪಲ್ಲವಿಯನ್ನು ಸೇರಿಸಿ ಹಾಡುತ್ತ ಕುಣಿಯಬಹುದು. ಮೊದಲನೇ ಚರಣವನ್ನು ಹಾಡಿದನಂತರ ಪಲ್ಲವಿ ಅನುಪಲ್ಲವಿಗಳನ್ನು ಸೇರಿಸಿಕೊಳ್ಳಬೇಕು.

(ರಾಗ.—ಹಿಂದುಸ್ಥಾನಿ. ಜಿಲ್ಲ ಜುಂಜೋಟಿ, ರೂಪಕತಾಳ.)
(ಧಾಟಿ.—ಜಾನಿಹೈಸೋಯಿ ಅಬ್ ಜಾಕೆ ಬತುಂದಲ್ ಮಿಯ್ಯಾ)

ಬನ್ನಿನೀವು ಬೇಗ ನರ್ತಿಸಿ | ಥಕ್ ಥಕೆಂದು || ಪ || ಬೇಗನರ್ತಿಸಿ ನೀವು | ಬೇಗನರ್ತಿಸಿನೀವು | ಥಕ್ ಥಕೆಂದು ||ಅ||

೩ನೇ ಶಕ್ತಿ.—ತೋರು! ತೋರು!

೨ನೇ ಶಕ್ತಿ.—ಇದೋರ್ವ ನಾವಿಕನ ಪೆರ್ಬೆಟ್ಟು. ಅವಂ ಮನೆಗೆ ಬರ್ಪಾಗವನ ಪಡಂಗು ಒಡೆದು ಪೋದುದು.

೩ನೇ ಶಕ್ತಿ.—ನಗಾರಿ! ನಗಾರಿ! ವೀರಸೇನನಸವಾರಿ.

ಎಲ್ಲರು.—ಚಿತ್ರಪದಂ ‖ ಮಂತ್ರದಮಾಟದ ಸೋದರಿಯರ್ ।
ತಂತ್ರದಿ ಯಂತ್ರವ ಮಾಳ್ಪರವರ್ ।
ಯಂತ್ರಕೆಸೋಲ್ವಮನಂಗಳವರ್ ।
ತಂತ್ರದಿಗೆಲ್ವರುಸೋದರಿಯರ್ ‖ ೧೫ ‖

ಸುತ್ತಲುಮುತ್ತಲು ಬರ್ಪೆವುನಾವ್ ।
ಕುತ್ತಿಗೆ ರಕ್ತವ ಪೀರುತನಾವ್ ।
ಕತ್ತೀಕಾವಳಸೇರ್ವೆವುನಾಮ್ ।
ಕೊತ್ತಿಯಕಣ್ಣಿಗೆಕಾಣ್ಬೆವುನಾಮ್ ‖ ೧೬ ‖

ರಗಳೆ ‖ ಮೂರುಂಮೂರುಂಸೇರ್ದೊಡಮಾರುಂ ।
ಮೂರಿರೆಮತ್ತೀ ಗೆಹುದೊಂಬತ್ತುಂ ।
ನಿನಗುಂಮೂರುಂ ನನಗುಂಮೂರುಂ ।
ಇಲ್ಲದೆಮೂರುಂ ಸಲ್ಲದುಭಾಗಂ ।
ಮೂರೇಮೂರುಂ ಆರೇಆರುಂ ।
ಮೂರಿರಲಾರುಂ ಆರಿರೆಮೂರುಂ ।
ಮೂರುಂಆರುಂ ಸೇರೆಒಂಬತ್ತುಂ ।
ಮೂರೇಯಿಲ್ಲಂ ಆರೀಗಿಹುದುಂ ।
ಹಾ ಬಲಿ! ಹೋ ಬಲಿ! ಹಾ ಬಲಿ! ಹೋಬಲಿ! ।

ಕೋಬಲಿ. ನೀಬಲಿ. ತಾಬಲಿ. ಮೂರ್ಬಲಿ. ।
ಭಲಭಲ ! ಬಲಿಬಲಿ ! ಬಿಡುಬಿಡುಗಲಬಿಲಿ ।
ಹಾಹಾಹಾ ! ಹೋಹೋಹೋ ! ಓಹೋ ! ॥೧೩॥

ಪ್ರವೇಶ.—ವೀರಸೇನ, ಶೂರಸೇನ.

ವೀರಸೇನ —ಇಷ್ಟು ಉತ್ಕೃಷ್ಟವಾದ ದುರ್ದಿನವ ನಾನೆಂದೂ ಕಂಡಿದ್ದಿಲ್ಲ.

ಶೂರಸೇನ —ಎಲೈ ಮಿತ್ರನೆ! ಪಾಳಯುವಿನ್ನೆಷ್ಟು ದೂರವಿದೆ ? ಆಹಾ! ಇವೇನು! ಕೃಶವಾಗಿ ವಿಜಾತೀಯುವಾದ ಆಕಾರದಿಂದಿರುವವು. ಭೂನಿವಾಸಿಗಳಂತೆ ಕಾಣುವದಿಲ್ಲ. ಆದರೂ ಅದರಲ್ಲಿವೆ. ನಿಮಗೆ ಜೀವವುಂಟೋ ? ನೀವು ಉತ್ತರವಂ ಕೊಡಬಲ್ಲಿರ ? ಒಣತುಟಿಗಳವೇಲೆ ಕಡ್ಡಿಬೆರಳನ್ನಿಟ್ಟು ನನ್ನ ಪ್ರಶ್ನೆಯನ್ನು ತಿಳಿದುಕೊಂಡವರಂತೆ ನಟಿಸುವಿರಿ. ನೀವು ಹೆಂಗಸರಾಗಿರಬೇಕು. ಆದರೆ ನಿಮಗೆ ಗಡ್ಡಗಳಿರುವದರಿಂದ ಹಾಗೆ ಹೇಳಲು ಅನುಮಾನವಾಗುವದು.

ವೀರ —ನೀವೇನು ? ಕೈಲಾದರೆ ಉತ್ತರವನ್ನು ಕೊಡಿ.

೧ನೇ ಶ —ಜಯಿಕೆ ವೀರಸೇನಂ ಜಯಿಕೆ ವಲ್ಲಭಾಧಿಪಂ.

೨ನೇ ಶಕ್ತಿ —ಜಯಿಕೆ ವೀರಸೇನಂ ಜಯಿಕೆ ಬರ್ಬರಾಧಿಪಂ.

೩ನೇ ಶಕ್ತಿ —ಜಯಿಕೆ ವೀರಸೇನಂ ಜಯಿಕೆ ರಾಜಾಧಿರಾಜಂ.

ಶೂರ —ಎಲೈ ಪೂಜ್ಯನೆ! ನೀನೇತಕ್ಕೆ ಬೆದರುತ್ತಿರುವೆ ? ಇಷ್ಟು ಹಿತವಚನಗಳನ್ನು ಕೇಳಿಯಾತಕಂಜುವೆ ? ಸತ್ಯವಾಗಿ ಹೇಳಿ. ನೀವೇನು ? ಮನಸ್ಸಿನ ಕಳವಳವೊ ? ಅಲ್ಲದೆ ಮೂರ್ತಿಮತ್ತಾಗಿ ನಮ್ಮೆದುರಿನಲ್ಲಿರತಕ್ಕದ್ದೇ ನಿಜವೊ ? ನನ್ನ ಜೊತೆಗಾರನಿಗೆ ಪ್ರಕ

ತದ ಭಾಗ್ಯವನ್ನು ಮುಂದೆ ರಾಜಪದವಿಯನ್ನು ಸೂಚಿಸಿದಿರಿ. ಅದರಲ್ಲವನು ಮಗ್ನನಾಗಿ ನಿಂತಿರುವನು. ನನ್ನ ವಿಷಯವಾಗಿ ಯಾತಕೆ ಎನೂ ಹೇಳಲಿಲ್ಲ ? ನಿಮಗೆ ಭವಿಷ್ಯತ್ಕಾಲವು ಗೊತ್ತಾಗುವದು ನಿಶ್ಚಯವಾದರೆ ನನ್ನ ಅದೃಷ್ಟ ಹ್ಯಾಗಿರುವದು ಹೇಳುವರಾಗಿ ?

೧ನೇ ಶಕ್ತಿ –ಜಯತು.

೨ನೇ ಶಕ್ತಿ – ಜಯತು.

೩ನೇ ಶಕ್ತಿ.– ಜಯತು.

೧ನೇ ಶಕ್ತಿ –ವೀರಸೇನನಿಗಿಂತಲ್ಪಂ ಅವಂಗಧಿಕಂ

೨ನೇ ಶಕ್ತಿ.–ವೀರಸೇನನ ಪದವಿಯಿಲ್ಲಂ ಅವನಿಗಿಂತಲಧಿಕಪದವಿ.

೩ನೇ ಶಕ್ತಿ –ನೀಂ ರಾಜನಾಗೆ ನಿನ್ನೊಳ್ ರಾಜರಾಗುವರ್. ಉಭಯತ್ರ ಜಯಂ ವೀರಸೇನ ಶೂರಸೇನರ್ಗೆ ಜಯಂ.

೧ನೇ ಶಕ್ತಿ –ಶೂರಸೇನ ವೀರಸೇನರ್ಗೆ ಜಯಂ ಜಯಂ. (ಹೊರಡಲುಪಕ್ರಮಿಸುವರು.)

ವೀರ –ನಿಲ್ಲಿ ! ನಿಲ್ಲಿ ! ಅಲ್ಪಭಾಷಿಗಳೇ ! ನನಗಿನ್ನು ಕೊಂಚ ಹೇಳತಕ್ಕದ್ದಿರುವದು. ನಮ್ಮ ತಂದೆ ವೀರಬಾಹುವಿನ ಮರಣಾನಂತರ ನಾನು ಪಲ್ಲಭಾಧಿಪನಾಗಿರುವದು ನಿಜ. ಆದರೆ ಬರ್ಭರಾಧಿಪತಿ ಹ್ಯಾಗಾಗುವೆನು ? ಬರ್ಭರಾಧಿಪತಿಯಾಗುವದು ಹ್ಯಾಗೆ ಅನುಮಾನವೋ ದೊರೆಯಾಗುವದು ಹಾಗೆಯೆ ಅನುಮಾನಕ್ಕಾಸ್ಪದವಾಗಿರುವದು. ನಿಮಗೀ ವಿಷಯಗಳು ಹ್ಯಾಗೆ ಗೊತ್ತಾಯಿತು ಹೇಳಿ. ಅಲ್ಲದಿದ್ದರೆ ಈ ಬೆಂಗಾಡಿನಲ್ಲಿ ನೀವು ನಮ್ಮ ದಾರಿಗಡ್ಡಲಾಗಿ ಬಂದು ಈ ಅದ್ಭುತವಾದ ವಾರ್ತೆಯಿಂದ ನಮ್ಮನ್ಯಾತಕ್ಕೆ ಹರಸಿದಿರಿ ಹೇಳಿ ?

(ಶಕ್ತಿಗಳು ಮಾಯವಾಗುವವು.)

ಶೂರ –ನೀರಿನಮೇಲೆ ಗುಳ್ಳೆಗಳಿರುವಂತೆ ಭೂಮಿಯ ಮೇಲೂ ಗುಳ್ಳೆಗಳಿರುವವುಂಟು. ಇವು ಅಂತಹ ಗುಳ್ಳೆಗಳು. ಈಗವು ಯಾವ ಕಡೆ ಹೋದವು ?

ವೀರ –ಆಕಾಶದಲ್ಲಿ ! ಶರೀರವಿದ್ದಂತೆ ಕಾಣುತ್ತಿದ್ದವು, ಶ್ವಾಸವು ಗಾಳಿಯನ್ನು ಸೇರುವಂತೆ ಅಂತರಿಕ್ಷದಲ್ಲಿ ಕರಗಿಹೋದವು. ಅವಿದ್ದರೆ ಚನ್ನಾಗಿತ್ತಲ್ಲ.

ಶೂರ –ನಾವು ಮಾತನಾಡುತ್ತಿರುವ ಪದಾರ್ಥಗಳು ಈ ಸ್ಥಳದಲ್ಲಿದ್ದದ್ದು ನಿಶ್ಚಯವೋ ? ಅಲ್ಲದೆ ಮತ್ತನ್ನುಂಟುಮಾಡುವ ಮದ್ದನ್ನು ತಿಂದು ಭ್ರಾಂತಿಪಡುತ್ತಿರುವೆವೋ ?

ವೀರ –ನಿನ್ನ ಸಂತಾನವು ಪ್ರಭುಪದವನ್ನೈದುವದು.

ಶೂರ –ನೀನೇ ಪ್ರಭುವಾಗುವೆ.

ವೀರ –ಬರ್ಭರಾಧಿಪತಿಯೂ. ಅವರಿದನ್ನು ಹೇಳಲಿಲ್ಲವೆ ?

ಶೂರ –ಅವರು ಹೇಳಿದ್ದೂ ಮತ್ತೆ ಹೇಳಿದ ರೀತಿಯೂ ಅದೇ. ಆವರೀ ಕಡೆ ಬರುತ್ತಿರುವವರ್ಯಾರು ?

ಪ್ರವೇಶ –ನಂದರಾಜ, ವಾಮದೇವ.

ನಂದರಾಜ – ವೃತ್ತ ||

ವೀರಸೇನನೆಕೇಳುನಿನ್ನಯಪೌರ್ವವಂವಿಜಯಧ್ವಜಂ |
ಬಾರಿಬಾರಿಗೆಬಂದುಬಂದುಪೊಗಳ್ದುಪೇಳ್ವರಕೇಳುತಂ |
ಧೀರನೀನರಿಪಜ್ತಿಯಲ್ಲಿದೆಗೊಟ್ಟುಮಾಡಿದಯುದ್ಧವಂ |
ಜಾರಿಪೋದರಿಸೈನ್ಯವಂಗೆಲಿದಿರ್ಪನಿನ್ನಯಗರ್ವವಂ ||೧೮||

ಕಂದ || ಅಚ್ಚರಿಯಿಂದಲೆಕೇಳುತ |
ಮುಚ್ಚಿಮುಸುಂಕುವ ವಿದರ್ಭಸೈನ್ಯವನೆಲ್ಲಂ ||

ಕೊಚ್ಚಿನಡೆದಕಡು ನಿನ್ನೆದೆ ।
ಗೆಚ್ಚನುಕೇಳಿಸಲೆಮೆಚ್ಚುತಿರ್ಪನುರಾಯಂ ॥ ೧೯ ॥

ಘೋರ್ಗರೆದುಬರ್ಪಮುಂಗಾರ್ ।
ನೀರ್ಗಲ್ಮಳೆಗರೆಯುವಂತೆಮೇಲ್ಮೇಲೆತ್ತಂ ॥
ಒರ್ಗುಡಿಸುತಂಬಚೆಯಾಳ್ಗಳ್ ।
ಮಾರ್ಗದೊಳ್ಪೈದರಸನೆಡೆಯುನಿನ್ನನುತಿಸಿದರ್ ॥೨೦॥

ವಾಸುದೇವ — ಕಳಿಸಿರುವರಾಯನಮ್ಮಂ ।
ತಿಳಿಸಲ್ತಾಂಮಾಳ್ಪವಂದನೆಯುನಿನಗೆನುತಂ ॥
ಕೊಳುಗುಳದೀಜಯಕೆಪ್ರತಿ ।
ಫಲವಕೊಡಲ್ಕಿನ್ನನೊಯ್ಯೆಬಂದಿಹೆವೀಗಳ್ ॥೨೧॥

ನಂದರಾಜ — ತಾಮಾಡುವಮರ್ಯಾದೆಗಿ ।
ದೇಮುಂಗಡವೆನುತತಾನು ಬರ್ಭರವೆನುವೀ ॥
ನಾಮಾಂಕಿತವಂಪೇಳೆ । [೨೨॥
ಪೇರ್ಮರ್ಯಾದೆಯೊಳೆಸೆಯುವನಿನಗಿನ್ನುಜಯಂ ॥

ಶೂರ.— ಇದೇನು ! ಪಿಶಾಚಿಗಳು ನಿಶ್ಚಯವನ್ನು ಹೇಳುವದುಂಟೆ !

ವೀರ.— ಬರ್ಭರರಾಯನು ಬದುಕಿರುವನು. ಈ ತೆರದಿಂದ ನೀವು ನನ್ನನ್ನು ಅವನ ಹೆಸರಿನೊಡನೆ ಯಾತಕ್ಕೆ ಮರ್ಯಾದೆ ಮಾಡುತ್ತಿರುವಿರಿ ?

ವಾಸುದೇವ.—ಬರ್ಭರಾಧಿಪತಿಯಾಗಿದ್ದವನು, ಜೀವಂತನಾಗಿರುವದೇನೋ ನಿಶ್ಚಯ. ಆದರೆ ಅವನೀಗ ನ್ಯಾಯಾಧೀನನಾಗಿ ತನ್ನ ಜೀವವನ್ನು ಕಳೆದುಕೊಳ್ಳುವವನಾಗಿದಾನೆ. ವಿದರ್ಭರಾಯನ ಸೈನ್ಯ

ದೊಡನೆ ಸೇರಿದ್ದರಿಂದಲೋ, ದ್ರೋಹಿಗಳ ಬಲಕ್ಕೆ ಮುಚ್ಚುಮರೆಯಾಗಿ ಸಹಾಯವನ್ನು ಮಾಡುತ್ತ ತನ್ನ ಸಮಯವನ್ನು ನಿರೀಕ್ಷಿಸುತ್ತಿದ್ದದ್ದರಿಂದಲೋ, ಅವನ ರಾಜದ್ರೋಹ ಹೊರಬಿದ್ದಾಗಿ ಅದನ್ನು ಜನಗಳೂ ಕಂಡು ಅವನೂ ಒಪ್ಪಿಕೊಂಡು, ಈಗವನು ಮರಣದಂಡನೆಗೆ ಗುರಿಯಾಗಿರುವನು.

ವೀರ — ಕಂದಾರ್ಧ || ನಿಜದಿಂನಾವಲ್ಲಭವೇನೆಂ | (ಆತ್ಮಗತ)
ನಿಜವಾದೇಂಬರ್ಭರಂಬಳಿಕ್ಕಿಹುದೊಂದಿ ||

(ಪ್ರಕಾಶ) ಎಲೈ! ಪೂಜ್ಯರೆ, ನೀವು ಶ್ರಮಪಟ್ಟುಕೊಂಡು ನನ್ನ ಬಳಿಗೆ ದಯಮಾಡಿಸಿದ್ದಕ್ಕಾಗಿ ವಂದಿಸುವೆನು. (ಶೂರಸೇನನ ಕುರಿತು) ನಿನ್ನ ಸಂತಾನವು, ಪ್ರಭುಪದವನ್ನೈದುವದೆಂದು ನಿನಗಾಸೆಯಿಲ್ಲವೆ? ನನ್ನನ್ನು ಬರ್ಭರಾಧಿಪತಿಯಾಗಿ ಮಾಡಿದವರು, ನಿನಗಿದನ್ನು ಸೂಚಿಸಿರುವರಲ್ಲ?

ಶೂರ.—ಇದರಲ್ಲಿ ಸಂಪೂರ್ಣವಾದ ನಂಬಿಕೆಯನ್ನಿಟ್ಟಿದ್ದಾದರೆ ಈಗಿನ ಬರ್ಭರಾಧಿಪತ್ಯವನಲ್ಲದೆ ಪ್ರಭುಪದವಿಯನ್ನೂ ಪಡಿಯಬೇಕೆಂಬ ಕುತೂಹಲ ನಿನ್ನಲ್ಲಿ ಹುಟ್ಟೀತು. ಈಗಿನ ನಡವಳಿಕೆಯೇನೊ ಆಶ್ಚರ್ಯಕರವಾದ್ದೇ ಸರಿ. ಆದರೆ ಈ ನರಕವಾಸಿಗಳು ಭವಿಷ್ಯತ್ಕಾಲ ತಿಳಿದವರಂತೆ ನಟಿಸಿ, ಕೊಂಚಮಟ್ಟಿಗೆ ನಿಜವನ್ನು ತೋರಿಸಿದಂತೆ ಮಾಡಿ, ಕಡೆಗೆ ಮನುಷ್ಯರನ್ನು ಮೋಸಗೊಳಿಸಿ ಅನೇಕವೇಳೆ ಅಗಾಧವಾದ ಗುಂಡಿಯಲ್ಲಿ ತಳ್ಳುರುವರು.

ವೀರ.—ಕಂದಾರ್ಧ || ನಿಜವೆರಡಂಕಂಡಿಹೆನೀ | (ಆತ್ಮಗತ)
ಗಜಸವವೊದಲುನಿರ್ವಪಿಂದಣಾಂಕದವರಿಯಿಂ ||೨೩||

(ಪ್ರಕಾಶ) ಮಿತ್ರರೇ ನಿಮ್ಮನ್ನು ವಂದಿಸುವೆ.

ಕಂದ ॥ ನನೆಸ್ನೇಳ್ಪುಟ್ಟಿರುವಾಸೆಯು । (ಆತ್ಮಗತ)
ನಿನ್ನೇಂಬರಿದೆಂಬೆನಿರ್ಮದೇಬರ್ಭರಭಾ ॥
ಗ್ಯನ್ನನಗೊಳ್ಳುತಿದೆಂಬೊಡೆ ।
ಯೆನ್ನಹೃದಯವೇತಕಿಂತುಜಡಿಯುತಿದೆವೆಯಂ ॥ ೨೪॥

ಇದರೊಳ್ಗುಣಮಿರಲೇಕಿಂ ।
ತೆದೆಯಂತಲ್ಲಣಿಸುತಿರ್ಪುದಿದಬಗೆಯಲ್ಕಿಂ ॥
ತಿದಿರೇಳುತಲಿಹುದೇಕೀ ।
ಗದೆಯೊಳ್ರೋವಾಳಿಜುವ್ವನಲ್ಪಸರಿಸುತಂ ॥

ಇದಿರೊಳ್ಬಂದೊಡೆಕಷುಭವು ।
ವಿದಿರವಧಿಕವಾಗಿಬಗೆಗೆತೋರ್ಪಂತೀಗ ॥
ನ್ನೆದೆಯೋಳ್ಮೊಳೆತಿಹಕೊಲೆವಧಿ ।
ಪುದೆನ್ನನೆಲ್ಲೆಡೆಯೊಳಲ್ಲದುದೆಕಾಣ್ಬುದುಹಾ ॥ ೨೬॥

ಶೂರ.— ನೋಡಿ! ನಮ್ಮ ಗೆಳೆಯನು, ಹ್ಯಾಗೆ ಪರವಶನಾಗಿರುವನು.

ವೀರ.— (ಕಂದಾರ್ಧ ॥ ಮುಂದೆಸೆಯೊಳ್ದ್ರರೆಯುಹನಾ । (ಆತ್ಮಗತ)
ನೆಂದಿರೆನನ್ನುಳಿದುದೆಸೆಯುಮಾಳ್ಪುದೆದೊರೆಯಂ ॥

ಶೂರ.— ವಿಜಾತೀಯವಾದ ಉಡುಪು ಹೊಸದರಲ್ಲಿ ಮೈಗೆವಂಟದಿರುವಂತೆ ಈಗಿನ ಹೊಸಪದವಿಯು ನಮ್ಮ ವೀರಸೇನನಲ್ಲಿ ಕಾಣಿಸುತ್ತಿರುವದು.

ವೀರ.—ಕಂದಾರ್ಧ ॥ ಬಂದುವೆನೀಗಿದನಲ್ಲದೆ । (ಆತ್ಮಗತ)
ನಾಂದೆಸೆಯಂಕಾಯ್ದುಕಳೆಯೆಕಾಲವನಿನ್ನುಂ ॥ ೨೭

ಶೂರ —ಆರ್ಯನೇ ! ನಿನ್ನ ಸಮಯವ ನಿರೀಕ್ಷಿಸಿಕೊಂಡಿರುವೆವು.

ವೀರ —ಆಹ ! ನನ್ನನ್ನು ಮನ್ನಿಸುವರಾಗಿ. ನನ್ನ ಮಂದ ಬುದ್ಧಿಯು ಮರೆತದ್ದನ್ನು ಜ್ಞಾಪಿಸಿಕೊಳ್ಳುತ್ತಿತ್ತು. ದಯಾಳು ಗಳೇ ! ನಾನು ನಿಮ್ಮ ಶ್ರಮವನ್ನು ಮರೆಯತಕ್ಕವನಲ್ಲ. ಇನ್ನು ಪ್ರಭುಗಳ ಸಾನ್ನಿಧ್ಯವನ್ನೈದೋಣ ಬನ್ನಿರಿ. (ಶೂರಸೇನನಂಕುರಿತು) ಈ ನಡವಳಿಕೆಯನ್ನು ಕುರಿತು ಮುಂದಾಲೋಚನೆ ಮಾಡೋಣ. ವಿರಾಮಕಾಲವಲ್ಲಿದನ್ನು ಮತ್ತಾಲೋಚಿಸೋಣ. ಆವಾಗ ನಮ್ಮ ಅಭಿಪ್ರಾಯಗಳನ್ನು ದೃಢಪಡಿಸುವ.

ಶೂರ —ಬಹಳ ಸಂತೋಷ.

ವೀರ.—ಅದುವರಿಗೆ ಈ ರೀತಿಯೆ ಇರಲಿ. ಮಿತ್ರರೆ ! ಬನ್ನಿ ಹೋಗೋಣ.

ನಿಷ್ಕ್ರಾಂತಾಃ ಸರ್ವೇ.

೪ನೇ ಸ್ಥಾನ.

ಪಾಳಯದಲ್ಲಿ ಸಭೆ.

ಪ್ರವೇಶ.—ವಿಜಯಧ್ವಜ, ಪ್ರತಾಪರುದ್ರದೇವ, ಪ್ರತಾಪಸಿಂಹ, ಪರಿವಾರ ಜನಗಳು.

ವಿಜಯ.—ಆ ದ್ರೋಹಿ ಬರ್ಭರನಿಗೆ ಶೂಲದಂಡನೆಯು ಮಾಡಾಗಲಿಲ್ಲವೆ ? ಆ ಕೆಲಸಕ್ಕಾಗಿ ಹೋಗಿದ್ದವರಿನ್ನೂ ಹಿಂತಿರಗಿ ಬರಲಿಲ್ಲವೆ ?

ಪ್ರತಾಪ.—ಜಿಯ್ಯಾ ! ಅವರಿನ್ನು ಬರಲಿಲ್ಲ. ಬರ್ಭರನು ಶೂಲ ದಂಡನೆಯಿಂದ ಪ್ರಾಣಬಿಡುತ್ತಿದ್ದದ್ದನ್ನು, ಕಂಡವನೊಂದಿಗೆ ನಾನು

ಮಾತನಾಡಿರುವೆನು. ತಾನು ದ್ರೋಹಚಿಂತನೆಯನ್ನು ಮಾಡಿದ್ದು ನಿಜವೆಂದು ಒಪ್ಪಿಕೊಂಡು, ತಮ್ಮ ಪಾದಾರವಿಂದಗಳ ಕ್ಷಮಾ ಪಣೆಯನ್ನೇ ಬೇಡುತ್ತ, ತಾನು ಮಾಡಿದ್ದಕ್ಕೆ ಬಹಳ ಪಶ್ಚಾತ್ತಾಪ ಪಟ್ಟನೆಂದು ಕೇಳಿರುವೆನು. ಅವಸಾನ ಕಾಲದಲ್ಲಿ ಅವನಿಗಿದ್ದ ಗಾಂಭೀರ್ಯವು ಯೋಗ್ಯತೆಯೂ ಜೀವಂತನಾಗಿದ್ದಾಗ ಇರಲಿಲ್ಲವಂತೆ. ಸಾಯುವಾಗ ಈ ರೀತಿ ನಟಿಸಬೇಕೆಂದು ಅಭ್ಯಾಸಮಾಡಿದವನಂತೆ, ತನಗೆ ಲೋಕೋತ್ತಮವಾದ ಪ್ರಾಣವನ್ನು ತೃಣದಂತೆಣಿಸಿದ್ದನಂತೆ.

ವಿಜಯ.—ಮನಸ್ಸಿನಲ್ಲಿರತಕ್ಕ ಪರಿಪರಿಯಾದ ಆಲೋಚನೆಯನ್ನು ಮುಖದಿಂದ ಕಂಡುಹಿಡಿಯತಕ್ಕ ವಿದ್ಯವಿಲ್ಲವು. ಈ ಬರ್ಭರನು ಯೋಗ್ಯನೆಂದು ತಿಳಿದಿವನಲ್ಲಿ ಸಂಪೂರ್ಣವಾದ ನಂಬಿಕೆಯನ್ನಿಟ್ಟಿ ದ್ದೆನು.

ಪ್ರವೇಶ,—ವೀರಸೇನ, ಶೂರಸೇನ, ನಂದರಾಜ, ವಾಸುದೇವ.

ಆಹ! ತಮ್ಮನೇ! ತಮ್ಮನೇ! (ತಬ್ಬಿಕೊಳ್ಳುವನು)

ಕಂದ ॥ ಎಂತಿತ್ತು ಪ್ರತಿಫಲವಂ ।
ಸಂತೈಪೆಕೃತಘ್ನನಾಗಿರದಪ್ರೊಲೆನುತ್ತಂ ॥
ಚಿಂತಿಸುತೆಪ್ರತಿಫಲವ ।
ನ್ನೆಂತುಂಕಾಣದಿರೆನಿನಗೆಹಂಗಿಗನಾದೆಂ ॥ ೨೭ ॥

ನನಗೆ ನೀನು ಮಾಡಿರುವ ಉಪಕಾರವು ಸಾಮಾನ್ಯವಾದದ್ದಾಗಿದ್ದರೆ ಅದಕ್ಕೆ ಪ್ರತ್ಯುಪಕಾರವನ್ನು ನಿನಗೆ ನಾನು ಮಾಡಿ ನಿನ್ನ ಹಂಗಿ ನಲ್ಲಿರುತ್ತಿರಲಿಲ್ಲ. ನನ್ನಲ್ಲಿರುವದೆಲ್ಲವನ್ನು ದ್ವಿಗುಣವನ್ನಾಗಿ ಮಾಡಿ ನಿನಗದೆಲ್ಲವನ್ನು ಕೊಟ್ಟರೂ ಅದು ನೀನು ಮಾಡಿದುಪಕಾ ರಕ್ಕೆ ತಕ್ಕ ಪ್ರತಿಫಲವಾಗುವದಿಲ್ಲ.

ವೀರ.— ಕಂದ ॥ ಪಿರಿದೊಂದನುಮಾಡಿಲ್ಲವು ।
ದೊರೆನಾಂ ನೀನಿತ್ತುದೆನಗೆಮಿಾರಿದುದೆನ್ನಂ ॥
ಧರೆಯೊಳ್ಪ್ರಜೆ ಯೆದೆರಕುತವ ।
ಸುರಿವುದುಸಾವಮಾನ್ಯಧರ್ಮವಿದರೊಳ್ಪರಿದೇಂ ॥೨೮

ವಿಜ —(ಶೂರಸೇನನ ಮುಂದಕ್ಕೆ ಕರೆಯುತ್ತ)

ವೃತ್ತ ॥ ಮರೆತಿಲ್ಲಬಾರೊಕಲಿಶೂರಸೇನನೀಂ ।
ಭರದಿಂದಮೆನ್ನಬಿಗಿದಪ್ಪುಬಾರೊನಾ ।
ನರಿತಿರ್ಪೆನಿನ್ನಕಡುಶೌರ್ಯವೆಲ್ಲವಂ ।
ಧುರಧೀರನಿನ್ನಮರೆವೆಂತುಬಾರೊನಾಂ ॥ (ತಬ್ಬಿಕೊಳ್ಳುವನು)

ಶೂರ.— ವೃತ್ತ ॥

ಎದೆಯುಲ್ಲೊರುತ ನನ್ನನೀನುಬೆಳೆಸಲ್ಕೇರೂರಿಸುತ್ತಿಂತು ನಾಂ ।
ಮುದದಿಂಪುಟ್ಟಿರೆವೃದ್ಧಿಯೈದಿಫಲಮಾಗಲ್ಕಂದವುಂನಿನ್ನಸೇ ।
ರದೆಮುತ್ತೆಲ್ಲಿಗೆಪೋಪುವೈ ಧರಣಿಯೊಳ್ಬೇರ್ಗೊಟ್ಟವೃಕ್ಷಾಗ್ರದ ।
ಲ್ಲಿದಿಸಿರ್ಪಾಫಲವೆಲ್ಲಮತ್ತೆಧರೆಯಂಧಾತ್ರೀಶಪೇಳ್ಸೇರವೇಂ ॥

ವಿಜ —ನನ್ನ ಹೃದಯಾಂಬುಧಿಯಲ್ಲಿ ಸಂತೋಷತರಂಗಮಾಲೆಗಳು ಮೇರೆದಪ್ಪಿ ನಯನಂಗಳಿಂದ ಆನಂದಬಾಷ್ಪಗಳಾಗಿ ಸುರಿಯುತ್ತಿರುವವು. ಎಲೈ ! ಬಂಧು ಮಿತ್ರ ಪುತ್ರಾದಿ ಉಪರಾಜರುಗಳಿರ ! ಕೇಳಿ. ಇಂದಿನಿಂದ ಈ ದೇಶದ ಯುವರಾಜ ಪಟ್ಟವನ್ನು ನಮ್ಮ ಜ್ಯೇಷ್ಠಪುತ್ರನಾದ ಪ್ರತಾಪರುದ್ರನಿಗೆ ಕಟ್ಟಿ ಅವನಂ ಮಾಲವ ಪತಿಯಾಗಿ ಮಾಡಿರುವೆನು. ಇವನೊಬ್ಬನೆ ಈ ರೀತಿ ಹೊಸಪದವಿಯಲ್ಲಿ ಪ್ರಕಾಶಿಸುವದಿಲ್ಲ. ಚಂದ್ರಮಂಡಲವನ್ನು ಶೋಭಾಯಮಾನ ಮಾಡುವ ನಕ್ಷತ್ರಮಂಡಲದಂತೆ ನಿಮ್ಮಲ್ಲಿ ಯೋಗ್ಯರಾದವ

ರಿಗೂ ತಕ್ಕ ಘನತೆಯನ್ನುಂಟುಮಾಡುವೆನು. ಆದರೆ ಈಗಿಲ್ಲಿಂದ ಹೊರಟು ನಮ್ಮ ವೀರಸೇನನ ವಲ್ಲಭಪುರಿಯಂ ಸೇರಿ ಮುಂದಣಾಲೋಚನೆಯಂ ಮಾಡುವೆನು.

ವೀರ.— ಕಂದ || ಅರಸನೆನಿಮ್ಮಡಿಸೇವೆಯೆ |
ಸಿರಿಯಾಗಿಹುದೆಮಗೆನೀಡಿನನಗಪ್ಪಣೆಯಂ ||
ಪುರವಮೊದಲ್ಸಾರುತ ನೀವ್ |
ಬರುವಸುವಾರ್ತೆಯನರಸಿಗೆನಾಂತಿಳಿಯಿಸುವೆಂ ||೩೧

ವಿಜಯ.—ಬಳ್ಳೇದೈಯ್ಯ! ಬರ್ಭರನೆ! ಹಾಗೇ ಮಾಡುವನಾಗು.

ವೀರ.— ಕಂದ || ಯುವರಾಜನಿಮಂಮೋಕ್ಷಣಮಾ | (ಆತ್ಮಗತ)
ಲವೇಶನಾದೀಪ್ರತಾಪರುದ್ರಂಗಡಬಂ ||
ದಿವನಿಂದಿಹಪಥದೊಳ್ಮಂ |
ದಿವನಂದಾಂಟದಿರೆದೊರೆಯದೆನಗೆದೊರೆತನಂ ||೩೨||

ನಕ್ಷತ್ರಗಳೆ! ಕ್ಷಯಿಸಿ |
ನ್ನೀಕ್ಷಿಸೆಸಮನಲ್ಲಬೆಳಕುವಕ್ಷದಬಗೆಯಂ ||
ಅಕ್ಷಿಗಳೆ! ನೋಡದಿರಿ ನೀವ್ |
ಪಕ್ಷ್ಮವತೆರೆದೀಗಳಕ್ಷಕಸದೃಶಕಗವಂ || ೩೩ ||

ನಿಷ್ಕ್ರಾಂತಃ, ವೀರಸೇನ.

ವಿಜಯ.— ಕಂದ || ವರಶೂರಕೇಳಿವನಪ್ಪೋ |
ಲ್ವರಿಲ್ಲವಿವನಗ್ಗಳಿಕೆಯಕೇಳ್ವುದನಿಶಮುಂ ||
ಪಿರಿದೌತಣಮೆನಗಿನ್ನಡೆ |
ಬರುವರೆಸುತ್ತೆಡೆಯುಗೈದಿರುವಳವನರಸೀ || ೩೪ ||

ನಿಷ್ಕ್ರಾಂತಾಃ ಸರ್ವೇ.

೫ನೇ ಸ್ಥಾನ.

ವಲ್ಲಭಪುರಿ ಅರಮನೆಯಲ್ಲೊಂದು ಹಜಾರ.

ಪ್ರವೇಶ — ಕಾಗದವನ್ನೋದುತ್ತ, ಚಂದ್ರವಲ್ಲಿ.

“ಜಯಶೀಲನಾಗಿ ಹಿಂತಿರುಗಿ ನಾನು ಬರುತ್ತಿರುವಾಗ. ಅವರನ್ನು ಕಂಡೆನು. ಅವರಿಗೆ ಮಾನವರಿಗಿಂತಲು ಹೆಚ್ಚಾದ ತಿಳುವಳಿಕೆಯುಂಟೆಂದು, ಕೇಳಿರುವದು ಮಾತ್ರವಲ್ಲದೆ, ದೃಷ್ಟಾಂತವೂ ಆಗಿರುವದು. ಇನ್ನು ಕೊಂಚ ಕೇಳಬೇಕೆಂದು ನಾನು ಆಶೆ ಪಡುತ್ತಿರಲು ಅವರಾಕಾಶದಲ್ಲಿ ಮಾಯವಾದರು. ಇದನ್ನು ಕಂಡು ನಾನು ಬೆಪ್ಪಾಗಿ ನಿಂತಿರುವಾಗ ದೊರೆಯ ಬಳಿಯಿಂದ ವರ್ತಮಾನ ಬಂತು. ಆ ವರ್ತಮಾನ ತಂದವರು, ನನ್ನನ್ನು “ಜಯ ಜಯ ಬರ್ಭರೇಶ” ಎಂದು ಹರಸಿದರು. ಈ ಪದವಿ ನನಗುಂಟಾಗುವದೆಂದಾ ಶಕ್ತಿಗಳು ನನಗೆ ಮೊದಲೇ ಹೇಳಿದ್ದರು. ಇಷ್ಟು ಮಾತ್ರವೆ ಅಲ್ಲ. ಮುಂದೆ ಪ್ರಭುವಾಗುವೆ ಎಂದು ಸಹ ಹರಸಿರುವರು. ನನ್ನ ಭಾಗ್ಯದ ಔನ್ನತ್ಯವನ್ನು ನನ್ನೊಡನೆ ಅನುಭವಿಸುವ ನನ್ನ ವಲ್ಲಭೆಗೆ ಈ ವರ್ತಮಾನ ವಿಶೇಷವನ್ನು ತಿಳಿಸಿ ನನ್ನ ಸಂತೋಷವನ್ನು ಹಂಚಿರುವೆನು. ನಿನಗೆ ಮುಂದಿರತಕ್ಕ ಪದವಿಯನ್ನು ವಿಜ್ಞಾಪಿಸಿರುವೆ. ಇದು ನಿನಗೆ ಹೃದಯಗರ್ಭಿತವಾಗಿ ಆನಂದವನ್ನು ಕೊಡಲಿ”

ವೃತ್ತ || ವಲ್ಲಭನಾಮದೊಳಿರ್ದವನೀಗಳ್ |
ಸಲ್ಲುತ ಬರ್ಭರನೆಂದಿರುತಿರ್ಪಂ |
ಅಲ್ಲದೆ ಪೋಪನೆಭೂಪತಿವೀರಂ |
ನಿಲ್ಲದದಪ್ಪುದುವಲ್ಲಭಗೀಗಳ್ || ೩೫ ||

ಆದರೆ ಇವನ ಸ್ವಭಾವವು ಅನುಮಾನವನ್ನುಂಟುಮಾಡುತ್ತಿರುವದು. ಇವನು ದಯಾರಸದಿಂದ ಪರಿಪೂರ್ಣನಾದುದರಿಂದ ಸುಲಭವಾಗಾವಲಂಬನಂಗೈವನಲ್ಲ.

ಕಂದ || ಕಾಂತನೊಳಗಾಸೆಯಿಕ್ಕ್ಕರ್ಗಂ |
ಚಿಂತಿಸುತಿರ್ಪನಿವಕಾಂಕ್ಷೆಯಿಂಮೋಣದರೋಳ್ ||
ಬ್ರಾಂತಿಪಡುತಿರ್ಪನಾದೊಡೆ |
ಶಾಂತತೆಯುನ್ನಾಳದುಮಾಡನಿವವಂಚನೆಯುಂ || ೩೬ ||

ಪಿರಿದಾಗಿ ಬೇಡುತಿರ್ದುರ್ಗಂ |
ಪಿರಿದುಂಮಾರ್ಗದೊಳಗಲ್ಲದಿರಲೊಲ್ಲನಿವಂ ||
ಅರಿಯುದಿರುವಂಕಪಟವಂ |
ಮರೆಯುದಿಹಂತಾನದಲ್ಲದೊಪಗೆದಸಿರಿಯುಂ || ೩೭ ||

ವೃತ್ತ || ಇವಂಗಡ್ಡಬರ್ಕುರ್ಗಂತಡಂಮಾಳ್ಪಧರ್ಮರ್ಗಂ |
ಇವಂಬಂದುನನ್ನೊಳ್ಮನಂದೋರ್ಪನೀಗಳ್ ||
ಇವಂಗೆನ್ನಧೀರತ್ವಂವಂತೋರ್ಪೆನಾಗಳ್ |
ಇವಂಸೋಲ್ವನೆನ್ನಾಮನಂಗೆಲ್ವಸೊಲ್ಲಿಂ || ೩೮ ||

ಪ್ರವೇಶ—ಹರಿಕಾರ.

ಹರಿಕಾರ.—ಎಲೌ ತಾಯೆ! ಈ ದಿವಸ ಸಾಯಂಕಾಲಕ್ಕೆ ಪ್ರಭುಗಳಿಲ್ಲಿಗೆ ದಯಮಾಡಿಸುತ್ತಾರಂತೆ.

ಚಂದ್ರವಲ್ಲಿ—ಹೀಗೆಂದು ವಿಜ್ಞಾಪಿಸಲು ನಿನಗೆ ಹುಚ್ಚು ಹಿಡಿದಂತೆ ತೋರುವದು. ನಮ್ಮೊಡೆಯನು ಅವರ ಸಾನ್ನಿಧ್ಯದಲ್ಲಿಲ್ಲವೆ? ಈ ವರ್ತಮಾನವೇನಾದರು ಯಿದ್ದರೆ, ಮೊದಲೇ ಅವರು ನಮಗೆ ಸಾರಣೆಗಾಗಿ ಹೇಳಿಕಳುಹಿಸುತ್ತಿದ್ದರು.

ಹರಿ.—ಸ್ವಾಮಿನೀ! ನಾನು ನಿಶ್ಚಯವನ್ನು ಅರಿಕೆ ಮಾಡಿದೆ. ನಮ್ಮೊಡೆಯರು ಮುಂಚಿತವಾಗಿ ದಯಮಾಡಿಸುತ್ತಿರುವರು. ಪದಾತಿಗಳ

ಲೋಹಿತಾಶ್ವನು ಅವರಿಗಿಂತಲು ಮುಂಚಿತವಾಗಿ ಓಡಿಓಡಿ ಉಸರೂ ಇಲ್ಲದೆ ಬಂದೀವರ್ತಮಾನವನ್ನು ಹೇಳಿರುವನು.

ಚಂದ್ರ—ಹಾಗಾದರವನಿಗೆ ಉಚಿತಾರ್ಥಗಳನ್ನು ಕೊಡಿಸು. ಅವನು ವಿಶೇಷವರ್ತಮಾನವನ್ನು ತಂದಿರುವನು.

ನಿಷ್ಕ್ರಾಂತಃ ಹರಿಕಾರ.

ಕಂದ ॥ ವಲ್ಲಭನಕೋಟೆಗೆನ್ನೀ ।
ವಲ್ಲಭನೊಡಗೂಡಿಬರುತಿಹಂದೊರೆಯನುತಂ ॥
ಸೊಲ್ಲಿಸುವಪದಾತಿಗಮುಸು ।
ರಿಲ್ಲದಿರಲ್ಕಿಪ್ಪುದೆನಿತುಸುರುಬರುವವಗೆ ॥ ೩೯ ॥

ರಗಳೆ ॥

ಪಾಡಿಬೇಡಿಕಯ್ಯನೀಡಿ ಬೇಡಿಕೊಂಬೆ ಧರ್ಮರಾಜ ।
ನೋಡುಶಮನನನ್ನನೀಗ ನೀಡಿದಯೆಯನಾಶಕರ್ತ ।
ಜಡಿಮುಕರುಣವನ್ನು ಯಮನೆ ತಡದು ಮರುಕವನ್ನುಶಮನ ।
ಕೇಡನಾನುಮಾಡುವಂತೆ ಮಾಡು ನನಗೆಮನವ ಯಮನೆ ।
ಸಲ್ಲುತಿರಲಿ ಕೋಮಲಾಂಗದಲ್ಲಿ ಕಲ್ಲಿನಂತೆ ಮನವು ।
ಮುಲುಕೊಡುವ ಹೃದಯವನ್ನು ಕಾಲಕೂಟವನ್ನು ಮಾಡು ।
ಸೊಲ್ಲನೆತ್ತದಿರಲಿ ಕರುಣ ಸೋಲದಿರಲಿ ಯಮನೆ ಹರಣ ।
ಕಾಲನಿನ್ನ ಕಾಲಪಿಡಿದು ಕೇಳಿಕೊಂಬೆನೈಯ್ಯನಾನು ।

ಕಾಳರಾತ್ರಿ ನೀನುಬಂದು ಭೂಮಿಯನ್ನು ಬಳಸಿ ನಿಂದು ।
ಮಾಡುಕಯ್ಯ ನಾಗಕಣ್ಣು ನೋಡದಂತೆ ದೇವಿ ನೀನು ।
ಕೇಳದಿರಲಿ ಮರುಕಪೇಳ್ವ " ತಾಳು " ಎಂಬ ಶಬ್ದವಾಗ ।
" ನಿಲ್ಲುನಿಲ್ಲು ವೀರಸೇನ ಕೊಲ್ಲಬೇಡ " ಎನ್ನದಿರಲಿ ।

ಪ್ರವೇಶ.—ವೀರಸೇನ

ಬಂದಬಂದ! ನನ್ನ ಕಾಂತ ಕೇಳೊ ನಿನ್ನ ಪತ್ರ ಕಾಂತ |
ಸೆಳೆದದಿರ್ಪುದೀಗಮನವ ಚಂದ್ರವಲ್ಲಿಯೊಳಗೆ ಮನವು |
ವಲ್ಲಭಂಗೆ ಬರುವದೆಂದು ಸೊಲ್ಲಿಸಿರ್ದ ರಾಜ್ಯವನ್ನು |
ಕಾಲವನ್ನು ಕಾಯದಿರದೆ ಕಾಣುತಿರ್ಪುದೀಗ ಮುದದಿ || ೩೯ ||

ವೀರ.—ಎಲಾ ವಲ್ಲಭೆ! ವಿಜಯಧ್ವಜನೀದಿವಸ ಇಲ್ಲಿಗೆ ಬರುವನು.

ಚಂದ್ರ.—ಇಲ್ಲಿಂದ ಮುಂದಕ್ಕೆ ಯಾವಾಗ ತೆರಳುವ ?

ವೀರ.—ನಾಳೆಯೆಂದು ____________ ಅವನು ಉದ್ದೇಶಿಸಿರುವನು.

ಚಂದ್ರ.—ನಾಳೆಯೊ ? ಹಾಗಾದರದಾಗುವದಿಲ್ಲ.

ಕಂದ || ವಲ್ಲಭನೆನಿನ್ನಮುಖದೊಳ್ |
ಚಲ್ಲಿಹುದೊಳಗಿರ್ಪಬಗೆಗಳೆಲ್ಲಂನೀಂಬಾ ||
ಯಲ್ಲಿಬಸವನ ನುದರದೊ |
ಳ್ನಿಲ್ಲಿಸಿಸರ್ಪವನುಕಾಯ್ದುಕಳೆಕಾಲವನುಂ ||೪೦||
ಬಂದವನನಾನೆದಿಗೊಳು |
ತಿಂದಾತಿಥ್ಯವನುನಾನೆಮಾಳ್ಪೆನುಕಾಂತಾ ||
ಮುಂದಿದರಿಂದಂನಮಗೆಂ |
ದೆಂದಿಗುಕಡೆಗಾಣದಿರ್ಪಗುರುತನಬಹುದೈ || ೪೧ ||

ವೀರ.—ಮುಂದಿದನ್ನಾಲೋಚಿಸುವ.

ಚಂದ್ರ.—ಕಂದ || ತೋರ್ಪುದುಮುಖವಿಕೃತಿಗಳೊಳ್ |
ಗಿರ್ಪಮನದಭೀತಿಯನ್ನಗನನೀಂಮುಖದೊಳ್ ||
ತೋರ್ಪಡಿಸುತಿರ್ಪೆಯಿಾಪರಿ |
ಸರ್ಪವನದರಿಂಬಿಡೆಲ್ಲವೀವಲ್ಲಭಗೆ || ೪೨ ||

____

ನಿಷ್ಕ್ರಾಂತಾ

೬ನೇ ಸ್ಥಾನ.

ವಲ್ಲಭಪುರಿಯ ಕೋಟೆಸಮೀಪ.

ಪ್ರವೇಶ.—ವಿಜಯಧ್ವಜ, ಶೂರಸೇನ, ಪ್ರತಾಪರುದ್ರದೇವ, ಪ್ರತಾಪಸಿಹ್ಮ, ನಂದರಾಜ, ಕಳಿಂಗರಾಜ, ಜಯಸಿಂಹ, ವಾಮದೇವ, ಪರಿವಾರ ಜನಗಳು.

ವಿಜಯ.—ಈ ಕೋಟೆಯು ಬಹಳ ರಮಣೀಯವಾದ ಸ್ಥಳದಲ್ಲಿರುವದು. ಇಲ್ಲಿಯ ಮಂದಮಾರುತನು ನಸ್ನಿಂದ್ರಿಯಗಳನ್ನು ಕರಗಿಸುತ್ತಿರುವನು. *

ಶೂರ.—ಜೆಯ್ಯಾ ! ಅದರಲ್ಲಿ ಸಂದೇಹವೇನು. ಅಲ್ಲಿನೋಡಿ. ಗಿಳಿಜಗಗಳು ಮನೆಮಾಡಿಕೊಂಡಿರುವವು. ಮನೋಹರವಾದ ಸ್ಥಳವಾಗಿದ್ದರೇನೆ ಅವು ಗೂಡುಗಳನ್ನು ಕಟ್ಟಿ ಅದರಲ್ಲಿ ಕೂತು ಜೋಗುಳವನ್ನು ಹಾಡುತ್ತ ಮಂದಮಾರುತನೊಂದಿಗೆ ಉಯ್ಯಾಲೆಯನ್ನಾಡುತ್ತಿರುವವು. ಅವಿರತಕ್ಕೆಡೆಯಲ್ಲೆಲ್ಲ ಮಂದಮಾರುತನು ಮನೆಮಾಡಿಕೊಂಡಿಗುವನು. †

---

* ರಾಗ || ಮೋಹನ, ರೂಪಕತಾಳ. ಧಾಟಿ—ಇನನಿನ್ನ ಜೋನಿತ್ತನ— ಅಹನೋಡುಕಾಣುತ್ತಿಹ | ಪುರಬಾಗಿಲುಗಳ || ಪ || ಇಹುದಿಲ್ಲಿಕೋಟೆಯು ಸುತ್ತ | ಬೀಸುವತಣ್ಣನೆಗಾಳಿ || ೧ || ಶುಕಶಾರಿಕಾದಿಗಳಿಲ್ಲಿ | ಹಾರುತ್ತಲಿಹವೀಗ || ೨ || ಮನಸೋಲುತಿದೆನಗೀಗ | ನೋಡಿದನೀನುಶೂರ || ೩ ||

† ರಾಗ || ಶಂಕರಾಭರಣ ನೋಟು, ಏಕತಾಳ.

ಭೂಪತಿನೋಡಿದೊ | ಕೋಟೆಯುಬಳಸಿಹ | ಜೋಲುವಬಿವರೊಳಗಿಜಗನ || ಪಿಟ್ಟಿಭನಿಂದೊಡನಾ | ಡುತಸರಸವ | ಗೂಡನುಕಟ್ಟಿಹಗೀಜಗನು || ೧ || ಕೇಳುತಕೆಳದಿಯ | ಜೋಗುಳಪಾಡನು | ಬಾಗಲಕಾಯುವಗೀಜಗನು || ಜೋಲುವಗೂಡನು | ಜೋಗುಳಪಾಡಿಗೆ | ತೊಟ್ಟಿಲುತೂಗುವಮಾರುತನು|| ಕಟ್ಟಿದಾತನ್ನಯ | ತೊಟ್ಟಿಲುಗೂಡನು | ಗೀಜಗವಕ್ಕಿಯಧರೆಯೊಳಗೆ || ಸಲಿಲದಿಬೀಸುತ | ತಣ್ಣನೆಮಾರುತ | ಮೆರೆಯದೆಇಲ್ಲದಎಡೆಯೊಳಗೆ ||೩||

ಪ್ರವೇಶ.—ಚಂದ್ರವಲ್ಲಿ, ಪರಿವಾರದೊಡನೆ

ವಿಜಯ.—ನೋಡು ! ನೋಡು ! ಈಪೂಜ್ಯಳು ನಮಗೆ ಆತಿಥ್ಯವಂ ಮಾಡಲು ಬರುತ್ತಿರುವಳು !

ಕಂದ ‖ ಪೊಂದುವುದಾನಂದವಮನ ।
ಮಂದಿರವನ್ನೈದಿಮಿತ್ರಮಂಡಲಿಯನ್ನೀ ‖
ಡಿಂದಾತಿಥ್ಯವನೆನ್ನುತ ।
ಮೊಂದಿಸಲಾಯಾಸವನ್ನು ತಂಗಿಯೆನನ್ನೋಳ್ ‖೪೩‖

ಚಂದ್ರ – ಮಹಾಪ್ರಭುವಿನ ಪಾದದಲ್ಲಿ ನಾವಿದುವರಿಗೆ ಸೇವಿಸಿರುವದನ್ನು, ದ್ವಿಗುಣವನ್ನಾಗಿ ಮಾಡಿ ತದ್ವಿಗುಣವಾಗಿ ಸೇವಿಸಿದ್ದರೂ, ಪಾದಾರವಿಂದಗಳಿಂದ ನಮಗೆ ಪಾಲಿಸಿರುವ ಪ್ರಸಾದಗಳಲ್ಲೊಂದಕ್ಕೂ ಅದು ಸಮನಾಗುವದಿಲ್ಲ. ಪೂರ್ವದಲ್ಲೇ ಅನುಗ್ರಹಿಸಿರುವ ಮತ್ತೀಚೆಗೆ ಅನುಗ್ರಹಿಸಿದ, ಅಪರಿಮಿತವಾದ ಪದವಿಗಳನ್ನು ನಾವು ಹೊರಲಾರದೆ ತಲೆಬಾಗಿ ಮಹಾಸ್ವಾಮಿಗೆ ಸದಾ ದಾಸಾನುದಾಸರಾಗಿರುವೆವು.

ವಿಜಯ –ಎಲೌ ತಂಗಿಯೆ ! ಬರ್ಬರೇಶನೆಲ್ಲಿರುವನು ? ನಾವವನಿಗಿಂತಲೂ ಮುಂಚೆ ಬರಬೇಕೆಂದು ಬೆನ್ನಟ್ಟಿಬಂದೆವು. ಆದರವನು ಸ್ವಾರಿಯಲ್ಲಿ ನಿಪುಣನು. ಮತ್ತೆ ಪಲ್ಲಭಾಭಿಮಾನ ಅವನಲ್ಲಿ ವಿಶೇಷವಾಗಿರುವದರಿಂದ ನಮಗಿಂತಲು ಮುಂಚೆ ಅವನು ಮನೆಯಂ ಸೇರಿದನು. ಎಲೌ ಮಂಗಳಾಂಗಿ ಈ ದಿವಸ ನಿನಗೆ ನಾವು ಅತಿಥಿಗಳಾಗಿರುವೆವು.

ಚಂದ್ರ.— ಮಹಾಸ್ವಾಮಿ ದಾಸರು ಸೇವೆಯಲ್ಲಿ ಸದಾ ಸಿದ್ಧರಾಗಿರುವರು. ಅವರೂ, ಅವರಿಗೆ ಸಂಬಂಧಪಟ್ಟದ್ದೂ, ಎಲ್ಲವನ್ನೂ,

ಅಡಿದಾವರೆಗೊಪ್ಪಿಸುವದರಲ್ಲಿ ಅತಿಶಯವೇನು. ಅವೆಲ್ಲಿಂದ ಬಂದವೊ ಮತ್ತಲ್ಲೇ ಸೇರುವವು.

ವಿಜಯ — ಕಂದ || ಬಂದುವನಿನ್ನಾಯಪಾಸಕೆ |

ಚಂದಿರಧರನೆಂದುವಿಾವನಾನಂದವನಾಂ ||

ವಂದಿಸುತಿರ್ಪೆಂನಿನಗಾ |

ನಂದವನೀಡೆಂಗವನನು ಚಂದಿರವದನೇ || ೪೪ ||

ನಿಷ್ಕ್ರಾಂತಾಃ ಸರ್ವೇ.

೩ನೇ ಸ್ಥಾನ.

ವೀರಸೇನನ ಅರಮನೆಯಲ್ಲಿ ಒಂದು ಕಿರುಮನೆ.

ಪ್ರವೇಶ.— (ಪರಿಚಾರಕರು ಭೋಜನಪದಾರ್ಥಗಳನ್ನು ಹಿಡಿದುಕೊಂಡು ಓಡಾಡುತ್ತಿರುವರು ನಂತರ) ವೀರಸೇನ.

ವೀರ.— ಮಾಡಿದ್ದು ಮಾಡಿದಾಗಲೇ ಕಡೆಯಾದರೆ ಸಮ. ಆ ಪಕ್ಷ ದಲ್ಲದನ್ನು ಜಾಗ್ರತೆಪಡಿಸುವದುತ್ತಮ. ಮಾಡಿದ್ದಕ್ಕೆ ಮಾಡಿದ್ದರ ದೆಸೆಯಿಂದ ಸುಫಲವಾಗುವದು. ಕೊಂದುದಕೆ ಫಲ ಮುಂದಿರದೆ ಕೊಂಪಾಗಲೇ ಕಂದಿ ಹೋದರೆ ಸರಿ. ಕೊಂದೇಟನಿಂದಲೇ ಕೊಂದ ಫಲವೆಲ್ಲ ನೊಂದುಹೋದರೆ ಸರಿಯೆ ಸರಿ. ಆದರೆ ಮುಂದಿರುವ ಕಾಲ ಕಡಲತಟದಲ್ಲಿ ನಿಂದೀಗಿರುವಾಗಲೇ ಅದರ ತರಂಗಮಾಲೆಗಳು

ನಮ್ಮನ್ನಾವರಿಸಿಕೊಂಡು, ಮುಂದೆ ತನ್ನಲ್ಲಿರುವದನ್ನು ತೋರ್ಪಡಿಸಿಕೊಳ್ಳುವದು. ಪರರಿಗೆಂದು ಬೋಧಿಸಿದ ಕ್ರೂರಕೃತ್ಯವು ಹಿಂತಿರುಗಿ ಬೋಧಿಸಿದವನಂ ಬಾಧಿಸುವದು.—

ಕಂದ ॥ ಕೊಲುವವನನ್ನವನಮನವೆ ।
ಕೊಲುವದುನಾವ್ಪರರಿಗೆಂದುಮಾಡುವವಿಷಮಂ ॥
ನಿಲಿಸಿನ್ಯಾಯಮಂನಮ್ಮೊಳೆ ।
ಯೊಳಗೇತಾಂಪಕ್ಷಭೇದವೆಸಗದಹಹಹಾ ॥ ೪೫ ॥

ಇವನೆನ್ನ ಸಗೋತ್ರಜನೋ ।
ಣಿವನುಪ್ರಜೆಯೆಂದುನನ್ನಗೃಹದೊಳ್ಮಲಗಿ ॥
ರ್ಪವನಕೊಲುವರಂಕೊಲದೀ ।
ಗಿವಗೆಂತಾತಿಥ್ಯವನ್ನೆಸಗಿಕೊಲ್ವೆನುನಾಂ ॥ ೪೬ ॥

ಇವಸಜ್ಜನನಿವನೀರಾ ।
ಜ್ಯವಧರ್ಮದೊಳಾಳುತಿರ್ಪನೆನುತರಿತುಂನಾ ।
ನಿವನಂಕೊಲ್ವೆನೆನಲ್ಕೀ ।
ಗಿವನಸುಗುಣಮೆಂತುಬೇಡದಿಹುದೀಗನುವಂ ॥ ೪೭ ॥

ನಿಲುವುದದೆಂತಾಂಬಳಿಯೊಳ್ ।
ಸಲೆಯೆಂತುಪಿಡಿವೆಕಠಾರಿಯನ್ನೀಕೈಯೊಳ್ ॥
ತಿಳಿವರದೆಂತೈಜನರೀ ।
ಕೊಲೆಯಂಬಿಡದಿರ್ಪರೆಂತವರ್ನಿಟ್ಟುಸುರಂ ॥ ೪೮ ॥

ತಿಳಿವರೆಜನಂಗಳಿಳೆಯುಂ ।
ಬಳಸುವಮಾರುತನನವರಬಿಸುಸುಯ್ಯುರದೊಳ್ ॥

ಮಳೆಯುಂಬೇಡುವರೆಜನರ್ ।
ಪೊಳೆಯುಂತದುಪರಿಯದಿರ್ಪುದೇಬಾಷ್ಪಜಳಂ ॥೪೯

ತೋರದುಕಾರಣವೊನ್ದುಂ ।
ಕಾರಲುನೀಂವಿಷವಧಾರುಣೀಶಂಗೀಗಳ್ ॥
ಜಾರೆಲೆಬಗೆಯೇಕೊಡೆನಾಂ ।
ದಾರಿಯನೀನೆತ್ತಿಪಡೆಯಕಡಿಯಲ್ಕಿವನಂ ॥ ೫೦ ॥

ಪ್ರವೇಶ —ಚಂದ್ರವಲ್ಲಿ.

ವಲ್ಲಭೆಯೆ ! ವರ್ತಮಾನವಿಶೇಷವೇನು ?

ಚಂದ್ರ —ಅರಸನೂಟ ಪೂರೈಸುತ್ತಿದೆ, ಕೊಟ್ಟಡಿಯನ್ನು ಬಿಟ್ಟು ನಿನ್ನ್ಯಾತಕ್ಕೆ ಹೊರಗೆ ಬಂದೆ ?

ವೀರ —ನಾನೆಲ್ಲಿಯೆಂದು ಅವನು ಕೇಳಿದನೆ ?

ಚಂದ್ರ.—ಹಾಗಾದರವನು ಕೇಳಿದ ಸಂಗತಿಯೂ ನಿನಗೆ ತಿಳಿಯದೊ ?

ವೀರ — ಕಂದ ॥ ಸಾಕಿನ್ನು ಸಾಕರಸಿನಾ ।
ನೀಕಜ್ಜವನೆಸಗೆನಿವನುಕೊಟ್ಟಹಸಿರಿಯುಂ ॥
ಲೋಕದೊಳದನ್ನನುಭವಿಸ ।
ದೀಕಜ್ಜವನೆಸಗಿಪಾಪಿಯಾಗೊಲ್ಲೆನುನಾಂ ॥ ೫೧ ॥

ಚಂದ್ರ.— ಕಂದ ॥ ಮದ್ದಂಮೆಲ್ಲಾಗೆನಗೀ ।
ಸುದ್ದಿಯನೊರೆದೆಯಲಮದ್ದದಡಗಲ್ಕೀಗಳ್ ॥
ಬುದ್ಧಿಕುದರುತ್ತಮಿಹುದೋ ।
ಮುದ್ದಡಗಲ್ಬಪ್ಪನಿನ್ನನಡರುತಮಿಹುದೋ ॥೫೨॥

ಪಡುತಿರ್ಪೆಯುಲಾಭಯುವಂ ।
ನಡೆಯುಲ್ಕನದಂತೆನಿನಗೆಚಾರಿತೆಶೌರ್ಯಂ ॥
ಅಡಗಿದುದೆನಿನ್ನೊಳೀಗಳ್ ।
ಪೊಡವಿಗೊಡೆಯುನಾಗವೇಳ್ಕುಮೆನುವೀಬಗೆಯುಂ ॥

ಮಾನವಭೂಷಣಮಾದುದ ।
ನೀನುಳದಿರ್ಪೆಯುಲಹೇಡಿಯುಂತಿರುತೀಗಳ್ ॥
ನೀನಿದನುಮಾಡದಿರ್ಪನ ।
ನಾನೋಡುವೆನಿನ್ನೊಳಕ್ಕರೆಯುಮಿಂತಿಹುದೇ ॥

ವೀರ.— ನಿಲ್ಲಿಸುನಿನ್ನೀಸೊಲ್ಲ ।
ನ್ನಿಲ್ಲಲೆನನ್ನಿಂದೆಪಿರಿದನೆಸಗುವಮನುಜಂ ॥
ಸಲ್ಲದಿರಲ್ಕೆನಗಿದುನಾ ।
ನೊಲ್ಲೆನಿದನ್ನೆನುವೆಧೀರಗಲ್ಲಿದುಧರೆಯೊಳ್ ॥೫೫॥

ಚಂದ್ರ — ಇಂತಿರಲೇತಕೆಮೊದಲೀ ।
ಚಿಂತೆಯುನೀಂಮಾಡದೆನಗದೇತೆಂದೆಮೊದಲ್ ॥
ಶಾಂತತೆಯಿಂಬಗೆಯುತಿದಂ ।
ಭ್ರಾಂತಿಯೊಳಿರ್ಪೆಗನೀನದೇಂಗಂಡಸೆಪೇಳ್ ॥ ೫೬

ಇದುಮೊದಲುನಿನ್ನೊಳಂಕುರಿ ।
ಸಿದಾಗತಡೆಯೊಂದುಮಿಲ್ಲದಾತೆರದೊಳದಿ ।
ರ್ದುದುಮುನಮೀಗದನೆಸಗ ।
ಲ್ಕುದಯಿಸಿದುದೆಹೇಡಿತನವುನಿನಗೀಪರಿಯಿಂ ॥೫೭॥

ಎದೆಗಚ್ಚಿಪಾಲನುಣುತಂ ।
ಮುದದಿಂಪೊಗನೋಡಿನಗುವಶಿಶುವಾದೊಡಮೇಂ ॥

ಎದೆಯುಬಿಡಿಸವರತಲೆಯುನೆ ।
ಲದೊಳೊಡೆಯುತ್ತಿರ್ದನಂತುಬಗೆಯೆನಗುದಿಸಲ್ ॥

ವೀರ —ಕಾರ್ಯಭಂಗವಾದರೊ ?

ಚಂದ್ರ — ಕಂದ ॥ ಭಂಗವಹುದೆಕಾರ್ಯಕೆಸಿ ।
ನ್ನಂಗದೊಳೊಪ್ಪುವೆಡೆಯುಲ್ಲಿಧೈರ್ಯವನೀನೀ ॥
ಗಿಂಗದಿರಿಸಿದೊಡೆಕಾರ್ಯಕೆ ।
ಭಂಗವದೆಂತಹುದುಗುಂಡಿಗೆಯುನಿರಿಸೆದೆಯೊಳ್ ॥

ಸದ್ದಡಗಲ್ಕಾಯಾಸಕೆ ।
ಸಿದ್ಧಿಯೊಳಿರೆಮಲಗಿದಾಗರಸುಕಾವವರಂ ॥
ಸಿದ್ಧೆಬಿಡದಂತೆಮಾಳ್ಪೆಂ ।
ಮದ್ದಂಪಡಿಪಾನಕಿಡುತಮಿಂದಿನನಿಸೆಯೊಳ್ ॥೬೦॥

ಮತ್ತಡರುತಿರ್ಪತಲೆಯೊಳ್ ।
ಚಿತ್ತವಿಚಿತ್ರವೆನೆಕಂಡುಬಗೆಗೆಲ್ಲೆಡೆಯುಂ ॥
ಕತ್ತಲೆಯಾಗಿಯೆಕಾಣಲ್ ।
ಸತ್ತವರಂತಾಗಿಮಲಗುವರ್ಕಾಪಿನವರ್ ॥ ೬೧ ॥

ಇನಿತಿಹಪರಿವಾರದೊಳೀ ।
ಜನಪಂಮಲಗುವನುಕಾಂತನಾವೇನೆಸಗಲ್ ॥
ಜನರೀನಿಸೆಯೊಳರಿವುದುಂ ।
ಟೆನಡೆವುದಕೆಕಾಪಿನವರೆತಾಂಗುರಿಯುಪ್ಪರ್ ॥ ೬೨ ॥

ವೀರ — ಅರಸಿಯೆಕೇಳ್ಗನ್ನೊಳ್ಪುರು ।
ಷರಲ್ಲದುದಯಿಸದುಪೆಣ್ಸುಸ್ತ್ರೀಭಾವಂ ॥

ಪರಿಕಲಿಸಿರ್ದುಂನಿನ್ನೊಳ್ |
ಪುರುಷರವಿಾರಿಸಿದಗಂಡುಗಲಿತನಮಿಹುದೆ ||೬೩||

ವಿಧುಮುಖಿಜನರರಿವರೆಮಲ |
ಗಿದೀಜನರಕ್ಕೈಕಠಾರಿಯಿಂದರಸನನಾಂ ||
ಸದೆದವರಂಗಃಕೆಸವರಿರೆ |
ರುಧಿರವನೀಕೊಲೆಯುನವರೆಮಾಡಿದರೆನುತಂ || ೬೪ ||

ಚಂದ್ರ.—ಕಂದ || ಮತ್ತಿನ್ನೇನೆಂದರಿವರ್ |
ಸತ್ತವನಂಕಂಡುತೋರಿಪೆಮ್ಮಯಖೇದಂ ||
ಅತ್ತತ್ತುಭೂಮಿಯೊಳ್ಪ್ರರ |
ಳುತ್ತಿರ್ಪುದುಮೆಮ್ಮಳಾಗಿಸದುಸಂದೆಯುಮಂ ||೬೫

ವೀರ — ದೃಢಮೆನಗಾಯ್ತೀಗಮನಂ |
ಸಡಿಲವಬಿಡುತಿದನುತಡವಮಾಡೆನುನಾನಿ ||
ನ್ನಡೆನೀನುಮನದೊಳಿರ್ಪೀ |
ಕೆಡಕಂತೋರದಕಳಂಕಶಶಿಮುಖಿಯಾಗೆ || ೬೬ ||

ನಿಷ್ಕ್ರಾಂತರ್.

೨ನೇ ಅಂಕ.

೧ನೇ ಸ್ಥಾನ.

ವೀರಸೇನನ ಅರಮನೆಯುಲ್ಲೊಂದು ಹಜಾರ.

ಪ್ರವೇಶ.—ದೀವಟಿಗೆಯನ್ನು ಹಿಡಿಸಿಕೊಂಡು, ಶೂರಸೇನ, ಅದ್ರಿ.

ಶೂರ.—ತರುಣನೆ ! ರಾತ್ರಿ ಎಷ್ಟು ಕಳೆದುಹೋಗಿರುವದು ?

ಅದ್ರಿ.—ಚಂದ್ರನಸ್ತಾಚಲವನ್ನಲಂಕರಿಸಿರುವನು. ಗಂಟೆ ಎಷ್ಟಾಗಿರುವದೊ ಗೊತ್ತಿಲ್ಲ. ಅದನ್ನು ಹೊಡೆದದ್ದು ನನಗೆ ಕೇಳಿಸಲಿಲ್ಲ.

ಶೂರ.—ಈ ದಿವಸ ಚಂದ್ರಾಸ್ತವು ಹನ್ನೆರಡು ಗಂಟೆಗಾಗತಕ್ಕದ್ದು.

ಅದ್ರಿ.—ಹಾಗಾದರಿನ್ನೂ ಹೊತ್ತಾಗಿರುವದು.

ಶೂರ.—ಇಗೋ ! ನನ್ನ ಖಡ್ಗವನ್ನು ತೆಗೆದುಕೊ. ಗಗನದಲ್ಲಿ ನಕ್ಷತ್ರಗಳೂ ಅಡಗುತ್ತಿರುವವು. ನನ್ನ ರೆಪ್ಪೆಗಳಮೇಲೆ ಸೀಸದ ಗುಂಡುಗಳನ್ನಿಟ್ಟಂತಿರುವದು. ನಿದ್ರೆ ಮಾತ್ರ ಬಾರದು :—

ಕಂದ ॥ ನಿದ್ದೆಯುಮಾಡದಲೆಯುತಿಹ ।
ಬುದ್ಧಿಯೊಳುದಯಿಸುವಘೋರಚಿಂತೆಗಳಿಂದೀ ॥
ಗುದ್ಧರಿಸಿಮಾಧವನೆಕೊಡು ।
ನಿದ್ದೆಯುನೇಮಿಸವೆಸೋಲದಿರುನೀನಿದಕೆ ॥ ೧ ॥

ಪ್ರವೇಶ.—ದೀವಟಿಗೆಯನ್ನು ಹಿಡಿಸಿಕೊಂಡು, ವೀರಸೇನ.

ನನ್ನ ಕತ್ತಿಯಂ ಕೊಡು. ಅದ್ಯಾರು ?

ವೀರ.—ಸ್ನೇಹಿತನೇ !

ಶೂರ.—ಇದೇನು ಸ್ವಾಮಿ! ಇನ್ನು ಮಲಗಲಿಲ್ಲವೆ? ಪ್ರಭುಗಳು ಶಯನವನ್ನಲಂಕರಿಸಿರುವರು. ಅವರು ಈ ದಿವಸ ವಿಶೇಷ ಸುಖವನ್ನನುಭವಿಸಿ, ಆನಂದಭರಿತರಾಗಿ. ನಿಮ್ಮ ಸೇವಾಜನಗಳಿಗೆ ಉಡಿಗೆ ಉಚಿತಾರ್ಥಗಳನ್ನು ಕಳುಹಿಸಿರುವರು. ಈ ದಿವಸದ ಜ್ಞಾಪಕಾರ್ಥವಾಗಿ, ಈ ಮುಕ್ತಾಹಾರವನ್ನು ನಿಮ್ಮರಸಿಯರಿಗೊಪ್ಪಿಸಿ, ಇಂದಿನ ಆತಿಥ್ಯದಿಂದ ಬಹಳ ಸಂತುಷ್ಟಿಯನ್ನು ಹೊಂದಿದೆವೆಂದು ವಿಜ್ಞಾಪಿಸುವಂತೆ ಅಪ್ಪಣೆಯಂ ಪಾಲಿಸಿರುವರು.

ವೀರ.—ಪ್ರಯೋಜನವೇನು. ಸ್ವೀಕರಣೆಗವಕಾಶವಿಲ್ಲದೆ, ಅನೇಕ ನ್ಯೂನತೆಯಿಂದ ಲಜ್ಜಿಪಡಬೇಕಾಗಿರುವದು. ಕಾಲವಿದ್ದರೆ ಬಹಳ ಸಂಭ್ರಮದಿಂದ ರಾಜೋಪಚಾರ ನಡೆಯುತ್ತಿತ್ತು.

ಶೂರ.—ಕೊಂಚವೂ ಊನವಿರಲಿಲ್ಲ. ಬಹಳ ಶೋಭಾಯಮಾನವಾಗಿತ್ತು. ನಿನ್ನೆ ರಾತ್ರಿ ನಾನು ಕನಸಿನಲ್ಲಿ ಶಕ್ತಿಗಳನ್ನು ಕಂಡೆನು. ಅವರ ಮಾತು ನಿಮ್ಮಲ್ಲಿ ಕೊಂಚಮಟ್ಟಿಗೆ ನಿಜವಾಗಿರುವದು.

ವೀರ.—ಅವರು ನನ್ನ ಜ್ಞಾಪಕದಲ್ಲೇ ಇಲ್ಲ. ಆದರೂ ಒಂದು ವಿರಾಮಗಳಿಗೆ ನಮಗೆ ಸಹಾಯಮಾಡಿದರೆ, ಆವಾಗಿದನ್ನಾಲೋಚಿಸಬಹುದು.

ಶೂರ.—ತಮ್ಮ ವಿರಾಮವನ್ನೇ ನನ್ನ ವಿರಾಮವು ಆಶ್ರೈಸುತ್ತಿರುವದು.

ವೀರ.—ನನ್ನ ಆಲೋಚನೆಯಂತೆ ನೀವು ಬಂದರೆ ಅದರಿಂದ ಮುಂದೆ ಸುಖವುಂಟು.

ಶೂರ.—ಸುಖಕ್ಕಾಗಿ ನಾನು ಯಾವದನ್ನೂ ನಿರಾಕರಿಸತಕ್ಕವನಲ್ಲ,

ಆದರೆ ನಿರ್ವಂಚನೆಯಲ್ಲು ರಾಜಭಕ್ತಿಯಲ್ಲು ನನ್ನ ಮನಸ್ಸು ಸದಾ ಆನಂದ ಪಡುವದು.

ವೀರ.—ಒಳ್ಳೇದು ! ಇನ್ನು ನೀವು ಸುಖನಿದ್ರೆಯಲ್ಲಿರುವರಾಗಿ.

ಶೂರ —ನಿದ್ರಾರಮೆಯು ನಿಮ್ಮನ್ನು ವರಿಸಲಿ.

ನಿಷ್ಕ್ರಾಂತಾಃ.—ಶೂರಸೇನ, ಅದ್ರಿ, ಅವರ ದೀವಟಿಗೆಯವನು.

ವೀರ —(ತನ್ನ ದೀವಟಿಗೆಯವನನ್ನು ಕುರಿತು) ನೀನು ಮಲಗುವದಕ್ಕೆ ಹೋಗು. ನಿಮ್ಮೊಡತಿಯ ಸಂಗಡ, ನನ್ನ ಕಷಾಯವಾದ ಕೂಡಲೆ ಘಂಟಾನಾದವನ್ನು ಮಾಡುವಂತೆ ಹೇಳು.

ನಿಷ್ಕ್ರಾಂತಃ.—ದೀವಟಿಗೆಯವನು.

ಕಂದ ॥ ಇದಿರೊಳಿದು ಕಠಾರಿಯೆ ? ನನ ।
ಗದರಪಿಡಿಯು ಕಾಣ್ಬುದಹಹಹ ! ಕಠಾರಿಯು ನ ॥
ನ್ನಿದಿರೊಳದೆ ಪಿಡಿದು ನೋಳ್ಪೆ ।
ಗಿದೇನು ! ಕೈಯ್ಯೊಳಗದಿಲ್ಲ ಕಾಣ್ಬುದು ಮಾತ್ರಂ ॥

ಪಿಡಿವೆನೆನಲಿಲ್ಲ ನೀಂ ಬಹು ।
ದೃಢತರದಿಂ ಕಾಣುತಿರ್ಪೆ ನನ್ನಯ ಕಣ್ಗೆ ॥
ಪಿಡಿಯೊಳಹ ಕಠಾರಿಯವೋಲ್ ।
ಕಡುಬಗೆಗಳರಲ್ಕೆ ದರ್ದು ನನ್ನೀ ಸಿರದೋಳ್ ॥ ೨ ॥

ಪುಟ್ಟಿರುವ ಕಠಾಗಿಯೊ ನೀಂ ! ।
ದಿಟ್ಟಿಸಲು ಕಠಾರಿ ಮುಟ್ಟಲಲ್ಲವೆ ? ನನ್ನಂ ॥
ನೆಟ್ಟಗೆಳೆದೊಯ್ವೆ ಹಹಹಾ ! ।
ಸಿಟ್ಟಯರಸನೆಡೆಗೆ ಬಟ್ಟೆಯನು ತೋರಿಸುತಂ ॥ ೪

ನೇತ್ರವಿವುವೋಸಗ್ಗೈವಪ್ರೊ ? |
ನೇತ್ರವಿವುಳಿದಿಂದ್ರಿಯಂಗಳಿಗೆಗಾತ್ರದಿತಾವ್ ||
ಸೂತ್ರವೊ ? ಇಹುದಿದುನೋಡಲ್ |
ಮಾತ್ರಕಠಾರಿವೊಲಹಹ ! ಇದೇನಚ್ಚರಿಯೋ ! ||

ಎಲೆ ! ಕಾಣುತಿರ್ಪನೀಂ ನಿ |
ನ್ನಲಗಿನೊಳೀಗಳಹಹಾ ! ಪೊಸದುಘನರುಧಿರಂ ||
ಕಲೆಗೊಂಡೆಸೆಯುತ್ತಿಹುದು ವೊ |
ದಲುನೀನೀಪರಿಯೊಳಿರ್ದುದಿಲ್ಲಿದುಪೊಸತು || ೬ ||

ಅಲ್ಲಲ್ಲ ಕಠಾರಿಯುನೀ |
ನಲ್ಲೆಲೆ ನಾಂಮುಂದೆಮಾಳ್ಪಕಡುಕಜ್ಜಂತಾ ||
ನಿಲ್ಲೀಪರಿಯೊಳ್ತೋಣ್ಬುದ |
ದಲ್ಲದೆಬೇರೊಂದುನಿಜಕಠಾರಿಯಿದಲ್ಲಂ || ೭ ||

ಮುತ್ತಿದನಿದ್ರಾಭರದೋಳ್ |
ಸತ್ತವೊಲಿಹುದೀಗಜಗದೊಳಿರ್ದಂ ಚೋರ ||
ರ್ಮುತ್ತುತಲಿರ್ಪರ್ಧರೆಯುಂ |
ಕತ್ತರಿಸಲ್ಪರರವಿತ್ತಮಂಕತ್ತಲೆಯೊಳ್ || ೮ ||

ಅರಮನೆಯೆಂದುಮಲಗಿಸುತ |
ವರಪಾಂಡುತನಯರಕಾದುಲಾಕ್ಷಾಗೃಹವ ||
ನ್ನಿರುಳೋಳ್ಸುಡಲಿರ್ದದುರಳ |
ಪುರೋಚನನತೆರದೊಳ್ಕೈದುತಿರ್ಪನುಮನೆಯೊಳ್||

ನಳತನ್ನರಮಣಿಯುಂಕಾ |
ಡೊಳುವಂಚಿಸಿದಂತೆನಾನುಮಿಗೆಸುಖದಿಂದಂ ||

ಮಲಗಿರ್ಪೀರಾಜನೆಡೆಗೆ ।
ಖಳನಂತಿರೆಹೊಂಚುಗೈದುತೆರಳುವೆನಹಹಾ ॥೧೦॥

ದೃಢವಾದಪೊಡವಿಯೋ! ನೀಂ ।
ಗುಡುಗದಿರೀಗಡಿಯನಾನಿಡಲ್ಪದಹತಿಯಿಂ ॥
ನಡಗುತೆನೀನೀಕಾವಳ ।
ಗಡಣಂಗೈದಿರ್ಪಭಯವಕಲಕದಿರೀಗಳ್ ॥ ೧೧ ॥

(ಘಂಟಾನಾದವಾಗುವದು.)

ನಾನಿದನೆಸಗಲ್ಪೋಗುವೆ ।
ನೀನಿನದಂಕರೆಯುತಿರ್ಪುದದಕೀಗೆನ್ನಂ ॥
ನೀನಿದನುಕೇಳದಿರುದೊರೆ ।
ಯೋ! ನಿನ್ನಸುವನೆಳೆವಂತಕನಕಿರಿಚಿದುವೇ ॥೧೨॥

ನಿಷ್ಕ್ರಾಂತಃ.

೨ನೇ ಸ್ಥಾನ.

ಶಯನಗೃಹದಬಾಗಿಲಬಳಿ.

ಪ್ರವೇಶ.—ಚಂದ್ರವಲ್ಲಿ.

ಚಂದ್ರವಲ್ಲಿ.— ಅಕ್ಕರಿಕೆ ॥
ಕುಡಿತವಿದೀಸೇವಕರಿಗೆಮತ್ತಂನನಗದುಧೈರ್ಯವನುಂ ।
ಕೊಡುತಿಹುದೀಗಳ್ನಿಶಿಯುಲಿಮತ್ತಂಮಲಗಿಹವಾಹಕರೋಳ್ ।
ಕುಡಿತದೊಳೀಗಳ್ಕಡಿದಹಮದ್ದಂಬೆರಸುತಸೇರಿಸುತಂ ।
ಕುಡಿಸಿಹೆನೀಗಳ್ಬಿಸಿಬಿಸಿಹೆಂಡಂಕೊಡಿಸುತಸೇವಕರೋಳ್ ॥೧೩॥

(ಬಳಗೆ ಶಬ್ದವಾಗುವದು.)

ಹಾಹಾ ! ಕೇಳು. ಕೂಗಿದ್ದು ಗೂಬೆ. ರಾತ್ರಿ ತಾನೆ ಅವರ ಸಂಚಾರ. ರಾತ್ರಿ ತಾನೆ ಅವು ಕೂಗುವವು. (ಬಾಗಿಲು ಬಗ್ಗಿ ಬಗ್ಗಿ ನೋಡುವಳು,)

ಅಕ್ಕರಿಕೆ ||

ಮರೆತಿಹರೀಗಳ್ದೊರೆಯನಿವರ್ಗಳ್ಕುಡಿದಿಹಮತ್ತಿನೊಳೀ |
ತರತರ ಮದ್ದಿಂಸೊರಸೊರನೀಗಳ್ಗುರಕೆಯಹಾಕುವರೋಳ್ |
ತಿರೆಯರಸೀಗಳ್ಪವಡಿಸುತಿರ್ಪಂಕನಸನುಕಾಣದವಂ |
ತೆರೆದಿಹುದೀಗಳ್ಕಿರುಮನೆಬಾಗಲ್ನೆಲಸಹವಲ್ಲಭನುಂ || ೧೪ ||

ವೀರ.– (ಕೊಟ್ಟಡಿಯೊಳಗೆ) ಅದ್ಯಾರು ! ಅದೇನು ! ಅಹಹಾ ! ಚಂದ್ರವಲ್ಲಿ.–ಓಹೋ ! ಎಚ್ಚರವಾದಂತಿದೆ ! ಶಂಕೆತೋರುವದಲ್ಲ ! ಕೆಲಸವಾದಂತೆ ಕಾಣೆ ! ಪ್ರಯತ್ನಭಂಗವೆ ಹೊತ್ತರ್ ಕಾರ್ಯ್ಯಜಯ ಕೆಡಕು ಮಾಡದು, ಕೇಳು ! ಕಿವಿಗೊಡು ! ಕಠಾರಿಗಳನ್ನು ಸಿದ್ಧವಾಗಿರಿಸಿದ್ದೆ. ಸಿಕ್ಕದೆಯಿರಲಾರವು. ಹಾಸಿಗೆಯಲ್ಲರಸನು ನಮ್ಮ ತಂದೆಯಂತೆ ಕಾಣದಿದ್ದರೆ, ಇದನ್ನ ನಾನೇ ಮಾಡುತಿದ್ದೆ. ಆಹಾ ! ಬಂದೆಯಾ ! ಬಂದೆಯಾ !

ಪ್ರವೇಶ – ವೀರಸೇನ.

ವೀರ.–ಮಾಡಿಬಿಟ್ಟೆ ! ಶಬ್ದವನ್ನೇನಾದರು ಕೇಳಿದಾ ?

ಚಂದ್ರ.–ಗೂಬೆಗಳು ಕೂಗಿದ್ದನ್ನು, ಕಪಟಗಳು ಹಾರಾಡಿದ್ದನ್ನು ಕೇಳಿದೆ. ನೀನು ಮಾತನಾಡಿದೆೊ ?

ವೀರ.–ಯಾವಾಗ !

ಚಂದ್ರ.– ಈಗ !

ವೀರ.– ನಾನಿಳಿದು ಬರುವಾಗ !

ಚಂದ್ರ.—ಹೌದು .

ವೀರ.—ಕೇಳು ಕೇಳು ! ಎರಡನೆ ಕೋಣೆಯಲ್ಲಿ ಮಲಗಿರುವರ್ಯಾರು?

ಚಂದ್ರ —ಪ್ರತಾಪಸಿಂಹ.

ವೀರ.—ಹಾ ! ಶೋಚನೀಯವಾದ ನೋಟ ! (ರಕ್ತವಾಗಿರುವ ತನ್ನ ಕೈಗಳನ್ನು ನೋಡಿ)

ಚಂದ್ರ.— ಶೋಚನೀಯವೆಂಬುದು ಶೋಚನೀಯಂ.

ವೀರ.— ಕಂದ || ನಕ್ಕನಕಟೋರ್ವಪಾಸೋಳ್ |
ಫಕ್ಕನೆ ಹಾ! ಕೊಲೆಯಿದೆಂದಮುತ್ತೋರ್ವನು ಮೇಣ್||
ಗಕ್ಕನವರೆದ್ದು ಕನಸೋಲ್ |
ಸಿಕ್ಕಿಸಿ ಶಂಕರಗೆಮನವಮುತ್ತೆ ಮಲಗಿದರ್ || ೧೫ ||

ಚಂದ್ರ.— ಇಬ್ಬರು ಒಟ್ಟಿಗಿದ್ದರು.

ವೀರ.— ಕಂದ || ಸಲಹುಮೃಡಯೆಂದನೋರ್ವಂ |
ಹಲುಬಿದಮುತ್ತೋರ್ವಕೇಳ್ದದತಥಾಸ್ತುನುತಂ||
ಕೊಲೆಪಾತಕನನೆಸಗಿರೆ ಬ |
ರಲಿಲ್ಲನಾಲಗೆಯತುದಿಗೆಮೃಡಶಬ್ದವೆನಗೆ || ೧೬ ||

ಚಂದ್ರ.— ಈ ಕೃತ್ಯಗಳಲ್ಲೀರೀತಿ ಆಲೋಚನೆಯಂ ಮಾಡಬಾರದು. ಮಾಡಿದರೆ ಬುದ್ಧಿವಿಕಲ್ಪವಾಗುವದು.

ವೀರ.—ರಗಳೆ ||

ವಲ್ಲಭೆಯೆನಿಸೆಯಲ್ಲಿ ಜನಪನಿರ್ಪೆಡೆಯಲ್ಲಿ |
" ಮುಂದಿಲ್ಲನಿದ್ರೆಯುಂ ಕೊಂದಿರ್ಪೆನಿದ್ರೆಯುಂ |
ನೊಂದವಗೆತೈಲವಂ ಸೋಲ್ದಂಗಶಾಕವಂ |

ಸುಖವಹದಿನಾಂತ್ಯವಂ ಬಡಜನದಭಾಗ್ಯವಂ ।
ವಲ್ಲಭನೆಕೇಳೆಂತ " ಕಯ್ಯೆತ್ತಿಸಾರ್ದಂತ ।
ದಿಲ್ಲಿಲ್ಲ ನಿನಗೆಂದ ದಲ್ಲೆಲ್ಲ ಕೂಗುತ್ತ ।
ದಲ್ಲೆಲ್ಲು ಕೇಳುತ್ತ ದಡಿಗಡಿಗೆಪೇಳುತ್ತ ।
ಗಡಗಡನೆನಡುಗದಕೆ ಪಡುತಿರ್ದೆಭಯವನ್ನು ॥ ೧೬ ॥

ಚಂದ್ರ.— ಹಾಗೆಂದರೇನು ?

ವೀರ.— ಕಂದ ॥ ಸಲ್ಲದುನಿನಗಿನ್ನು ಮಲಗು ।
ವಲ್ಲಭಕೊಂದಿರುವೆ ನಿದ್ರೆಯಂ ಬರ್ಭರಗಿ॥
ನ್ನಿಲ್ಲೆಂದುಂಶಯನೋತ್ಸವ ।
ವಿಲ್ಲದುಕೇಳ್ವೀರಸೇನ ಸಿನಗೆಂದುದದೌ ॥ ೧೭ ॥

ಚಂದ್ರ —ಕಂದ ॥ ಕಾರ್ಯವಿದಾಯ್ತೀಗಬರಿದು ।
ಮರ್ಯಾದೆಯಬಿಟ್ಟುಬಳಲುತಭ್ರಾಂತಿಯೊಳಂ ॥
ಶೌರ್ಯವನೀಡಾಡುತಿರುವೆ ।
ಧೈರ್ಯವತಾಳ್ದುತೊಳೆಕಾಂತಕ್ಕೈಗಳನೀರೊಳ್ ॥

ತಂದೇಕೆಕಠಾರಿಗಳಂ ।
ಕೊಂದಾದಬಳಿಕ್ಕಕಾವಲಿರ್ಪರಬಳಿಯೊಳ್ ॥
ನಿಂದಿರಿಸದೆಮತ್ತೊಯ್ದಿವ ।
ಸುಂದರಿಸವರಮೊಗವಂಪೂಸರುಧಿರಕಳೆಯಿಂ ॥೧೮॥

ವೀರ.— ಪೋಗೆನುಪೋಗೆನುಮತ್ತೀ ।
ವಿರ್ಗಾಗಲೆಮಾಳ್ವುದಕೆತೋರ್ಪುದೆನಗಿಂತುಭಯಂ॥

ಪೋಗೊಳಗೆನಾನವನನು ।
ತ್ತೀಗಳ್ಕಣ್ದೆರೆದುನೋಡಲಮ್ಮೆನೆಹಹಹಾ ॥ ೨೦ ॥

ಚಂದ್ರ — ಫಡ ! ದೃಢಮಿಲ್ಲಮನಸಿನಿನಗೆ ।
ಕೊಡೀಕಠಾರಿಯನುಮಡಿದುಮಲಗಿರ್ಪರನೀಂ ॥
ನಡೆನೋಡಿಪಾಲಕುಡಿವೆಳ ।
ಹುಡುಗನವೊಲ್ಗುಮ್ಮನೆಂದುಹೆದರುತ್ತಿರ್ಪೈ ॥೨೦

ಕೊಡುನಾನೊಳಪೋಗೀಗವ ।
ನೊಡಲಿಂಪರಿತರ್ಪರುಧಿರಧಾರೆಯನೀಗಳ್ ॥
ತೊಡೆವೆಮಲಗಿರ್ಪರವೊಗಕೆ ।
ಮಡಿದನರಸನಿವರ್ಗಳಂದೆನುವವೋಲ್ಜನಗಳ್ ॥೨೨

ನಿಷ್ಕ್ರಾಂತಾ. (ಒಳಗೆ ಶಬ್ದವಾಗುವದು.)

ವೀರ.— ಕಂದ ॥ ಗೆದರಿದೆಲ್ಲಾದುದುನಾಂ ।
ಬೆದರುವೆನೇಕೀಗಳಂತುಗದರಿಕೆಗೆಲ್ಲಂ ॥
ಇದಿರೊಳಿವೆಕೈಗಳಹಹಾ ।
ಇದೇನು ! ಕೀಳಲ್ಬರುತಿವವೆನ್ನೋಳ್ಕಣ್ಣಂ॥೨೩॥

ಉದಧಿಯುದಕಮುತೊಳೆಯಬ ।
ಲ್ಲದೇ ? ದೊರೆಯುಸದೆದಕೈರಕುತಮಂಭರದಿಂ ॥
ದದುದಧಿಬಣ್ಣಮಕೆಡಿಸೆಸ ।
ಗದಿರ್ಪುದೇ? ರಕುತದುದಧಿಯಾಯಿತ್ತದೆನುವವೋಲ್॥

ಪ್ರವೇಶ.— ಚಂದ್ರವಲ್ಲಿ.

ಚಂದ್ರ.—**ನೋಡು ! ನನ್ನ ಕೈಬಣ್ಣವೂ ನಿನ್ನ ಕೈಯಂತಿರುವದು.**

ನನ್ನ ಹೃದಯವೂತ್ರ ನಿನ್ನ ಹೇಡಿ ಹೃದಯದಂತಿಲ್ಲ. (ಶಬ್ದ ವಾಗುವದು.) ಕೇಳು! ದಕ್ಷಿಣಗೃಹದ್ವಾರವಂ ತಟ್ಟಿದಂತೆ ಶಬ್ದ ವಾಗುವದು. ನಡಿ! ನಮ್ಮ ಬಿಡಾರಕ್ಕೆ ಹೋಗುವ. ಕೈತೊಳೆ. ನಿಲುವಂಗಿ ತೊಡು. ಇದೆಲ್ಲ ಮರೆಯಾಗುವದು. ಇನ್ನೀ ಖಿನ್ನ ಹೃದ ಯವ ಬಿಡು. ತಿಳಿ! ಇದರಿಂದ ಮುಂದಿರುವ ಸುಖವ. ಏಳು! ಕಾರ್ಯಗೌರವದಿಂದ ಯಾರಾದರು ಬಂದಾರು. ನಡಿನಡಿ! ನಾವೆಚ್ಚರ ವಾಗಿದಾರೆಂದವರರಿತಾರು.

ವೀರ.— ಕಂದ ॥ ನಾನನ್ನ ನರಿಯದಿರ್ಪುದೆ ।
ನಾನನುಭವಿಪಸುಖ * ಕೇಳ್ದೊರೆ ನೀನಿದನುಂ ॥
ನೀನಿದನುಂಕೇಳ್ದೇಳ್ಕೈ । *(ಶಬ್ದವಾಗುವದು)
ನೀನೇಳೇಳೆನ್ನದೊರೆಯೆ! ಏಳೇಳುಸಿರಿಯೆ! ॥

ನಿಷ್ಕ್ರಾಂತರು.

೩ನೇ ಸ್ಥಾನ.

ಗೃಹದ್ವಾರದ ಒಳಭಾಗ.

ಪ್ರವೇಶ —ದ್ವಾರಪಾಲಕ (ಮಲಗಿದ್ದವನೆಚ್ಚರವಾಗುತ್ತ)

ದ್ವಾರಪಾಲಕ.—ಐಯ್ಯೊ! ಐಯ್ಯೊ! ಇದೇನು! ಈ ಬಾಗಲು ಕಾ ಯೋದು ಸಾಕು, ಈ ಸೈತಾನ ಕಾಟವು ಸಾಕು. ನೆಲಕ್ಕೆ ಇನ್ನು ತಲೆ ಕೊಡಲಿಲ್ಲ ಆಗಲೆ ಸುತ್ತಮುತ್ತ ಕುಣಿತದೆ. * (ಶಬ್ದವಾ ಗುವದು)

---

* ರಾಗ, ಶಂಕರಾಭರಣ ನೋಟು, ತಾಳ.— ಚಾಪು.

ಐಯ್ಯೋಐಯ್ಯೋ । ನಾನೇನಮಾಡಲಬ್ಬಬ್ಬ ॥ ಪ ॥ ಮುಂದೇನುಗತಿಯಾಗು

ಅಲ್ಲ ! ಅಲ್ಲ ! ಇದು ನಿಜವಾದ್ದು ಸೈತಾನಲ್ಲ. ಯಾವದೊ
ಹೆಂಡಾಕುಡಿದಿರೊ ಸೈತಾನ್ (ಶಬ್ದವಾಗುವದು) ಅರೆ ನಿನ್ಯಾರೊ ?
ಪೀಡೆನೊ ಪಿಶಾಚಿಯೊ (ಶಬ್ದವಾಗುವದು) ಅರೆ ಸದ್ದಿಲ ಸದ್ದು ಸದ್ದು.
ಏನು ಯಾರು ಹೇಳೋರು ಕೇಳೋರಿಲ್ಲವೇನೊ. (ಶಬ್ದವಾಗುವದು)
ಅರೆ ಅದು ಯಾಕೆ ತೆಳ್ತೀಯೆ ಅದು ಬರೋಕಿಲ್ಲ. ಅಗ್ನಿದಿವ್ಯಾಗೆ
ಹಾಕಿವ್ನಿ. (ಶಬ್ದವಾಗುವದು) ಅರೆ ಹಾಸ್ಗೆಗೀಸ್ಗೆ ಎತ್ತಿಗಿತ್ತಿ ಬಾ
ಗಲ್ಗೆಗೀಗಲ್ಗೆ ತೆಗೀತಿನಿ ತಾಳೊ (ಶಬ್ದವಾಗುವದು) ಅರೆ ಇಸ್ಕಿ ನಿನ
ಗೇನು ಸೈತಾನ್ ಹಿಡದುಗಿಡದ್ದೈತೆ. (ಶಬ್ದವಾಗುವದು)
ಅರೆಬಾಗಲ್ ಮರತಿದ್ದೀನಿ ತಾಳಾದರು ತಾಳೊ. (ಶಬ್ದವಾಗುವದು) ‡
ಅರೆ ನಿಂದಪ್ಪಾಸತ್ತವ್ಳೆ ? ನಿಂದವ್ವಾಗೆ ಓಡೋದ §

ಬಾಕಲುತೆಗೆಯುವನು.

ವದೊಕಾಣೊ ॥ ಅ ॥ ಕೇಡಗಾಲವು । ಕೂಡಿಬಂದಿದೆ । ಗಡ್ಡವೆಲ್ಲವದೊಡ್ಡ
ದುಸೈತಾನಕಿತ್ತಿತು ॥ ೧ ॥ ಸಾಬಿಯೊಬ್ಬೋನೆ । ಬೀಬಿಬಿಟ್ಟೀಗ । ಉಟ್ಟ
ಬಟ್ಟೇಲಿಬಾಗಿಲನಾಂಕಾದುಇರ್ತೇನು ॥ ೨ ॥

‡ ರಾಗ.—ಖಾರವಿ, ಏಕತಾಳ.

ಭಂಗಿನಾಸೇದೀಗಮಲಗಿನಾನಿರ್ತೇನು ॥ ಪ ॥ ಚಿಲ್ಮೆಚಿಲ್ಮೆಹೊಗೆಯುಸೇದಿ
ಮರತಿಹೆ ಬಾಗಲು । ದುಗಾಣಿಭಂಗಿಬಂದೊಂದ್‌ಚಿಲ್ಮೆತರುವೆಆಣಿಗೇಳ್ ।
ಅರ್ದಆಣಿಮದ್ದನುತಿಂದುಗುರ್ಕ್ತೆಹಾಕಿದೆ ॥ ೧ ॥ ಹಾಸ್ಗೆನಾಂಬಿಟ್ಟೀಗಬರುತ
ನಾನಿರ್ತೇನು ॥ ಪ ॥ ಸದ್ದನೀನೆಸಗಬೇಡತೆಗೆವೆನುಬಾಗಲು । ನಿದಾನಮಾಡೆ
ನಾನೀಗಳ್‌ಬರುವೆಬೇಗನಾಂ । ಹಾಸ್ಗೆಗೀಸ್ಗೆಎತ್ತುತಬಾಗಲ್‌ಬೇಗಬಿಚ್ಚೂವೆ॥ ೨

§ ರಾಗ.—ಹಿಂದುಸ್ತಾನಿ ನೋಟು, ಏಕತಾಳ.

ಧಾಟಿ.—ಸಬ್‌ಜಂಗಲ್ ಸಾರಧುಡುಂಗೆ—

ಎಲಬಾಗಲ್‌ನೀನುತಪ್‌ಬೇಡ । ತುಸತಾಳುನಾನುಪಿಳುವೆ । ದಾರಿಕಾಣೆಗೋಡೆ
ಹಾಯುವೆ । ಅರೆಬಾಗಲ್‌ನಾಂಬೇಗ್ಬಿಚ್ಚುವೆ । ಎಲ ನಿಲ್ ನಿಲ್ ನಿಲ್ ನಿಲ್ ನಿಲ್ ॥

ಪ್ರವೇಶ.—ಜಯಸಿಂಹ, ಕಳಿಂಗರಾಯ.

ಅರೆ ಸಾಮಿಾಜಿ! ಸಲಾಂಗೆ ತಕೋಳಿ.

ಜಯಸಿಂಹ.—ಇದೇನೈಯ್ಯಾ! ಇನ್ನೂ ಮಲಗಿದ್ದೀಯೆ? ಮಲಗ ಲೇನು ತುಂಬಾ ಹೊತ್ತಾಯಿತೊ?

ದ್ವಾರ.—ಅರೆ ಸಾಮಿಾಜಿ! ಕಣಿ ಕೋಳಿ ಕೂಗೊತಂಕ ನಮ್ದು ಆರ ಪಂಟಗೆ ಮುಚ್ಚಲಿಲ್ಲ. ಅದರಮೇಲೆ ತುಸ ಗಾಂಜಾಗೆ—— ——

ಜಯಸಿಂಹ.—ನಿಮ್ಮ ಯಜಮಾನರೆದ್ದಿರುವರೆ?

ಪ್ರವೇಶ.— ವೀರಸೇನ.

ಅಗೊ! ನಮ್ಮ ಗಲಬಿಲಿಯನ್ನು ಕೇಳಿ ಬರುತ್ತಿರುವರು.

ಕಳಿಂಗ.—ಆರ್ಯನಿಗೆ ಮಂಗಳವಾಗಲಿ.

ವೀರ.—ಉಭಯತ್ರರಿಗೂ ಮಂಗಳ.

ಜಯಸಿಂಹ.—ಎಲೈ ನರೋತ್ತಮನೆ ಪ್ರಭುಗಳು ಉದಯವನ್ನೈದಿ ದರೊ?

ವೀರ.—ಇನ್ನು ಯಿಲ್ಲ.

ಜಯಸಿಂಹ.—ಮುಂಜಾನೆಯೆ ಎಬ್ಬಿಸುವಂತವರು ಅಪ್ಪಣೆಯಂ ಪಾಲಿಸಿ ದ್ದರು. ಕಾಲ ಮಿಾರುತ್ತಿರುವದು.

ವೀರ.—ನಿಮ್ಮನ್ನವರ ಸಾನ್ನಿಧ್ಯವನ್ನೈದಿಸುವೆನು.

ಜಯ.—ನಿರ್ಭಯದಿಂದ ಗಟ್ಟಿಯಾಗಿ ಕೂಗಿ ಎಬ್ಬಿಸುವೆನು. ಹಾಗೆ ಮಾಡಲು ಅವರೇ ಅಪ್ಪಣೆಯಂ ಕೊಟ್ಟಿರುವರು.

ನಿಷ್ಕ್ರಾಂತಃ—ಜಯಸಿಂಹ.

ಕಳಿಂಗ.—ಪ್ರಭುಗಳು ಈ ದಿವಸ ಇಲ್ಲಿಂದ ಹೊರಡುವರೊ?

ವೀರ.—ಹೌದು. ಹಾಗೆಂದವರು ಅಪ್ಪಣೆಕೊಟ್ಟಿದ್ದರು.

ಕಳಿಂಗ – ಈ ದಿನ ರಾತ್ರಿಯಲ್ಲಿ ಬಿರುಗಾಳಿ ಬೀಸುತ್ತ, ಭಯಂಕರವಾಗಿತ್ತು. ನಾವು ಮಲಗಿದ್ದ ಕಡೆ ಗೋಡೆಗಳೂ ಲಾಂದ್ರದ ಕಂಬಗಳೂ ಬಿದ್ದುಹೋದವು. ಆಕಾಶದಲ್ಲಿ ದ್ಭುತಗಳು ಕಾಣಿಸಿದವಂತೆ. ಹಿಂಸೆಯಿಂದ ಪ್ರಾಣಬಿಡುವಂತೆ ಘೋರವಾದ ಆರ್ತಧ್ವನಿಗಳು ಕೇಳಿಸಿದವಂತೆ. ಕ್ಷೋಭ ಪ್ರಾವಗಳ ಸೂಚನೆಗಳು ಕಂಡವಂತೆ. ಭೂಕಂಪವಾಗಿ ಭೂಮಿ ಅದರಿತೆಂದು ಕೆಲವರು ಹೇಳುವರು. ಧೂಮಕೇತುಗಳು ಕಂಡವಂತೆ. ನಕ್ಷತ್ರಗಳುದರಿದವಂತೆ.

ವೀರ.–ನಿಜ. ರಾತ್ರಿ, ಬಹಳ ಭಯಂಕರವಾಗಿತ್ತು.

ಕಳಿಂಗ –ನನಗಿರುವ ಅಲ್ಪ ತಿಳುವಳಿಕೆಯಲ್ಲಿ ಇದಕ್ಕೆ ಸಮನಾದ ರಾತ್ರಿಯನ್ನು ನಾನು ಕಂಡವನಲ್ಲ.

ಪ್ರವೇಶ.–ಜಯಸಿಂಹ.

ಜಯಸಿಂಹ.–ಐಯ್ಯೋ! ಇದೇನುಕೇಡು! ಇದೇನುಕೇಡು! ಇದೇನುಕೇಡು! ಕಣ್ಣಾರ ನೋಡಲಾಗದು! ಬಾಯಾರ ಹೇಳಲಾಗದು.

ವೀರ, ಕಳಿಂಗ.–ಅದೇನುಸಂಗತಿ?

ಜಯಸಿಂಹ.–ಐಯ್ಯೋ! ದೌರ್ಭಾಗ್ಯವು ತನ್ನ ಮಾಹಾತ್ಮ್ಯವನ್ನು ತೋರಿರುವದು. ದ್ರೋಹವು ಮನೆನುಗ್ಗಿ ಸಿಂಹಾಸನಾಧಿಪತಿಯ ಹರಣವಂ ಕದ್ದೊಯ್ದಿರುವದು.

ವೀರ.– ನೀನೇನ ಹೇಳದೆ? ಹರಣವೆಂದರೇನು?

ಕಳಿಂಗ.–ಪ್ರಭುಗಳ ಹರಣವೆಂದೆಯಾ?

ಜಯ.– ಏನೆಂದು ಕೇಳದಿರಿ. ನೀವೇನೋಡಿ ನಿಮ್ಮ ಕಣ್ಣುಗಳನ್ನು ಸುಡಿ.

ನಿಷ್ಕ್ರಾಂತರ್.–ವೀರಸೇನ, ಕಳಿಂಗ.

ಏಳೇಳು! ! ಕೂಗ ಕೇಳೇಳು! ಏಳೇಳು! ! ದ್ರೋಹವ ನೋಡೇಳು! ಏಳೇಳು! ! ಕೊಲೆಗೈದಿಹರೇಳು! ಏಳೇಳು! ! ಶೂರಸೇನ ನೀನೇಳು! ಏಳೇಳು! ! ಪ್ರತಾಪಸಿಂಹನೇಳು! ಏಳೇಳು! ! ಪ್ರತಾಪರುದ್ರನೇಳು! ಏಳೇಳು! ! ಮೃದುತಲ್ಪ ಬಿಟ್ಟೇಳು! ಏಳೇಳು! ! ಭಾಗ್ಯವಳಿದಿಹುದೇಳು! ಏಳೇಳು! ! ಶೂರನೇಳು! ಸಿಂಹನೇಳು! ರುದ್ರನೇಳು! ಏಳೇಳು! ! ಪ್ರೇತದಂತೆ ಶಯನಸಮಾಧಿಯಿಂದೇಳು! ಏಳೇಳು! ! ಪಿತನಳಿದಿಹನೇಳು!

ಪ್ರವೇಶ, ಚಂದ್ರವಲ್ಲಿ

ಚಂದ್ರವಲ್ಲಿ —ಇದೇನುಸಂಗತಿ. ಇಷ್ಟು ಘೋರವಾದ ಕೂಗಾಗುವದು. ಮನೆಯಲ್ಲಿ ಮಲಗಿರುವರ್‍ಯಾರು? ಇದೇನು ಹೇಳು ಹೇಳು.

ಜಯಸಿಂಹ.— ಆರ್‍ಯಳೆ! ಇದನ್ನು ನಿಮ್ಮ ಕಿವಿಯಲ್ಲಿ ಹೇಳಲಾಗದು. ಅಬಲೆಯರು ಇದನ್ನು ಕೇಳಿದಮಾತ್ರಕ್ಕೆ ಪ್ರಾಣಬಿಡುವರು.

ಪ್ರವೇಶ.—ಶೂರಸೇನ.

ಐಯ್ಯೋ! ಶೂರನೇ! ಶೂರನೇ! ಪ್ರೊಢವಿಯೊಣ್ಣನನ್ನು ಕೊಂದಿರುವರು.

ಚಂದ್ರ — ಹಾ ಪಾಪವೆ! ಇದೇನು ನಮ್ಮ ಮನೆಯಲ್ಲೆ?

ಶೂರ —ಸಿವಸಿವ! ಎಲ್ಲಾದರೇನು! ಹಾ! ಮಿತ್ರನೆ! ಹಾ! ಜಯಸಿಂಹನೆ! ನಾನು ಹೇಳಿದ್ದು ಸುಳ್ಳೆಂದಾದರು ಹೇಳು.

ಪ್ರವೇಶ.—ವೀರಸೇನ, ಕಳಿಂಗ.

ವೀರ.— ಕಂದ ॥ ಗಳಗೆಗೆಮೊದಲಾನಳಿದಿರ ।
ಲಳಯುತಲಿರ್ದೆಸುಖದಿಂರಕುತಕಂಡನೆಣಂ ॥
ಗಳಳವುವಿನ್ನಿ ೀತನುವಿಂ ।
ಗುಳವುದಿದೊಂದಸ್ಥಿಪಂಜರಂಮುಂದಿಳೆಯೋಳ್॥—೩೪

ಪ್ರವೇಶ.—ಪ್ರತಾಪರುದ್ರದೇವ, ಪ್ರತಾಪಸಿಂಹ.

ಪ್ರತಾಪರುದ್ರ.—ಕಳವಳವಿದೇನು ?

ವೀರ.- ನೀವಿಲ್ಲಿದ್ದು ನಿಮಗಿದು ತಿಳಿಯದೆ? ಮೂಲವಾದುಗಮವೇ ಬರಿದಾಗಿರುವದು. ನಿಮ್ಮ ಶೋಣಿತದ ಝರಿಯು ನಿಂತುಹೋಗಿರುವದು. ಅದು ಅಡ್ಡಕಟ್ಟಲ್ಪಟ್ಟಿರುವದು.

ಜಯ.– ನಿಮ್ಮ ರಾಜಪಿತನು ಕೊಲಲ್ಪಟ್ಟಿರುವನು.

ಪ್ರತಾಪರುದ್ರ –ಐಯ್ಯೋ ! ಯಾರಿಂದ ?

ಕಳಿಂಗ.– ವೈಗಾವಲಿಗಾಗಿ ಮಲಗಿದ್ದವರಿಂದಲೆಂದು ತೋರುವದು. ಅವರ ಮುಖವೂ ಕೈಗಳೂ ರಕ್ತಮಯವಾಗಿರುವವು. ಅವರ ಬುದ್ಧಿಭ್ರಮಣೆಯನ್ನು ಬಿರುನೋಟವನ್ನು ನೋಡಿದರೆ ಯಾರ ಜೀವಕ್ಕೂ ಉಳಿವಿರುವಂತೆ ಕಾಣುವದಿಲ್ಲ.

ವೀರಸೇನ –ಆಹಾ ! ಕೋಪಾವೇಶದಲ್ಲಿ ನಾನು ಮಾಡಿದ್ದಕ್ಕೆ ಪಶ್ಚಾತ್ತಾಪಪಡುತ್ತಿರುವೆನು. ಅವರನ್ನು ನಾನು ಕೊಂದುಬಿಟ್ಟೆ.

ಜಯಸಿಂಹ.– ಹಾಗೇತಕ್ಕೆ ಮಾಡಿದೆ.

ವೀರ.– ಕಂದ|| ಅರಿವುಂಬೆಪ್ಪುಂದ್ರೋಹಮು ।
ಮರಸನೊಳುರೆನಿಷ್ಠೆಕೋಪಶಾಂತಂಗಳ್ ಪೇಳ್ ||
ಬೆರಸುತಿವುನರರೊಳಪ್ಪುವೆ ।
ತರಿದೆನುನಾನಿವರನುರಿವಕೋಪದೊಳದರಿಂ ||೨೫||

ಚಂದಿರವಚಂದಿರಗೆತೊಡೆ ।
ದಂದದಿಧರಣೀಶನಿರ್ಪನೀಗಕಟಕಟಾ ||
ಕೊಂದಿರ್ಪರವನಬಳಿಯೊಳ್ ।
ಪಂದಿಯೊಲುಕೆಡೆದಿರಲಿಂದ್ರಿಯಂಗಳುಕೆಣಕವೆ ||

ಚಂದ್ರ.— ಹಾ! ನನ್ನನ್ನು ಹೊರಕ್ಕೆ ಸಾಗಿಸಿ.

ಜಯಸಿಂಹ.—ಅಬಲಾಮಣಿಯನ್ನು ನೋಡಿಕೊಳ್ಳಿ.

ಪ್ರತಾಪರುದ್ರ.— (ರಹಸ್ಯವಾಗಿ ಪ್ರತಾಪಸಿಂಹನೊಂದಿಗೆ) ನಮ್ಮ ನಾಲಿಗೆಗಳೇತಕ್ಕೆ ಸುಮ್ಮನಿರುವವು. ಇವರ ವಿಷಯವಾಗಿ ಕೊಂಚವೂ ಮಾತನಾಡದೆ ಇರುವವಲ್ಲ.

ಪ್ರತಾಪಸಿಂಹ.—ಇಲ್ಲೇನು ಹೇಳತಕ್ಕ ಪ್ರಯೋಜನ? ನಮ್ಮ ದುರದೃಷ್ಟವು ಇಲ್ಲಿ ಯಾವ ಬಿಲದಲ್ಲಿ ಬಾತಿರುವದೊ. ಅದು ಯಾವಾಗ ಹೊರಗೆ ಬಂದು ನಮ್ಮ ಕಚ್ಚುವದೊ? ಈಗೀಸ್ಥಳವನ್ನೇ ಬಿಟ್ಟು ಹೋಗುವದುತ್ತಮ. ನಮ್ಮ ಕಣ್ಣುಗಳನ್ನು ಮರಳಲಿಲ್ಲ.

ಶೂರ.—ಅಬಲಾಮಣಿಗೆ ಸಹಾಯಮಾಡಿ (ಚಂದ್ರವಲ್ಲಿಯನ್ನು ಹೊತ್ತುಕೊಂಡು ಹೋಗುವರು.) ಚಳಿಗಾಕರವಾಗಿರುವ ನಮ್ಮಂಗಗಳನ್ನ ವಸ್ತ್ರಗಳಿಂದ ಮರೆಮಾಡಿಕೊಂಡು ಮತ್ತೆ ನಾವು ಸೇರಿ ಈ ಭಯಂಕರವಾದ ವಿಷಯವಂ ವಿಚಾರಿಸೋಣ.' ಅನುಮಾನವು ಮನಸ್ಸನ್ನು ತಲ್ಲಣಗೊಳಿಸುತ್ತಿರುವದು.

ಕಂದ || ಪೊಡವಿಯುದರದೊಳುಪೊಕ್ಕಿ |
ದೊಡಂಬಿಡನುಶೂರಸೇನನೀದ್ರೋಹಿಯತಾಂ ||
ಬಿಡನವನಿವನಂಶಂಕರ |
ನಡಿಯಾಣೆಬಿಡಬಿಡಮುಂದಿವನಜಡಿಯಧವಂ ||೨೮

ಜಯಸಿಂಹ.—ನಾನೂ ಹಾಗೇಸರಿ.

ಎಲ್ಲರು.— ನಾವೂ ಹಾಗೇ ಸರಿ.

ವೀರ.—ಜಾಗ್ರತೆ ಬಟ್ಟೆಗಳನ್ನು ಧರಿಸೆಲ್ಲರು ಸಭಾಸ್ಥಾನದಲ್ಲಿ ಸೇರೋಣ ಬನ್ನಿ.

ಎಲ್ಲರು.—ಒಳ್ಳೇದು. (ಪ್ರತಾಪರುದ್ರದೇವ, ಪ್ರತಾಪಸಿಂಹ, ಬಿಟ್ಟು ಎಲ್ಲರು ಹೋಗುವರು.)

ಪ್ರತಾಪರುದ್ರ.—ನೀನು ಈಗೇನಮಾಡುವೆ? ನಾವು ಇವರ ಜೊತೆಯಲ್ಲಿ ಸೇರುವದರಿಂದ ಪ್ರಯೋಜನವಿಲ್ಲ. ಒಳಗಿಲ್ಲದ ದುಃಖವನ್ನು ಹೊರಗೆ ತೋರ್ಪಡಿಸುವದು ವಂಚಕರಿಗೆ ಸುಲಭವಾಗಿರುವದು. ನಾನು ಪಾಟಲಿಪುರಕ್ಕೆ ಹೋಗಿ ಮಗಧನನ್ನು ಅನುಸರಿಸುವೆ.

ಪ್ರತಾಪಸಿಂಹ.—ನಾನು ಮಿಥಿಲೆಗೆ ಹೋಗುವೆ. ಈ ರೀತಿ ನಾವು ಬೇರೆಬೇರೆ ಯಿದ್ದರೆ ನಮ್ಮ ಕ್ಷೇಮ ದ್ವಿಗುಣವಾಗುವದು. ನಾವಿನ್ನಿಲ್ಲಿರತಕ್ಕದ್ದು ಅಪಾಯ.

ಕಂದ ॥ ಇಡುವಂ ಮಾನವನಸ್ತ್ರವ ।
ನಡೆನೋಟಂ ಮಂದಹಾಸದ ಮುಗುಳ್ನಗೆಯೋಳ್ ॥
ಇಡನಿವನುಂ ಬಂಧುವೆನ ।
ಲ್ಕಿಡುವನವಂ ಮಾರ್ದವಿಷವನುಣುವೆಡೆಯೊಳಗಂ ॥

ಪ್ರತಾಪರುದ್ರ.—ಪ್ರಭುತ್ವದ ಮೇಲೆ ಈಗ ಪ್ರಯೋಗಿಸಿರುವ ಬಾಣವು ಇನ್ನೂ ಭೂಮಿಯನ್ನು ಸೇರಿಲ್ಲ. ನಾವದರಗುರಿಯುಂ ತಪ್ಪಿಸಿಕೊಳ್ಳುವದುತ್ತಮ. ಇನ್ನು ಸಾವಕಾಶಮಾಡದೆ ಅಶ್ವಾರೂಢರಾಗುವ. ಹೊರಡಲು ಅಪ್ಪಣೆ ತೆಗೆದುಕೊಳ್ಳುವದರಲ್ಲಿ ಹೊತ್ತುಮಾಡದೆ ಜನಗಳಿಗೆ ತಿಳಿಯದಂತೆ ಹೋಗೋಣ ನಡೆ.

ಕಂದ ॥ ಕುಂದಕಮಾಗದು ಧೀರಗೆ ।
ಮಂದಿರದೊಳ್ಗದಿರುವತೋರದ ದ್ರೋಹಮಿರಲ್ ॥

ಹಿಂದೆಗೆದುಪೋಗೆ ಭೀಮನೆ !
ಹಿಂದೆಗೆದೀಡಾಡಿದಂ ಮಗನ ವಂಚಕರೋಳ್ ||೩೦||

ನಿಷ್ಕ್ರಾಂತರು.

೪ನೇ ಸ್ಥಾನ.

ಕೋಟೆಹೊರಭಾಗ.

ಪ್ರವೇಶ.–ನಂದರಾಜ, ಒಬ್ಬ ವೃದ್ಧನು.

ವೃದ್ಧ –ನನ್ನ ತಿಳುವಳಿಕೆಯಲ್ಲೇ ಮೂರಿಪ್ಪತ್ತು ಹತ್ತು ವರುಷಗಳಿರುವವು. ಈ ದಿವಸಗಳಲ್ಲಿ, ಅನೇಕ ಭಯಂಕರವಾದ ಕಾಲಗಳನ್ನು, ಅಘೋರವಾದ ವಿಷಯಗಳನ್ನು ನಾನು ಕಂಡಿರುವೆನು. ಆದರೆ ನಿನ್ನೆ ರಾತ್ರಿಯಂತ ದುರ್ದಿನವನ್ನು ನಾನು ಕಂಡವನಲ್ಲ. ನನಗಿದುವರಿಗಿದ್ದ ಅನುಭವವನ್ನೆಲ್ಲ ಇದು ಮೀರಿಸಿತು.

ನಂದರಾಜ.–ಯಜಮಾನರೇ ! ನಿಮಗೆ ಕಣ್ಣುಗಳು ಕಾಣುವವೊ ? ನೋಡಿ. ಮನುಷ್ಯರ ದುರ್ಮಾರ್ಗಕ್ಕಾಗಿ, ಸ್ವರ್ಗವು, ಅವರ ತಕ್ಕ ಭೂಲೋಕವನ್ನು ಹೆದರಿಸುತ್ತಿರುವದು. ಗಳಿಗೆಬಟ್ಟಲನ್ನು ನೋಡಿದರೆ ಹಗಲಿನಂತೆ ಕಾಣುವದು. ಜಗತ್ತನ್ನು ನೋಡಿದರೆ ರಾತ್ರಿಯಂತಿರುವದು. ಇದೇನು ಅಂಧಕಾರದ ಆಧಿಕ್ಯವೊ ? ಸೂರ್ಯಾಶ್ವಗಳನ್ನು ಕಾವಳವು ಕಾರಾಗೃಹದಲ್ಲೇನಾದರು ಇಟ್ಟಿರುವದೊ ? ಅಲ್ಲದೆ ಸೂರ್ಯನೇ ಮುಖವಂ ತೋರಿಸಲು ನಾಚಿಕೊಂಡಿರುವನೊ ? ಅವನ ಕಿರಣಗಳು ಬಯಸಿದರೂ ಇಲ್ಲವಲ್ಲ.

ವೃದ್ಧ.—ಈಗ ನಡೆದಿರತಕ್ಕ ಕೃತ್ಯದಂತೆ ಲೋಕಸ್ವಭಾವ ಕೂಡ ವಿರುದ್ಧವಾಗಿರುವದು. ಹೋದಮಂಗಳವಾರ ಉಲ್ಲಾಸದಿಂದ ಗಗನವನ್ನಡರುತ್ತಿರುವ ಒಂದು ಭೈರಿಯನ್ನು, ಸುಂಡಗಳಿಂದ ಜೀವಿಸತಕ್ಕ ಒಂದು ಗುಬ್ಬಿಳ ರೆಕ್ಕೆಯಿಂದ ಹೊಡೆದು ಕೊಂದುಹಾಕಿತು.

ನಂದರಾಜ.—ಅತಿಸುಂದರವಾಗಿಯು ಸಾಧುವಾಗಿಯು ಇರುವ ವಿಜಯಧ್ವಜನ ಜಾತ್ಯಶ್ವಗಳು, ತಮ್ಮ ಲಾಯವಂ ಬಿಟ್ಟು ಹೊರಗೆಬಂದು, ಹಿಡಿಯುವದಕ್ಕೆ ಹೋದವರನ್ನು ಕಾಡು ಕುದುರೆಗಳಂತೆ ಒದೆಯುತ್ತಾ ಕಚ್ಚುತ್ತಾ ಮನುಷ್ಯಜಾತಿಯೊಂದಿಗೆ ದ್ವೇಷಬೆಳಸುವ ರೀತಿ ಕಾಣಿಸಿದವಂತೆ.

ವೃದ್ಧ.—ಒಂದನೊಂದು ತಿಂದುಬಿಟ್ಟವೆಂದು ಜನರು ಹೇಳುವರು.

ನಂದರಾಜ.—ಹೌದು. ನನ್ನ ಕಣ್ಣೆದುರಿಗೇನೆ ಹೀಗಾಗಿ ನಾನು ಆಶ್ಚರ್ಯಪಡುತ್ತಿದ್ದೆನು. ಇಗೊ! ವನ್ಯನಾದ ಜಯಸಿಂಹ ಬರುತ್ತಿರುವನು.

ಪ್ರವೇಶ.—ಜಯಸಿಂಹ.

ಆರ್ಯನೇ! ಈಗಿನ ವರ್ತಮಾನವೇನು.

ಜಯಸಿಂಹ.—ಹಾಗೆಂದರೇನು! ನಿನಗದು ಗೊತ್ತಿಲ್ಲವೆ?

ನಂದರಾಜ.—ಈ ಘೋರಕೃತ್ಯವನ್ನು ಮಾಡಿದವರು ಗೊತ್ತಾಯಿತೆ?

ಜಯಸಿಂಹ.—ವೀರಸೇನನಿಂದ ಕೊಲ್ಲಲ್ಪಟ್ಟವರು ಮಾಡಿದವರೆಂದು ಗೊತ್ತಾಗಿರುವದು.

ನಂದರಾಜ.—ಅಯ್ಯೋ! ಅನ್ಯಾಯವೆ! ಅದರಿಂದ ಅವರಿಗೇನು ಪ್ರಯೋಜನ.

ಜಯಸಿಂಹ.—ಪ್ರೇರಿಸಲ್ಪಟ್ಟಿರಬಹುದು. ರಾಜಪುತ್ರರಾದ ಪ್ರತಾಪ

ರುದ್ರ ಪ್ರತಾಪಸಿಂಹರು ಕದ್ದು ಓಡಿಹೋಗಿದಾರೆ. ಅದುಕಾರಣ ಅವರ ಮೇಲೂ ಇದರ ಗುಮಾನಿ ತೋರುವದು.

ನಂದರಾಜ —ಅಯ್ಯೋ ! ವಿಧಿಯೇ ! ಇದು ಸಹ ಸ್ವಭಾವವಿರುದ್ಧ ವಾಗಿರುವದಲ್ಲ ? ಪ್ರಯೋಜನವರಿಯದ ದುರಾಸೆಯೆ ! ನಿನ್ನ ರಕ್ತವನ್ನು ನೀನೇ ಬಯಸುವದುಂಟೆ ! ಹಾಗಾದರೆ ಇನ್ನೀರಾಜ್ಯವು ವೀರಸೇನನಿಗೆ ಸಲ್ಲುವಂತೆ ಕಾಣುವದು.

ಜಯಸಿಂಹ —ಸಂದೇಹವೇನು ? ಆಗಲೆ ಗೊತ್ತಾಗಿರುವದು. ರಾಜ್ಯಾಭಿಷೇಕಕ್ಕಾಗಿ ಅವನಾಗಲೆ ಏಕಚಕ್ರನಗರಿಗೆ ಹೋದನು.

ನಂದರಾಜ.— ನೀನು ಅಲ್ಲಿಗೆ ಹೋಗುವೆಯಾ ?

ಜಯಸಿಂಹ.—ಇಲ್ಲ. ನಮ್ಮೂರಿಗೆ ಹೋಗುವೆನು.

ನಂದರಾಜ —ನಾನಲ್ಲಿಗೆ ಹೋಗುವೆನು.

ಜಯಸಿಂಹ.— ಹಾಗೇಮಾಡು. ಎಲ್ಲವು ಕ್ರಮವಾಗಿ ನಡದದ್ದನ್ನು ನೀನೇ ನಿಂತು ನೋಡು. ಅಲ್ಲದಿದ್ದರೆ ಕಳೆದ ಕಾಲವನ್ನು ನಾವು ವಸಿಕೊಳ್ಳಬೇಕಾದೀತು. ನಿನಗೆ ಶುಭಗಮನವಾಗಲಿ.

ನಂದರಾಜ —ಯಜಮಾನರೆ ! ತಮ್ಮ ಅಪ್ಪಣೆಯನ್ನು ತೆಗೆದುಕೊಳ್ಳುವೆನು.

ವೃದ್ಧ.— ದೈವಾನುಗ್ರಹವಿರಲಿ. ದುರ್ಗುಣದಲ್ಲಿ ಸುಗುಣವನ್ನು ದ್ವೇಷದಲ್ಲಿ ಮೈತ್ರಿಯನ್ನು, ಭಾವಿಸುವವರನ್ನು ದೈವಸಂರಕ್ಷಿಸಲಿ.

ನಿಷ್ಕ್ರಾಂತಾಃ ಸರ್ವೇ.

೩ನೇ ಅಂಕ.

೧ನೇ ಸ್ಥಾನ.

ವೀರಸೇನನ ಅರಮನೆಯಲ್ಲೊಂದು ಕೊಟ್ಟಡಿ.

ಪ್ರವೇಶ.—ಶೂರಸೇನ, ಅದ್ರಿ.

ಶೂರಸೇನ —ವೃತ್ತ ॥ ವಸುಧಾಚಕ್ರದೊಳಾಯ್ತು ಶಕ್ತಿಗಳು
ಪೇಳ್ದೋಲ್ ವಲ್ಲಭಂಗೆಲ್ಲಮುಂ ।
ಪೆಸರೊಂದಿರ್ಪನು ಬರ್ಬರಾಧಿಪನೆನುತ್ತಂ ಧಾತ್ರಿಯಾಳುತ್ತಮು ॥
ತ್ತಸೆಯುತ್ತಿರ್ಪನು ತೋರ್ಪುದಾದೊಡಮಿವಂ ದ್ರೋಹಂಗಳಂ
ಪೊಂದಿದಂ ।
ವಸುಧಾಭಾಗ್ಯವನೆಂದೆನುತ್ತಲಿರದೀಭಾಗ್ಯಂ ಸ್ಥಿರಂ ನಿನ್ನೊಳಂ॥೧॥

ನಿಜಮಾಗಿರ್ಪುದಿವಂಗೆ ಪೇಳ್ದತೆರದಿಂ ಶಕ್ತಿತ್ರಯಂ ಕೊಟ್ಟರೀ ।
ರಜನೀಭಾಗ್ಯವ ನನ್ನ ಪುತ್ರತತಿಗಂ ನಿನ್ನಂತೆ ನೀನೀತೆರಂ ॥ [ಯಿಂ ।
ಸುಜನರ್ಗೊಂದಿಳೆಯಾಳುತಿರ್ದೊಡಮುದಂ ಮಾಡಿರ್ಪನೀ ಭೂಮಿ
ತ್ಯಜಿಸೆಂದೆನ್ನೊಳಗಾಸೆ ನಿನ್ನ ತೆರದಿಂ ಪುಟ್ಟಿರ್ಪುದೇಂ ಕೌತುಕಂ ॥

ತಾಳು, ತಾಳು, ಯಾರೋ ಬರುತ್ತಿರುವರು.

ಪ್ರವೇಶ.—(ರಾಜಗಮನಸೂಚನೆಯೊಡನೆ) ರಾಜನಂತೆ ವೀರಸೇನ, ರಾಣಿ
ಯಂತೆ ಚಂದ್ರವಲ್ಲಿ, ಉಪರಾಜರು, ಪರಿವಾರ ಜನಗಳು.

ವೀರ.—ಇಗೊ! ನಮ್ಮ ಮುಖ್ಯ ಅತಿಥಿಯಿಲ್ಲಿರುವನು.

ಚಂದ್ರವಲ್ಲಿ.—ಇವರನ್ನು ಮರೆತಿದ್ದರೆ ನಮ್ಮ ಈಗಿನ ಉತ್ಸವವು ನಾಯಕ ರತ್ನವಿಲ್ಲದ ಪದಕದಂತೆ ಕಳಾರಹಿತವಾಗಿರುತ್ತಿತ್ತು.

ವೀರ.—ಪೂಜ್ಯತಮನೆ! ಈ ದಿವಸ ಸಾಯಂಕಾಲಕ್ಕೆ ದರಬಾರಾಗುವದು. ಅನಂತರ ರಾಜಮಂಡಲಕ್ಕೆಲ್ಲ ಔತಣವಾಗುವದು. ಇವೆರಡಕ್ಕೂ ನೀನು ತಪ್ಪದೆ ಬರಬೇಕೆಂದು ಪ್ರಾರ್ಥಿಸುವೆನು.

ಶೂರ.—ಮಹಾಸ್ವಾಮಿಯವರ ಅಪ್ಪಣೆಯಂತೆ ಶಿರಸಾವಹಿಸಿ ನಡೆದುಕೊಳ್ಳುವದರಲ್ಲಿ ಸದಾ ಬದ್ಧಕಂಕಣನಾಗಿರುವೆನು.

ವೀರ.—ಅಶ್ವಾರೂಢನಾಗಿ ನೀನು ಸವಾರಿ ಬೆಳಸುವಂತೆ ಕಾಣುತ್ತೆ.

ಶೂರ.—ಜೀಯಾ! ಹೌದು.

ವೀರ.—ಪ್ರಯಾಣಮಾಡದಿದ್ದರೆ, ನಿನ್ನ ಸಂಗಡ ಆಲೋಚಿಸಬೇಕಾದ ಕೆಲವು ಅಂಶಗಳಿದ್ದವು. ಅವುಗಳನ್ನು ಈ ದಿವಸ ಮಂತ್ರಾಲೋಚನೆಯಲ್ಲಿ ಆಲೋಚಿಸಿದ್ದಾಯಿತು. ಅದರಿಂದ ಕೊಂಚಮಟ್ಟಿಗೆ ತಿಳವಳಿಕೆಯುಂಟಾಗಿರುವದು. ಒಳ್ಳೇದು! ಅದರ ವಿಷಯ ನಾಳೆ ಆಗಲಿ. ನೀನು ತುಂಬ ದೂರ ಪ್ರಯಾಣಮಾಡಬೇಕಾಗಿರುವದೊ?

ಶೂರ.—ಜೀಯಾ! ಕೊಂಚ ದೂರವೆ. ಈಗ ಹೊರಟರೆ ಸಾಯಂಕಾಲದ ಭೋಜನಕಾಲಕ್ಕೆ ಮುಂಚಿತವಾಗಿ ಬರುವದಕ್ಕಾಗುವದಿಲ್ಲ. ಕುದರೆಯೇನಾದರು ಆಯಾಸಪಟ್ಟುಕೊಂಡು ಜಾಗ್ರತೆ ಕಾಲಿಡದಿದ್ದರೆ, ಭೋಜನಕ್ಕೂ ಒಂದೆರಡು ಗಂಟೆ ಸಾವಕಾಶವಾಗಿ ಬರಬೇಕಾಗುವದು.

ವೀರ.—ನಮ್ಮ ಔತಣಕ್ಕೆ ಬಾರದೆ ಇರಬೇಡ.

ಶೂರ.—ಮಹಾಸ್ವಾಮಿ! ಅದಕ್ಕೆಂದಿಗೂ ತಪ್ಪತಕ್ಕವನಲ್ಲ.

ವೀರ.—ನಮ್ಮ ಜ್ಞಾತಿಗಳು ಮಗಧ ಪಾಂಚಾಲದೇಶಗಳಲ್ಲಿ ಆಶ್ರಯ

ಮಾಡಿಕೊಂಡು ತಾವು ಮಾಡಿದ ಈ ಘೋರವಾದ ಪಿತೃವಧೆಯಂ ಮರೆಮಾಡಿ, ಕೇಳತಕ್ಕವರಿಗೆ ನಾನಾಬಗೆಯಾದ ಕಲ್ಪನಾಕಥೆಯನ್ನು ಹೇಳುತ್ತಿದಾರಂತೆ. ಚಿಂತೆಯಿಲ್ಲ. ಈ ವಿಷಯ ನಾಳೆ ಆಗಬಹುದು. ನಿನ್ನಸಂಗಡ ಆಲೋಚಿಸಲು ಇನ್ನೂ ಅನೇಕ ವಿಷಯಗಳಿರುವವು. ಜಾಗ್ರತೆ ಅಶ್ವಾರೂಢನಾಗು. ಸಾಯಂಕಾಲದವರಿಗೆ ನಿನ್ನ ಅಪ್ಪಣೆಯಂ ತೆಗದುಕೊಳ್ಳುವೆನು. ನಿನ್ನ ಪುತ್ರರತ್ನವಾದ ಅದ್ರಿಯು ನಿನ್ನ ಸಂಗಡ ಪ್ರಯಾಣಮಾಡುವನೊ ?

ಶೂರ.—ಜಿಯ್ಯಾ ! ಹೌದು. ನನಗೆ ಹೊತ್ತಾಗುತ್ತಿರುವದು.

ವೀರ.—ಇನ್ನು ಅಶ್ವಗಳನ್ನಲಂಕರಿಸಿ. ದೃಢಪದದಿಂದವು ಜಾಗ್ರತೆ ಸವಾರಿ ಬೆಳಿಸಲೆಂದು ಹಾರೈಸುವೆ. ನಿಮಗೆ ಶುಭಗಮನವಾಗಲಿ.

ನಿಷ್ಕ್ರಾಂತರ್.—ಶೂರಸೇನ, ಅದ್ರಿ.

ನೀವೆಲ್ಲರೂ ನಿಮ್ಮನಿಮ್ಮ ಮನಬಂದಂತೆ ರಾತ್ರಿ ಏಳುಗಂಟೆವರಿಗೆ ವಿಶ್ರಮಿಸಿಕೊಳ್ಳುತ್ತಿರಿ. ಅದರಿಂದ ರಾತ್ರಿ ಪುನಃ ಸಂಘರುಚಿಸುವದು. ಅದುವರಿಗೆ ನಾನೊಬ್ಬನೆ ಯಿರುವೆನು. ಎಲ್ಲರನ್ನೂ ವಂದಿಸುವೆ. (ವೀರಸೇನಹೊರ್ತು, ನಿಷ್ಕ್ರಾಂತಾಃ ಸರ್ವೇ).

ಊಳಿಗದವನ್ಯಾರು ?

ಪ್ರವೇಶ —ಊಳಿಗದವನು.

ಆ ಜನಗಳು ಬಂದಿರುವರೊ ?

ಊಳಿಗದವನು —ಮಹಾಪ್ರಭು ! ಅರಮನೇ ಬಾಗಿಲಲ್ಲಿ ಕಾದಿರುವರು.

ವೀರ.—ಅವರನ್ನು ನಮ್ಮ ಸಾನ್ನಿಧ್ಯವನ್ನೈದಿಸು.

ನಿಷ್ಕ್ರಾಂತಃ.—ಊಳಿಗದವನು.

ಕಂದ ॥ ಪ್ರೌಢವಿಪನಾದೊಡೆ ಫಲವೇಂ ।
ಪ್ರೌಢವಿಯೊಳವಗೆ ಪಗೆಯಿರ್ದೊಡವ ಪಗಲಿರಳುಂ ।
ಪಡುವ ಕಡುಭಯವನಲ್ಲದೆ ।
ಪಡನವಸುಖವನ್ನುಲೇಶಮುಂ ನಿಶ್ಚಯಮೈ ॥ ೩॥

ಇರುವಂ ಮೃಗರಾಜನವೋಲ್ ।
ಧರಣಿಯಲೀ ಶೂರಸೇನನನೀಗೆನಗಿದರಿಂ ।
ಪರಿಯದಿದೆ ರಕುತವೆದೆಯೊಳ್ ।
ಪಿರಿದುಂ ತೋರ್ದಪುದುಭೀತಿಯೆನಗಿವನಿಂದಂ ॥ ೪ ॥

ವೃತ್ತ ॥ ಕಡೆಯಕಾಣವು ಶೂರಸೇನನ ಶೌರ್ಯಧೈರ್ಯಗುಣಾಳಿಗಳ್ ।
ಪಡನು ಭೀತಯ ಕಾಲನಾದರು ಶೌರ್ಯವಿಷ್ಟವ ಜಾಣ್ಮೆಯೊಳ್ ।
ಪಡೆಯನೆಲ್ಲವನೊರ್ವಯುದ್ಧದಿ ಜಾಣ್ಮೆಯಿಂದೆಲೆಗೆಲ್ಲವಂ।
ಮೃಡನಕೊಡೆಯು ಹೋರಿವಾಡುವ ಮಲ್ಲಯುದ್ಧವ ಧೈರ್ಯದಿಂ ॥

ಕಂದ ॥ ಇರುವದು ಭಯವೆನಗಿವನೊಳ್ ।
ನರರೊಳವನವೋಲ್ ಪಿರಿದು ಭಯವ ನಾರುಂ ತೋ ।
ರರುಕಾಣುವೆ ನಾನೀ ಭೀ ।
ಕರಭೀಮನ ಕೌರವನೆನೆ ತೊಡೆ ನಡುಗಿಸುತಂ ॥೬॥

ದೊರೆಯೆಂದೆನ್ನಂ ಪರಸುತ ।
ಲಿರಲಾಶಕ್ತಿತ್ರಯವನು ಮಿಗೆ ಗದರಿಸುತಂ ।
ಬರೆಯಿರಿತನಗಿರ್ಪುದನೆನೆ ।
ಪರಸಿದರಾಗಳ್ ಪ್ರಭುಗಳ ಪಿತನೀನೆನುತಂ ॥೭॥

ಕೊಟ್ಟರು ಬರಿದೇ ನನಗೀ ।
ಸಿಟ್ಟೆಯು ಶಕ್ತಿತ್ರಯಂಗಳಲ್ಲೆನ್ನೊಡಲೊಳ್ ।
ಪುಟ್ಟುವ ಮಕ್ಕಳಗೆನ್ನೀ ।
ಸಿಟ್ಟೆಯು ಸೇರುವದಿವನೊಡಲೊಳ್ಪುಟ್ಟಿದರಂ ॥ ೮ ॥

ಕಷ್ಟವಿದನೆ ಜಗವೆಲ್ಲಂ ।
ಭ್ರಷ್ಟತೆಯಿಂ ಕೊಂದು ಸುಜನವಿಜಯಧ್ವಜನಂ ।
ನಿಷ್ಠುರಕೀಡಾಗಿರ್ಪೀ ।
ಸೃಷ್ಟಿಯು ಬಾಳಿನಗೆ ಪುಟ್ಟುವರ್ಗಿಲ್ಲಾಯ್ತು ॥ ೯ ॥

ಆಯ್ತಾಯಿತ್ತು ನಿಷ್ಠುರವೆನ ।
ಗಾಯ್ತು ಪೊಡವಿ ಶೂರಸೇನನೊಡಲೊಳ್ಜನಿಪ ।
ರ್ಗಾಯ್ತು ಭ್ರಷ್ಟತೆಯುಂ ನನ ।
ಗಾಯ್ತ್ರೆ ಕಡುಪಾತಕದ ಭಯವು ನನಗಾಯ್ತ್ರೆ ॥೧೦॥

ಹೀಗಾಗುವದೊ ? ಬಳ್ಳೀದಾಗಲಿ.—

ಕಂದ ॥ ಕೊಡುವೆನೆ ನಾಂ ಪೊಡವಿಯನಿವ ।
ನೊಡಲಲಿ ಜನಿಯಿಸುವ ಹುಡುಗರಿಗೆ ವಿಧಿಯಂತಿ ।
ದೊರ್ಡವೊಲಂ ತೊಡೆಯುವೆನೀಗಿವ ।
ನೊಡಲಲಿ ಪುಟ್ಟಿಹ ಹುಡುಗರನೀ ಬಿಡುಗದಿ ನಾಂ ।

ಯಾರೊ ಅಲ್ಲಿ ?

ಪ್ರವೇಶ.—ಇಬ್ಬರು ಘಾತುಕರಸಮೇತ, ಊಳಿಗದವನು.

ಮತ್ತೆ ಕರೆಯುವವರಿಗೆ ಬಾಗಿಲಬಳಿ ಕಾದುಕೊಂಡಿರು.

ನಿಷ್ಕ್ರಾಂತಃ.—ಊಳಿಗದವನು.

ನೆನ್ನೆಯಲ್ಲವೆ ನಾವು ಮಾತನಾಡಿದ್ದು ?

೧ನೇ ಘಾತುಕ.— ಮಹಾಪ್ರಭು ! ಹೌದು.

ವೀರ.—ಒಳ್ಳೇದು ! ನೆನ್ನೆ ಹೇಳಿದ ವಿಷಯವಂ ಆಲೋಚನೆಮಾಡಿದಿರೊ? ನಿಮ್ಮ ದಾರಿಗಡ್ಡಲಾಗಿ ಬಂದು, ನಿಮ್ಮ ಬಾಳುಕೆಡಸಿ ನಿಮ್ಮನ್ನು ಇಂತಹ ಹೀನಸ್ಥಿತಿಗೆ ತಂದವನು, ನಿರಪರಾಧಿಯಾದ ನಾನೆಂದು ತಿಳಿದುಕೊಂಡಿದ್ದಿರಿ. ಈಗಲಾದರು ಗೊತ್ತಾಯಿತೊ ? ನಿಮ್ಮ ವಿಷಯದಲ್ಲಿ ನಾನು ನಿರ್ದೋಷಿಯೆಂದು ತಿಳಿಯಿತೊ ? ನೆನ್ನೆ ಸಂಭಾಷಣೆಯಲ್ಲಿದನ್ನು ನಿಮಗೆ ತಿಳಿಸಿದೆನು. ಅದು ನಿಜವೆಂದು ನೀವು ನೆನ್ನೇನೆ ಒಪ್ಪಿಕೊಂಡಿರಿ. ನಿಮ್ಮೊಳಗೆಯಂ ಮಟಕುಮಾಡಿದರೀತಿಯನ್ನೂ, ಮಾಡಿದ ಮೋಸವನ್ನೂ, ಅದಕ್ಕಾಗವನು ಗಂಟು ಹಾಕಿಕೊಂಡಿದ್ದ ಜನರನ್ನೂ, ನಿಮಗೆ ನಿರ್ಧಾರವಾಗುವಂತೆ ಸೂಚಿಸಿದೆ. ಅದೆಲ್ಲವನ್ನು ಆಲೋಚಿಸಿದರೆ ಆ ಕೆಲಸವನ್ನು ಮಾಡಿದವನು ಶೂರಸೇನನೇ ಎಂದು ಎಂತ ಅಲ್ಪಮತಿಗೂ ಗೊತ್ತಾಗುವದು.

೧ನೇ ಘಾತುಕ.— ಮಹಾಸ್ವಾಮಿ ! ಇದೆಲ್ಲವನ್ನು ತಿಳುವಳಿಕೆಗೆತಂದುಕೊಟ್ಟದ್ದು ನಿಶ್ಚಯ.

ವೀರ.—ಹೌದು. ಆದರೆ ಅಷ್ಟುಮಾತ್ರವೇ ಅಲ್ಲ. ಇನ್ನೂ ಕೊಂಚ ಹೇಳಿರುವೆನು. ಅದನ್ನೀಗ ಸ್ಪಷ್ಟವಾಗಿ ವಿವರಿಸುವೆನು ಕೇಳಿ. ಅವನು ಮಾಡಿರುವ ಈ ತಪ್ಪಿತಗಳನ್ನು ಮರೆತು, ಮನ್ನಿಸಿಬಿಡುವಂತ, ತಾಳ್ಮೆಯಲ್ಲೇನಾದರು ನೀವು ಮುಳುಗಿಹೋಗಿರುವಿರೊ ? ನಿಮ್ಮನ್ನು ಈರೀತಿ ಹೀನಸ್ಥಿತಿಗೆ ತಂದ ಆ ಮಹಾತ್ಮನಿಗೂ, ಆತನ ಸಂತಾನಕ್ಕೂ, ಶ್ರೇಯಃಪ್ರಾರ್ಥನೆಯಂ ಮಾಡುವಂತೆ ನಿಮಗೆ ಧರ್ಮೋಪದೇಶವೇನಾದರು ಆಗಿರುವದೊ ?

೧ನೇ ಘಾತುಕ — ಜೆಯ್ಯಾ! ನಾವು ಮನುಷ್ಯರು.

ವೀರ — ಹೌದು. ನೀವು ಮನುಷ್ಯರೆನ್ನುವದು ನಿಜ. ಪ್ರಾಣಿ ಕೋಟಿಯಲ್ಲಿ ಬೆನ್ನುಮೂಳೆಯಿದ್ದಮಾತ್ರಕ್ಕೆ, ಕಪ್ಪೆ ಕಪಿ ಕಪಟ ಕಿರಬ ಕತ್ತೆ ಕಾಗೆಗಳನ್ನು ಕಶೇರುವಂತಗಳೆಂದು ಕರೆಯುವಂತೆ ಮಾನವಕೋಟಿಗೆ ಸೇರಿದವರೆಲ್ಲರನ್ನೂ ಮನುಷ್ಯರೆಂದೇ ಕರೆಯುವರು. ಆದರೆ ಶಾಸ್ತ್ರರೀತಿ ವಿಚಾರಮಾಡಿದರೆ ತಮ್ಮ ತಮ್ಮ ಗುಣ ಸ್ವಭಾವಗಳಮೇರೆ ಕಶೇರುವಂತಗಳಲ್ಲೇ ಮಾಂಡುಕ ಚತುಷ್ಪ್ರಾಣಿ ಪಕ್ಷಪ್ರಾಣಿ ಕ್ರವ್ಯಾದ ಖುರವಂತ ಸಂದೀನಶೀಲಗಳೆಂದು ಬೇರೆ ಬೇರೆ ಗಣಗಳಾಗುವಂತೆ; ಮನುಷ್ಯರೆನ್ನುವರಲ್ಲೂ ಗುಣಸ್ವಭಾವಗಳ ವಿಚಾರಿಸುತ್ತಾಹೋದರೆ ಒಬ್ಬನಂತೆ ಮತ್ತೊಬ್ಬನಿರದೆ ಧೀರ, ಹೇಡಿ, ಲುಬ್ಧ, ದಾರಾಳಿಮುಂತಾದ ಬೇರಬೇರೆ ಗಣಗಳಿಗೆ ಸೇರುವರು. ಅಂತಾ ಗಣಗಳಲ್ಲಿ ಅತ್ಯಂತ ನಿಕೃಷ್ಟವಾದ ಹೇಡಿಯ ಗಣಕ್ಕೆ ಸೇರಿದವರಾಗಿ ನೀವಲ್ಲದಿದ್ದರೆ ಹೇಳಿ. ನಿಮಗೆ ಯೋಗ್ಯವಾದದೊಂದು ಕೆಲಸವನ್ನು ಹೇಳುವೆನು. ಅದರಿಂದ ನಿಮ್ಮ ಶತ್ರುನಾಶವಾಗುವದು. ನನ್ನ ಮನಃಖೇದವೂ ಪರಿಹಾರವಾಗಿ, ನಾನೂ ನಿರ್ಭೀತನಾಗಿರುವೆನು. ನೀವು ನನ್ನ ಅನುರಾಗಕ್ಕೆ ಸದಾ ಪಾತ್ರರಾಗಿರುವಿರಿ.

೨ನೇ ಘಾತುಕ — ಜೆಯ್ಯಾ! ಲೌಕಿಕದುರದೃಷ್ಟಗಳಲ್ಲೂ, ಕೆಡಕುಗಳಲ್ಲೂ, ನಾನು ಕಂಗೆಟ್ಟುಹೋಗಿರುವೆನು. ಅದಕ್ಕೆ ಪ್ರತಿಯಾಗಿ ಮುಂದೆ ನಾನು ಲೋಕಕಂಟಕನಾಗಲು ವಿಚಾರರಹಿತನಾಗಿರುವೆನು.

೧ನೇ ಘಾತುಕ — ಅನರ್ಥದಲ್ಲೂ, ದುರ್ದೆಶೆಯಲ್ಲೂ, ನಾನು ಈಜೇಜಿ ಬೇಜಾರಾಗಿರುವೆನು. ಇನ್ನು ದಡವನ್ನು ಸೇರಿ ಮುಂದೆ ಸುಖವಾಗಿರಲು ಏನಮಾಡಬೇಕಾದರು ನಾನು ಸಿದ್ಧನಾಗಿರುವೆನು.

ವೀರ.—ಶೂರಸೇನನು ನಿಮ್ಮಿಬ್ಬರಿಗೂ ಶತ್ರುವೆಂದು ತಿಳದಿರುವಿರಷ್ಟೆ?

೨ನೇ ಘಾತುಕ — ಜೆಯ್ಯಾ! ಹೌದು.

ವೀರ.—ನನಗೂ ಅವನು ಶತ್ರುವು. ಅವನಿಂದ ಪ್ರತಿನಿಮಿಷದಲ್ಲೂ ನನ್ನ ಗುಂಡಿಗೆ ಕರಗುತ್ತಿರುವದು. ನನ್ನ ಅಧಿಕಾರಬಲದಿಂದಲೇ ಅವನನ್ನು ನಾನು ನಾಶಪಡಿಸಿ ದಕ್ಕಿಸಿಕೊಳ್ಳಬಲ್ಲೆ. ಆದರೆ ನನ್ನ ಕೆಲವು ಸ್ನೇಹಿತರು, ಅವನಿಗೂ ಸ್ನೇಹಿತರಾಗಿರುವದರಿಂದ, ಬಹಿರಂಗವಾಗಿ ಅವನನ್ನು ವಧಿಸಿ, ಅವರ ನಿಷ್ಠುರಕ್ಕೆ ಗುರಿಯಾಗಲು ನನಗೆ ಸಮ್ಮತವಲ್ಲ. ಅದು ಕಾರಣ ನಿಮ್ಮ ಸಹಾಯವನ್ನಪೇಕ್ಷಿಸುತ್ತಿರುವೆನು. ನಾನು ಅವನನ್ನು ವಧಿಸಿದೆನೆಂದು ಜನರಿಗೆ ತಿಳಿಯದಂತೆ ಈ ಕೆಲಸವನ್ನು ನಿಮ್ಮಿಂದ ಮಾಡಿಸಿ ಕಾರ್ಯನಿರ್ವಾಹಮಾಡಿಕೊಳ್ಳಬೇಕೆಂದಿರುವೆನು.

೨ನೇ ಘಾತುಕ —ಅಪ್ಪಣೆ ಪಾಲಿಸುವಂತೆ ನಡೆದುಕೊಳ್ಳುವದರಲ್ಲಿ ಬದ್ಧಕಂಕಣರಾಗಿದೇವೆ.

೧ನೇ ಘಾತುಕ.— ಅದರಿಂದ ನಮ್ಮ ಪ್ರಾಣ ————

ವೀರ.—ನಿಮ್ಮ ಶೌರ್ಯ ಪ್ರಜ್ವಲಿಸಿ ತಲೆದೋರುತ್ತಿರುವದು. ಅವನು ಬರತಕ್ಕ ಸಮಯ ಮತ್ತಿದನ್ನು ಮಾಡತಕ್ಕ ಕಾಲದೇಶವನ್ನು ನಿಮಗೆ ತಿಳಿಯಪಡಿಸುವೆನು. ಅರಮನೆಗೆ ಕೊಂಚ ದೂರದಲ್ಲಿ ಈ ದಿನದ ರಾತ್ರಿಯೇ ಇದನ್ನು ಮಾಡಬೇಕು. ಜನಗಳಿಗೆ ನನ್ನಲ್ಲಿ ಕೊಂಚವೂ ಅನುಮಾನತೋರದಂತೆ ಈ ಕಾರ್ಯ ಸಾಧಿಸಬೇಕೆಂನ್ನುವದನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಿ. ಶತ್ರುಶೇಷದಿಂದ ಮುಂದೆ ಯಾವ ತೊಂದರೆಯೂ ಇಲ್ಲದಂತೆ ಅವನ ಮಗ

ನಾದ ಅದ್ರಿಯನ್ನೂ ಅವನಗತಿಯನ್ನೀ ಕಾಣಿಸಬೇಕು. ತಂದೆಯು ಕೊಲೆ ಹ್ಯಾಗೆ ಅವಶ್ಯಕವಾಗಿರುವದೊ, ಮಗನದೂ ಹಾಗೆ ಅವಶ್ಯಕವಾಗಿರುವದು. ಈದಿವಸ ಅವರಿಬ್ಬರೂ ಜೊತೆಯಾಗಿ ಬರುವರು. ನೀವಿಬ್ಬರು ಇದನ್ನಾಲೋಚಿಸಿ ನಿಮ್ಮ ಮನಸ್ಸನ್ನು ದೃಢಪಡಿಸಿಕೊಳ್ಳುತ್ತೀರಿ. ನಾನು ಮತ್ತೆ ನಿಮ್ಮ ಕಾಣುವೆನು.

೨ನೇ ಘಾತುಕ – ಮಹಾಸ್ವಾಮಿ! ಆಲೋಚನೆ ಮಾಡತಕ್ಕದ್ದೇನು ಇಲ್ಲ. ನಮ್ಮ ಮನಸ್ಸು ಗಟ್ಟಿಯಾಗಿರುವದು.

ವೀರ.–ನೀವಿಲ್ಲಿರಿ. ಪುನಃ ನಿಮ್ಮನ್ನು ಕಾಣುವೆನು.

ನಿಷ್ಕ್ರಾಂತಾ –ಘಾತುಕರು.

ಕಂದ ‖ ಬಂದಿಹುದು ಶೂರಸೇನನಿ ।
ಗೆಂದೊಂದು ವಿಮಾನವಿಂದುಬಂಧುರದಿಂದಂ ।
ಅಂದದೆ ರಂಭಾದಿ ಸುರ ।
ರ್ನಿಂದಿಹರೀಗವನ ಸಂಧಿಸಲ್ಕೆಂದೆನುತಂ ‖ ೧೨ ‖

ನಿಷ್ಕ್ರಾಂತಃ.

೨ನೇ ಸ್ಥಾನ

ಅರಮನೆಯಲ್ಲಿ ಕೊಟ್ಟಡಿ.

ಪ್ರವೇಶ.–ಚಂದ್ರವಲ್ಲಿ, ಹರಿಕಾರ.

ಚಂದ್ರವಲ್ಲಿ –ಶೂರಸೇನನು ಆಸ್ಥಾನದಿಂದ ಹೊರಟು ಹೋದನೆ?

ಹರಿಕಾರ.–ಸ್ವಾಮಿನೀ! ಹೌದು. ಆದರೆ ಪುನಃ ಸಾಯಂಕಾಲಕ್ಕೆ ಬರುತ್ತಾರಂತೆ.

ಚಂದ್ರವಲ್ಲಿ – ನೀನುಹೋಗಿ, ಪ್ರಭುಗಳಸಂಗಡ ನಾನು ಅವರ ಸಮಯವನ್ನು ಕಾದಿಗುವೆನೆಂದು ಅರಿಕೆಮಾಡು.

ನಿಷ್ಕ್ರಾಂತಃ.—ಹರಿಕಾರ.

ಕಂದ || ಬೇಡಿದುದಂ ಬೇಡಿದವ್ರೋಲ್ |
ನೀಡದಿರೆ ಮನದಣಿವಂತೆ ನೀಡೇನುಫಲಂ |
ಮಾಡಿದುದು ಮನಕೆ ಭೀತಿಯು |
ನೀಡಿದುದಿಂತಯ್ದೆ ನೀಡಲಿಲ್ಲವು ಸುಖವಂ || ೧೩ ||

ಪ್ರವೇಶ —ವೀರಸೇನ.

ಚಂದ್ರವಲ್ಲಿ –ಕಾಂತನೆ! ವರ್ತಮಾನವಿಶೇಷವೇನು. ನೀನೇತಕ್ಕೆ ವಿಕಾರಿಯಾಗಿರಲೆಣಿಸುವೆ? ದುಃಖಿಹೃದಯದ ಸಂಗಡ ಸ್ನೇಹವ ನ್ಯಾತಕ್ಕೆ ಬೆಳಸುತ್ತಿರುವೆ? ಮಾಡಿದ್ದನ್ನು ಮಾಡಿದ್ದರ ಸಂಗಡ ಮರಿಯದೆ ಮತ್ತೇತಕ್ಕೆ ಜ್ಞಾಪಿಸಿಕೊಳ್ಳುತ್ತಿರುವೆ?

ಕಂದ || ಮದ್ದನು ಮೀರಿದ ರೋಗದ |
ಸುದ್ದಿಗೆ ಪೋಗದೆ ಬಿಡುವುದೆ ಸುಖಮಾಗಿರ್ಕುಂ ||
ಬುದ್ಧಿಯು ಮೀರಿದ ಬಳಿಕಂ |
ಗದ್ದಲ ಮಾಡಿದರದರೊಳು ಫಲಮಿಲ್ಲಿಳೆಯೋಳ್ ||

ವೀರ –ಶತ್ರುಸರ್ಪವನ್ನು ಗಾಸಿಪಡಿಸಿದೆವೆ ಹೊರ್ತು ಕೊಲಲಿಲ್ಲ. ಪುನಃ ಅದು ಬಲಕೂಡಿ ಬಾರದೆ ಇದ್ದೀತೆ. ಭಗ್ನಹೃದಯರಾಗಿ ಅದರ ವಿಷಕ್ಕೆ ಮೊದಲಿನಂತೆ ನಾವು ಅಂಜುತ್ತಿರಬೇಕಾಗಿರುವದು. ಆದರೆ ಈರೀತಿ.–

ಕಂದ.— ಇರುಳಲಿ ಕಳವಳ ಪಡುತಂ ।
ಕರದಿಂ ತುತ್ತೆತ್ತಿ ಬಾಯೊಳಿಡಲಂಜುತ ನಾಂ ॥
ಬರಿದೇ ಭೀತಿಯೊಳಿನ್ನಿರೆ ।
ನರಿಯಿರುವರೆಗಂ ತಿರೆಯನು ಬಾಳುವೆನುರಿಯೊಳ್ ॥

ಎಲೌ ಕಾಂತೆ !

ಕಂದ — ಮಲಗಿರ್ದೊಡೆಯಿಂದಿದು ನಿಸೆ ।
ಯೊಳು ಕದ್ದಿರ್ಪವಸುವ ನೆನುತೆನ್ನಯ ಮನವಂ ।
ಸಿಲುಕಿಸುತಿರ್ಪರು ಕೋಳ ।
ಕ್ಕಳದಿರ್ಪುದರಿಂದಳಿವುದೆ ಸುಖಮಾಗಿರ್ಕುಂ ॥೧೬

ವೃತ್ತ ॥ ಕಳೆದಂ ಕಾಲವ ಧಾತ್ರಿಯೊಳ್ವ್ಯಾಧಿಬಲಂ ತೋರ್ದಂ
ತಿವಂ ದ್ರೋಹದಿಂ ।
ದಳಿದಿಗ್ಗಳ್ ವಿಜಯಧ್ವಜಂ ಮಸಣದೊಳ್ಳಿದ್ರಾರವಾಲಿಂಗಿತಂ ॥
ಮುಳಿಸಿಂ ಕೊಂದಪರಸ್ತ್ರಶಸ್ತ್ರವಿಷಪಾಷಾಣಂಗಳಿಂದೆನ್ನುತಂ ।
ಪಲಬುತ್ತಿರ್ಪನೆ ಭೀತಿಯಿಂದಿನಿಯಳೇ ! ಇರ್ಪಂ ಸುಖಾವಾಸ
ದೊಳ್ ।೧೭॥

ಚಂದ್ರ—ನಲ್ಲನೆ! ಇನ್ನಿದನ್ನು ಬಿಡು. ನಿನ್ನ ಕ್ರೂರ ಮುಖವನ್ನು ಶಾಂತಿಪಡಿಸಿಕೊಂಡು ಸೌಮ್ಯಸ್ವಭಾವವನ್ನು ತಾಳು. ಈದಿನದ ರಾತ್ರಿ ಉತ್ಸವದಲ್ಲಿ, ಅತಿಥಿಗಳ ಸಂಗಡ ಉಲ್ಲಾಸದಿಂದಿರುವನಾಗು.

ವೀರ.—ಎಲೌ ವಲ್ಲಭೆಯೆ! ನಾನೀರೀತಿಯಿರುವೆ. ನೀನೂ ಹಾಗೇ ಇರುವಳಾಗು. ಶೂರಸೇನನ ಕಂಡರಿದನ್ನು ಮರೆಯದೆ, ನಡೆ ನುಡಿ

ನೋಟಗಳಲ್ಲಿ ಮರ್ಯಾದೆಯನ್ನವನಿಗೆ ತೋರಿಸು.

ಕಂದ ॥ ನಲ್ಲಳೆ ಪ್ರೌಢವಿಯನಾಳ್ವೊಡೆ ।
ಪಲ್ಲನು ಕಿರಿಯುತ್ತ್ತನುತಿಯುಗೆಯ್ಯುತ ಜನರೊಳ್ ॥
ಸಲ್ಲುತಲಿರ್ಪಾ ಜನಪಗೆ ।
ನಿಲ್ಲದು ಸಿರಿಯುಂ ಧರೆಯುಲಿ ಸೇರದೆ ಪರರಂ ॥೧೯॥

ಚಂದ್ರ.—ಕಾಂತನೆ ! ಇನ್ನಿದನ್ನು ಮರೆತುಬಿಡು.

ವೀರ.—ಕಂದ ॥ ವಲ್ಲಭೆ ಭೀತಿಯುಚೇಳೀ ।
ಗೆಲ್ಲೆಡೆ ಚುಚ್ಚುತ್ತ ಮನವ ಪೃಚ್ಛದ ತುದಿಯಿಂ ॥
ಕೊಲ್ಲುತಿದ ಶೂರಸೇನನು ।
ಕಲ್ಲಿನ ತೆರದಿಂ ಧರೆಯೊಳು ಮಗನೊಡಲಿರಲುಂ ॥೯

ಚಂದ್ರವಲ್ಲಿ – ಅವರೇನು, ಚಿರಂಜೀವಿಗಳಾಗಿರುತ್ತಾರೊ ?

ವೀರ –ಆದ್ದರಿಂದಲೆ, ಮನಸ್ಸಿಗೆ ಕೊಂಚ ಧೈರ್ಯತೋರುತ್ತಿರುವದು. ನೀನು ಉಲ್ಲಾಸದಿಂದಿರು. ಕಾವಳವು ಜಗತ್ತನ್ನಾವರಿಸಿಕೊಂಡು ಅಂಧಕಾರದಲ್ಲಿ ಲೋಕವನ್ನು ಮುಳಗಿಸುವದಕ್ಕೆ ಮುಂಚೆಯೇ, ಈದಿನ ಬಂದು ಭಯಂಕರವಾದ ವಿಷಯ ನಡೆಯುವದು

ಚಂದ್ರ –ಅದೇನು.

ವೀರ –ಅದರ ವಿಷಯವನ್ನೀ ತಿಳಿಯದವಳಾಗಿರು. ಕಾರ್ಯ ನೆರವೇರಿದ ನಂತರ ಕೇಳಿ ಸಂತೋಷ ಪಡುವೆ.

ಕಂದ ॥ ಸುತ್ತಲು ಮುತ್ತಿಸಿ ಧಾತ್ರಿಯ ।
ಕತ್ತಲೆಯಿಂ ಶೂರಸೇನನಂ ಬಿಡದೀಗಳ್ ॥
ತುತ್ತನು ಮಾಡಾ ಮಾರಿಗೆ ।
ಕತ್ತಲೆಯೊಳ್ನಾಳಯೆ ! ಕಿವಿಚುತ ಕುತ್ತಿಗೆಯಂ॥೨೦

ಅಳಿದಂ ದಿನಮಣಿಯುಳಿದ ।
ತ್ರಿಳಿಯೊಳ್ವಾಯಸಕೆ ಬಲವೆನುತುಲೂಕಭಟರ್ ॥
ಎಲೆಮನೆಯುಂ ಸೋಲುವರೈ ।
ನಳಿನವೆ ಬಾಗಿಲ ತೆಗೆಯೆನುತಿರ್ಪುದುಬಮರಂ ॥೨೧

ನನ್ನ ಮಾತುಗಳು ಗೊತ್ತಾಗದೆ ನೀನು ಆಶ್ಚರ್ಯಪಡುತ್ತಿರಬಹುದು. ಕೊಂಚಕಾಲ ತಾಳ್ಮೆಯಿಂದಿರುವಳಾಗು.

ಕಂದ ॥ ಕೆಡಕಿನ ಮೊಳಕೆಯು ಬೆಳೆವುದು ।
ಕಡಿದಹಮುಳ್ಳಳ ತೊಡರೊಳಗಡಗಿರ್ದೊಡದಿ ॥
ನ್ನೊಡತಿಯೆ ನಡೆನಡೆ ಪೋಗುವ ।
ಮುಡುತತಿಯಿಂದಂ ಬೆಳಗುತಲಿರ್ಪುದುಗಗನಂ॥೨೨

ನಿಷ್ಕ್ರಾಂತರು.

೩ನೇ ಸ್ಥಾನ. ಉದ್ಯಾನವನ.

ಪ್ರವೇಶ.—ಮೂರುಜನ ಘಾತುಕರು.

೧ನೇ ಘಾತುಕ.—ನಮ್ಮ ಸಂಗಡ ಸೇರುವಂತೆ ನಿನಗೆ ಅಪ್ಪಣೆಕೊಟ್ಟವರ್ಯಾರು ?

೩ನೇ ಘಾತುಕ —ವೀರಸೇನ.

೨ನೇ ಘಾತುಕ.—ಇವನಲ್ಲಿ ನಾವು ಅನುಮಾನವಿಡತಕ್ಕ ಅವಶ್ಯಕವಿಲ್ಲ. ನಾವಿಲ್ಲಿಗೆ ಬಂದ ವಿಷಯವನ್ನೂ, ನಾವಿಲ್ಲಿ ಮಾಡತಕ್ಕ ಕೃತ್ಯವನ್ನೂ, ಇವನು ಸರಿಯಾಗಿ ಹೇಳುತ್ತಿರುವನು. ಇನ್ನೇತಕ್ಕೆ ನಾವು ಇವನದಲ್ಲಿ ಅನುಮಾನಪಡಬೇಕು.

೧ನೇ ಘಾತುಕ.— ಹಾಗಾದರೆ ನಮ್ಮ ಬಿತ್ತಾಸೆಗಿರು. ಮುಬ್ಬಂಜೆ ಕಳೆದು ಹೋಗುತ್ತಿರುವದು. ರಾತ್ರಿ ವಾಸಸ್ಥಾನವನ್ನು ಸೇರಲು ಮಾರ್ಗಸ್ಥರು ಕಾಲು ಚುರುಕುಮಾಡುತ್ತಿರುವರು. ನಾವು ಕಾದು ಕೊಂಡಿರುವವನು ಸಮೀಪಕ್ಕೆ ಬರುತ್ತಿರುವಂತಿದೆ.

೩ನೇ ಘಾತುಕ —ಕೇಳು! ಕುದುರೆಕಾಲು ಶಬ್ದದಂತೆ ಕೇಳುತ್ತಿರುವದು.

೨ನೇ ಘಾತುಕ.—ಅವನೇ ಇರಬಹುದು. ಉಳಿದವರೆಲ್ಲರು ಆಸ್ಥಾನ ವನ್ನಾಗಲೆ ಸೇರಿರುವರು.

೧ನೇ ಘಾತುಕ — ಅವನ ಕುದುರೆಗಳು ಹಿಂತಿರುಗಿ ಹೋಗುತ್ತಿವೆ.

೩ನೇ ಘಾತುಕ — ಸುಮಾರು ಒಂದು ಮೈಲಿ ಇರಬಹುದು. ಇವನು ಹೀಗೆಯೆ ಮಾಡಬೇಕು. ಇದರಂತೆಯೆ ಇಲ್ಲಿಂದ ಅರಮನೆಯುವರಿಗೆ ಎಲ್ಲರು ಪಾದಚಾರಿಗಳಾಗಿ ಹೋಗಬೇಕು.

೨ನೇ ಘಾತುಕ.— ಬೆಳಕು ! ಬೆಳಕು!

೩ನೇ ಘಾತುಕ.— ಅವನೇ ಇವನು.

೧ನೇ ಘಾತುಕ.— ಸಿದ್ಧವಾಗಿ.

ಪ್ರವೇಶ.—ದೀವಟಿಗೆಯುವನೊಂದಿಗೆ ಶೂರಸೇನ, ಅದ್ರಿ.

ಶೂರಸೇನ.—ಈದಿವಸ ಮಳೆ ಬರಬಹುದು.

೧ನೇ ಘಾತುಕ —ಬರಲಿ. (ಶೂರಸೇನನ ಮೇಲೆ ಬಿದ್ದು ಕಠಾರಿಯಿಂದ ತಿವಿಯುವನು.)

ಶೂರಸೇನ.—ಆಹಾ ! ದ್ರೋಹವೆ ! ದ್ರೋಹವೆ ! ಅದ್ರಿ! ಓಡು ಓಡು! ನೀನಾದರು ತಪ್ಪಿಸಿಕೊಂಡು ಮುಂದೆ ಮತ್ಸರವನ್ನು ತೀರಿಸಿಕೊ. ಹಾ ! ಗುಲಾಮನೆ ! ಹಾ ಪಾಪಿ ! (ಪ್ರಾಣಬಿಡುವನು. ಅದ್ರಿಯು ದೀವಟಿಗೆಯುವನು ಓಡಿ ಹೋಗುವರು.)

೩ನೇ ಘಾತುಕ.— ಬೆಳಕನ್ನಾರು ಕೆಡಿಸಿದರು !

೧ನೇ ಘಾತುಕ.— ಈಕಡೆಯಲ್ಲವೆ ?

೩ನೇ ಘಾತುಕ —ಒಬ್ಬ ಮಾತ್ರ ಉರುಳಿದ. ಮತ್ತೊಬ್ಬ ತಪ್ಪಿಸಿಕೊಂಡ.

೨ನೇ ಘಾತುಕ.— ಅರ್ಧಕೆಲಸ ಕೆಟ್ಟು ಹೋಯಿತು.

೧ನೇ ಘಾತುಕ.—ಒಳ್ಳೇದು ! ಆದಷ್ಟು ತಿಳಿಸೋಣ ಬನ್ನಿ.

ನಿಷ್ಕ್ರಾಂತಾಃ ಸರ್ವೇ.

೫ನೇ ಸ್ಥಾನ.

ಅರಮನೆಯಲ್ಲಿ ಭೋಜನಶಾಲೆ.

ಪ್ರವೇಶ.—ವೀರಸೇನ, ಚಂದ್ರವಲ್ಲಿ, ನಂದರಾಜಮುಂತಾದ ಉಪರಾಜರು, ಪರಿವಾರಜನಗಳು.

ವೀರಸೇನ.— ಪದ್ಧತಿಯನ್ನು ಎಲ್ಲರೂ ಬಲ್ಲಿರಿ. ನಿಮ್ಮ ನಿಮ್ಮ ಸ್ಥಳದಲ್ಲಿ ಕ್ರಮವಾಗಿ ಕೂತುಕೊಳ್ಳಿ. ನಿಮ್ಮನ್ನೆಲ್ಲ ನೋಡಿ ಸಂತೋಷ ಉಕ್ಕುತಿರುವದು.

ಉಪರಾಜರು — ಮಹಾಸ್ವಾಮಿಗೆ ಕೃತಜ್ಞರಾದೆವು.

ವೀರಸೇನ.—ಕೈಲಾದಮಟ್ಟಿಗೆ ನಾನೆ ನಿಮಗಾತಿಥ್ಯವನ್ನು ಮಾಡುವೆ. ಅರಸಿಯೂ ಸಕಾಲದಲ್ಲಿ ನಿಮ್ಮನ್ನಾದರಿಸುವಳು.

ಚಂದ್ರವಲ್ಲಿ — ಮಿತ್ರಮಂಡಲಿಗೆಲ್ಲ ಸ್ವಾಗತ. ಸಂತೋಷಾಧಿಕ್ಯದಿಂದ ಮಾತನಾಡಲು ಅವಕಾಶವಿಲ್ಲ.

ವೀರ.— ನೋಡು. ತಮ್ಮ ಕೃತಜ್ಞತೆಯನ್ನು ತೋರಿಸುತ್ತಿರು

ವರು. ಉಭಯಪಾರ್ಶ್ವವೂ ಸಮನಾಗಿರುವದು. ಮಧ್ಯದಲ್ಲಿ ನಾನು ಕೂತುಕೊಳ್ಳುವೆನು. ಹರ್ಷೋಲ್ಲಾಸ ಮಿತಿಮೀರುತ್ತಿರುವದು. ಇನ್ನೆಲ್ಲರಿಗು ಬಂದಾವೃತ್ತಿ ಪಾನವಾಗಲಿ.

ಪ್ರವೇಶ.—(ಬಾಗಿಲಬಳಿಗೆ,) ೧ನೇ ಘಾತುಕ.

ವೀರ.—(ಬಾಗಿಲಬಳಿ ರಹಸ್ಯವಾಗಿ) ನಿನ್ನ ಮುಖದ ಮೇಲೆ ರಕ್ತವಿರುವದು.

೧ನೇ ಘಾತುಕ —ಹಾಗಾದರೆ ಅದು ಶೂರಸೇನನದು.

ವೀರ.—ಅದು ಅವನಲ್ಲಿರುವಗಕ್ಕಿಂತ ನಿನ್ನ ಮೇಲಿರುವದುತ್ತಮ. ಅವನಾಟ ಪೂರೈಸಿತೊ?.

೧ನೇ ಘಾತುಕ — ಅವನ ಕುತ್ತಿಗೆಯನ್ನು ನಾನೇ ಕತ್ತರಿಸಿದೆ.

ವೀರ — ಕತ್ತು ಕತ್ತರಿಸುವರಲ್ಲಿ ನೀನುತ್ತಮನು. ಅದ್ರಿಯ ಕತ್ತನ್ನೂ ನೀನು ಕತ್ತರಿಸಿದ್ದರೆ ನೀನೇ ಸರ್ವೋತ್ತಮನಾಗುವೆ.

೧ನೇ ಘಾತುಕ —ಮಹಾಪ್ರಭು ! ಅದ್ರಿ ತಪ್ಪಿಸಿಕೊಂಡ.

ವೀರ —ಹಾಗಾದರೆ ಈ ಸನ್ನಿ ನನಗೆ ತಪ್ಪಲಿಲ್ಲ. ಅದೂ ಆಗಿದ್ದರೆ ನಿರ್ಬಾಧಕವಾಗಿ ಅರೆಬಂಡೆಯಂತೆ ಗಟ್ಟಿಯಾಗಿಯೂ, ಜಗದ್ವ್ಯಾಪಕನಾದ ಮಾರುತನಂತೆ ನಿರ್ಬಂಧವಿಲ್ಲದೆಯೂ ಇರುತ್ತಿದ್ದೆ. ಶೂರಸೇನನ ವಿಷಯವಾದರೂ ಖಂಡಿತವೊ?

೧ನೇ ಘಾತುಕ.— ಜೀಯ್ಯಾ! ಅದರಲ್ಲಿ ಸಂದೇಹವಿಲ್ಲ. ಕೊರಕಲಲ್ಲವನ ಶವ ಬಿದ್ದಿರುವದು. ತಲೆಯು ಗಾಯಗಳಿಂದ ಇಪ್ಪತ್ತು ಕಡೆ ಬಿರಕಾಗಿರುವದು. ಅವರಲ್ಲಿ ಬಂದಕ್ಕೇನೆ ಪ್ರಾಣ ಉಳಿಯುವದಿಲ್ಲ.

ವೀರ —ಅದಕ್ಕಾಗಿ ಕೃತಜ್ಞನಾಗಿರುವೆ.

ಕಂದ ॥ ಅಳಿದುದು ಪೆರ್ಬಲವೀಗಿ ।
ನ್ನುಳಿದಿರ್ಪುದು ನನಗಿದೊಂದಪರ ಮರಿಯೀಗಳ್ ॥
ಬಲಿತುವಿಷಂ ಮುಂದಿದು ತಾಂ ।
ಕಲಿವುದು ಕಡಿವುದನದುವರಿಗಿಲ್ಲಿಪರ ಭಯಂ॥೨೩॥

ಇನ್ನು ಹೋಗು. ನಾಳೆ ಮತ್ತೆ ಕಾಣಬಹುದು.

ನಿಷ್ಕ್ರಾಂತಃ.—ಘಾತುಕ.

ಚಂದ್ರವಲ್ಲಿ – ರಾಜೋತ್ತಮನೆ ! ನೀನು ಅತಿಥಿಗಳನ್ನು ಪ್ರೋತ್ಸಾಹಿಸುತ್ತಿಲ್ಲ. ಉಪಚಾರವಿಲ್ಲದ ಊಟ, ದುಡ್ಡಿಗಾಗಿಟ್ಟಂತಿರುವದು. ಅಂತಹ ಔತಣಕ್ಕಿಂತಲು ಅವರವರ ಮನೆಯಲ್ಲಿ ಅವರವರು ಊಟ ಮಾಡುವದುತ್ತಮ. ಔತಣಗಳಲ್ಲಿ ತುತ್ತು ತುತ್ತಿಗು ಉಪಚಾರ ವಿರಬೇಕು. ಅಲ್ಲದಿದ್ದರದು ರುಚಿಸದು.

ವೀರ.– ಇದನ್ನು ಜ್ಞಾಪಿಸಿದ್ದಕ್ಕಾಗಿ ವಂದಿಸುವೆ. ಎಲ್ಲರೂ ಸಾವಕಾಶವಾಗಿ ಭೋಜನ ಮಾಡಬೇಕು.

ಕಳಿಂಪ.—ಮಹಾಪ್ರಭು ! ದಯುವಿಟ್ಟು ತಮ್ಮ ಪೀಠವನ್ನಲಂಕರಿಸಬೇಕು.

(ಶೂರಸೇನನ ಪ್ರೇತ ಬಂದು ವೀರಸೇನ ಸ್ಥಳದಲ್ಲಿ ಕೂತುಕೊಳ್ಳುವದು.)

ವೀರ.—ಕಂದ ॥ ಸಲ್ಲದಿದಿರ್ಪುದು ಭವನಂ ।
ಸೊಲ್ಲಿಸಿದೋಲ್ಶೂರಸೇನನಿಲ್ಲದೆ ಸಭೆಯು ।
ಲ್ಲಿಲ್ಲದಿರಲ್ದುಕ್ಕರೆ ನಿಂ ।
ತಲ್ಲದಿವಂ ನಿಲ್ಲನು ನಿಜ ಮಾಕಸ್ಮಿಕದಿಂ ॥ ೨೪ ॥

ನಂದರಾಜ.– ಬಾರದೆ ಇರತಕ್ಕ ತಪ್ಪಿಗೆ ಅವನೆ ಗುರಿಯಾಗಿರುವನು.

ದಯವಿಟ್ಟು ಮಹಾಸ್ವಾಮಿಯವರ ಪಜ್ತ್ರಿಲಾಭವನ್ನುಂಟುಮಾಡ ಬೇಕು.

ವೀರ — ಎಲ್ಲಾ ಸ್ಥಳಗಳು ತುಂಬಿರುವದಲ್ಲ.

ಕಳಿಂಗ — ತಮಗಾಗಿ ಈ ಸ್ಥಳವನ್ನು ನಿಲ್ಲಿಸಿದೆ.

ವೀರ — ಎಲ್ಲಿ ?

ಕಳಿಂಗ.— ಇಗೊ! ಇಲ್ಲಿ, ಮಹಾಸ್ವಾಮಿ. ಇದೇಕೆ! ಹೀಗೆ ಅಪ್ಪಣೆ ಕೊಡಿಸುವಿರಿ.

ವೀರ — ಇದನ್ನಾರು ಮಾಡಿದರಿ!!!

ಉಪರಾಜರು.— ಯಾವದನ್ನ! ಮಹಾಸ್ವಾಮಿ!

ವೀರ.—ಕಂದ || ಎಲೆಲೆಲೆ! ನೀನೆಂತಿದ ನ |
ನ್ನೊಳು ಭಾವಿಪೆ ನಾನಿದನ್ನು ಮಾಡವನಲ್ಲಂ ||
ತಲೆಯೋಳ್ರಕುತದ ಶಿಖಿಯು |
ನ್ನಲುಗಿಸುತದನೇಕೆ ತೋರ್ಪೆ ನೀನೆನಗೀಗಳ್ ||

ನಂದರಾಜ — ಏಳಿ ಏಳಿ! ಮಹಾಸ್ವಾಮಿಯವರು ಸ್ವಸ್ಥವಾಗಿರುವಂತೆ ಕಾಣೆ.

ಚಂದ್ರವಲ್ಲಿ —ಕೂರಿಕೂರಿ! ಮಿತ್ರರೆ! ಏಳಬೇಡಿ. ಈರೀತಿ ನಮ್ಮ ಯಜಮಾನರಿಗೆ ಆಗಾಗ್ಗೆ ಆಗುವದುಂಟು. ಈ ವ್ಯಾಧಿ ಇವರಲ್ಲಿ ಬಾಲ್ಯದಿಂದಲೂ ಇರುವದು. ಖಂಡಿತವಾಗಿ ಕೂತುಕೊಳ್ಳಿ. ಇದೊಂದು ಕ್ಷಣಮಾತ್ರವಿರುವದು. ಅವರನ್ನೇ ನೀವು ನೋಡ ದಿರಿ. ಅದರಿಂದಿದು ಹೆಚ್ಚುವದು. ಮನಸ್ಸಿಗಿದನ್ನು ತಂದುಕೊಳ್ಳದೆ ಭೋಜನ ಮಾಡುತ್ತಿರಿ. ನೀನೇನು ಗಂಡಸೆ?

ವೀರ.—ಕಂದ ॥ "ಗಂಡಸೆ" ಎಂಬೆಯು ಆಹಾ! ।
ಷಂಡನು ನೊಳ್ಪನೆ? ಎದುರಿನ ಕಡುಭೀಕೃತಿಯಂ ॥
ಮಂಡೆಯನೆತ್ತನು ಭೈರವ ।
ಕಂಡರುಮಿದನಂಜುತಿದು ಖಂಡಿತಕೇಳ್ ॥೨೬॥

ಚಂದ್ರ.—ಇದೇ ಅಲ್ಲವೆ ನಿನ್ನ ಸ್ವಭಾವ? ನಿನ್ನ ಮನಸ್ಸಿಗೆ ತೋರಿದ ಕಳವಳವೂ ಇದೇ ಅಲ್ಲವೆ? ವಿಜಧ್ವಜನ ಕಡೆಗೆ ಕರೆದೊಯ್ದ ಮಾಯದ ಕಠಾರಿಯೂ ಇದೇ ಅಲ್ಲವೆ? ಇಂತ ಹೆದರಿಕೆ ಬೆದರಿಕೆಗಳು, ಮಲಗದಿರುವ ಮಕ್ಕಳನ್ನು ಅಂಜಿಸಲು ಅಜ್ಜಿಯರಿಗೆ ಯೋಗ್ಯವಾದವು. ನಾಚಿಕೆಯಾಗುವದಿಲ್ಲವೆ? ಮುಖವನ್ನೇತಕ್ಕೀರೀತಿ ವಿಕಾರಪಡಿಸುವೆ? ಎಲ್ಲವೂ ಆದನಂತರ ಒಂದು ತೃಣವನ್ನು ನೆನೆದು ಹೆದರುತ್ತಿರುವೆ.

ವೀರ.—ಕಂದ ॥ ಹಾ! ನೋಡು ನೋಡದನು ಹಾ ।
ಹಾ! ನೋಡಾ ಕಾಲಭೈರವಾ ಕೃತಿಯಂ! ನೀ ॥
ನೇನೆಂಬೀಗದ ನೋಡಿಯು ।
ನೀನೇತಕೆ ನೋಳ್ಪೆ ನನ್ನ ತೆಗೆತೆಗೆ ನೋಡೇಂ ॥

ತಲೆಯನ್ನೊದರಲ್ಕಾದೊಡೆ ।
ಸಲೀಲದಿಂ ಸೊಲ್ಲನೆತ್ತಿ ಮಾತಾಡಲೆನೀಂ ॥
ಇಳೆಯೊಳ್ಪೂಳದ ಪೆಣನಿಂ ।
ತಿಳೆಯುಂ ಬಿಡುತೇಳ್ ಕೊಡುವೆವಾವ್ ಪದ್ದಿಗದಂ ॥

ನಿಷ್ಕ್ರಾಂತಃ ಪ್ರೇತ

ಚಂದ್ರ.—ಇದೇನು! ಶುದ್ಧ ಹುಚ್ಚನಾದೆ.

ವೀರ.—ನಾನಿಲ್ಲಿದ್ದರೆ ಅವನು ಕಾಣುವನು.

ಚಂದ್ರ.—ಛೀ! ಛೀ! ನಾಚಿಕೆಯಾಗುವದಿಲ್ಲವೆ?

ವೀರ.—ವೃತ್ತ ॥ ಎಲ್ಲೆಲ್ಲುಂ ಕೊಲೆಯಿಂ ನರಂ ರಕ್ತವಂ ಚೆ
ಲ್ಲಿರ್ಪನೀ ಧಾತ್ರಿಯೊಳ್ ।
ಸೊಲ್ಲಂ ಮೀರಿದ ರೀತಿಯಿಂ ಪಗೆಯು ಕೊಂದೀ ರುದ್ರಭೂಭಾ
ಗದೊಳ್ ॥
ಚಲ್ಲಿರ್ಪರ್ಶ್ವಕೋಟಿಯಂ ಸದವರ್ ಪೂಳರ್ದವಂ ಭೂಮಿಯು ।
ನ್ನೆಲ್ಲಂತಾಂ ಬಿಡುತೆದ್ದುದಂ ಭುವನದೊಳ್ಕೇಳಲ್ಲಿದೊಂದದ್ಭುತಂ॥

ಕಂದ ॥ ಅಳಿದ ನರನೇಳ್ವುದರಿದೀ ।
ಯಿಳೆಯೊಳ್ಕಣ್ಣೀರುತಿರ್ದ ಪೂಳಲವ ಮೊದಲ್॥
ಇಳೆಯುಂ ಬಿಟ್ಟೇಳ್ದೀಗವ ।
ತಲೆಯಂ ತೂಗುತ್ತಲಿರ್ಪ ನನ್ನಾಸನದೊಳ್ ॥೩೦

ಚಂದ್ರ.—ರಾಜೋತ್ತಮನೆ! ಈ ಮಿತ್ರರು ನಿನ್ನ ಸಂಘವನ್ನು ಅಪೇಕ್ಷಿಸುತ್ತಿರುವರು.

ವೀರ.—ನಾನು ಇನ್ನಿದನ್ನು ಮರೆತುಬಿಡುವೆ. ಎಲೈ ಪೂಜ್ಯರೆ! ನೀವು ನನ್ನ ನೋಡಿ ಆಶ್ಚರ್ಯಪಡಬೇಡಿ. ನನ್ನಲ್ಲಿ ಒಂದು ವಿಜಾತಿಯವಾದ ಜಾಡ್ಯವಿರುವದು. ನನ್ನ ದೇಹಧರ್ಮವನ್ನು ತಿಳದವರಿಗದು ಅಲ್ಪವಾಗಿ ತೋರುವದು. ಇನ್ನು ತೆಗದುಕೊಳ್ಳೋಣಾಗಲಿ. ನಾನೂ ಕೂತುಕೊಳ್ಳುವೆನು. ಪಾನಕ್ಕುಪಕ್ರಮಿಸಿ. ನನಗೆ ದ್ರಾಕ್ಷಾರಸವನ್ನು ಕೊಡಿ. ಪಾತ್ರೆ ತುಂಬಲೂ ಇರಲಿ—ಇದನ್ನು ನಿಮ್ಮೆಲ್ಲರ ಕ್ಷೇಮಾರ್ಥವಾಗಿಯೂ, ಬರದೆ ಮರೆಮಾಚಿರುವ ನನ್ನ ಪ್ರಿಯಮಿತ್ರನಾದ ಶೂರಸೇನನ ಕ್ಷೇಮಾರ್ಥವಾಗಿಯೂ

ಕುಡಿಯುವೆನು. (ಪ್ರವೇಶ— ಶೂರಸೇನನ ಪ್ರೇತ)

ಉಪರಾಜರು.—ನಮ್ಮ ಕೃತಜ್ಞತೆಯೂ, ರಾಜನಿಷ್ಠೆಯೂ, ಇದನ್ನ ವಲಂಬಿಸುತ್ತಿರುವದು.

ವೀರ.—ಕಂದ ॥ ತೊಲಗು ತೊಲಗು ನೀನಿಲ್ಲಿಂ ।
ದೆಲೆಲೆತೊಲಗುತಡಗುಭೂಮಿಯೊಳುನಿನಗೀಗಳ್ ॥
ಬಲವಿಲ್ಲೆಳ್ಳನಿತುಂ ನಿ ।
ನ್ನೆಲುಬೊಳು ನೆಣವೆಲ್ಲ ಕರಗಿಹುದು ನಡೆನಡೆ ನೀಂ ॥
ತಣ್ಣಗಿಹುದು ಶೋಣಿತವುಂ ।
ಮಣ್ಣೊಳಡಂಗಿರ್ದ ನೋಡಲವ್ಮೆಯು ನನ್ನಂ ॥
ಕಣ್ಣತೆರೆಯಲೇಂ ನಿನ್ನಯ ।
ಕಣ್ಣೊಳಗಲ್ಲರಿವು ಬರಿದದಿಟ್ಟಿಸುತಿರ್ಪ ॥೭೦॥

ಚಂದ್ರವಲ್ಲಿ—ಪೂಜ್ಯರೆ! ಇದನ್ನು ಅವರ ಸ್ವಭಾವವೆಂದು ಭಾವಿಸಿ. ಇವರಿಂದ ಈಗಿನ ಉತ್ಸವಭಂಗವಾಗುತ್ತಿರುವದೆ ಹೊರ್ತು, ಮತ್ತೇನೂ ಇಲ್ಲ.

ವಿರ.—ಕಂದ ॥ ಮಾನವನನಗಲ್ಹಾದುದ ।
ನಾನೆಸಗಲ್ಬಲ್ಲೆ ನಾವೊಡೀಗಿನ ಪರಿಯಂ ॥
ನೀನುಳಿದಿನ್ನೆಂತುಂ ಬಾ ।
ನಾನಂಜದೆನಿನ್ನ ನಾಗನೋಡಲ್ಕಿಹೆನ್ಸ ॥ ೭೩ ॥
ಬಾ ಬಾ ಪೆರ್ಬುಲಿಯೆನ್ನುಂ ।
ಬಾ ಬಾ ಕಡುಗಂಡಮಿಗದವೊಲಿದನ್ನುಳಿಡುಂ ॥
ಬಾ ಭಲ್ಲೂಕಾಕೃತಿಯಿಂ ।
ದೀಭೂಮಿಯೊಳೀಗ ನಿನಗೆ ಹೆದರುವನಲ್ಲಂ ॥೭೪॥

ಅಲ್ಲದಿರೆ ಜೀವವಿರ್ದೊಡೆ ।
ನಿಲ್ಲು ತಕಾಳಗಕೆ ಖಡ್ಗದಿಂ ತರಿಯುತಬಾ ।
ನಿಲ್ಲಿಸು ಸೋತೆನು ನಾನೆನೆ ।
ನಿಲ್ಲದೆ ಕರೆಯುನ್ನ ನಾಗ ಕುನ್ನಿಯನುತನೀಂ ॥೩೫॥

ಹೇಸಿಗೆಯಾದ ನೆರಳೆ! ತೊಲಗಾಚೆ. ನಿಷ್ಕ್ರಾಂತಃ —ಪ್ರೇತ.

ಕೃತ್ರಿಮದ ಭಯ ತೊಲಗಿತು. ನಾನು ಯಥಾಪ್ರಕಾರವಾದೆ. ದಯವಿಟ್ಟು ಎಲ್ಲರೂ ಕೂರಿ.

ಚಂದ್ರವಲ್ಲಿ —ಈಗಿನ ಆನಂದವನ್ನೆಲ್ಲ ನೀನು ಹಾಳುಮಾಡಿದೆ. ಹೇಳಲಶಕ್ಯವಾದ ಗಲಿಬಿಲಿಯಿಂದ ಈ ಸಭೆಯನ್ನು ಕಲಕಿಬಿಟ್ಟೆ.

ವೀರ —ಕಂದ ॥ ಮೇಘಂಗಳ್ಸಂಗಾರೆೊಳ್ ।
ಮೂಗಾವುದ ಘರ್ಜಿಸುತ್ತಿಡರಿ ಸಾರ್ದಂತಾ ॥
ಯಿನ್ತಾಗಿ ಮಹಾದ್ಭುತಂ ಮನ ।
ಕೀಗಿವರೊಳ್ತೋರದಿರ್ಪುದೀಷದ್ಭಯಮುಂ ॥ ೩೬ ॥

ಕಂದಿರ್ಪುದೆನ್ನ ಕಿಡುಮೊಗ ।
ಬಂದಿರ್ದುದಕಂಡು ಪಲ್ಲವಾಧರೆ ಭಯದಿಂ ॥
ಕುಂದದಿಹುದೆಂತು ನಿನ್ನಯ ।
ಚಂದ ಪಿಯೊಳ್ಕೆಂಪು ಪೇಳದೊಂದದ್ಭುತವಂ ॥೩೭॥

ನಂದರಾಜ. —ಮಹಾಸ್ವಾಮಿ! ಬಂದಿದ್ದದ್ದೇನು!

ಚಂದ್ರವಲ್ಲಿ —ನಿಮ್ಮನ್ನು ವಂದಿಸುವೆನು. ಮಾತನಾಡಿಸಬೇಡಿ. ಮಾತಾಡಿದರೆ ಹೆಚ್ಚಾಗುವದು. ಇನ್ನೆಲ್ಲರೂ ದಯಮಾಡಿಸಿ. ಜಾಗ್ರತೆಪಡಿಸಿ. ಪದ್ಧತಿಯನ್ನನುಸರಿಸದೆ, ಒಮ್ಮಿಂದೊಂದೆ ಪ್ರಯಾಣ ಬೆಳಸಿ.

ಕಳಿಂಗ —ಪ್ರಭುಗಳಿಗೆ ಕ್ಷಿಪ್ರದಲ್ಲಿ ಗುಣತೋರಲಿ.

ಚಂದ್ರವಲ್ಲಿ —ಎಲ್ಲರಿಗೂ ಸುಖಾಗಮನ.

ನಿಷ್ಕ್ರಾಂತಾಃ ಸರ್ವೇ —ಚಂದ್ರವಲ್ಲಿ ವೀರಸೇನನ ಬಿಟ್ಟು.

ವೀರಸೇನ —ಕಂದ ॥ ಶೋಣಿತವಂ ಪೀರ್ದಪ ತಂಶಂ ।
ಶೋಣಿತವಂ ಕಾರದಿರ್ಪನೆನುವರ್ಜನಗಳ್ ॥
ಕಾಣುವದೆನ್ತುಂ ಕೊಲೆಯೀ । [೩೪॥
ಕ್ಷೋಣಿಯೊಳಲ್ಲದದ ನೊಸಲಾಗದು ಜನರಿಂ ॥

ಹೊತ್ತೆಷ್ಟಾಗಿರುವದು ?

ಚಂದ್ರವಲ್ಲಿ.—ಇನ್ನೇನು ಬೆಳಗಿನ ಜಾವವಾಗುತ್ತಿರುವದು.

ವೀರಸೇನ — ಹೇಳಿಕಳುಹಿಸಿದರೂ ಜಯಸಿಂಹನು ಮುಖವನ್ನು ತೋರಿಸುವದಿಲ್ಲ ; ಇದರಿಂದ ನಿನಗೇನು ತೋರುವದು ?

ಚಂದ್ರವಲ್ಲಿ.—ಹೇಳಿಕಳುಹಿಸಿತ್ತೊ ?

ವೀರ.—ಅವನು ಬರುವದಿಲ್ಲವೆಂಬ ವರ್ತಮಾನ ಕೇಳಿರುವೆನು. ಹೇಳಿಯೂ ಕಳುಹಿಸುವೆನು. ಅವನ ಮನೆಯಲ್ಲಿರತಕ್ಕ ಆಳುಗಳೆಲ್ಲರೂ ಲಂಚದಿಂದ ನನ್ನ ವಶವರ್ತಿಗಳಾಗಿರುವರು. ನಾಳೆ ಹೇಳಿಕಳುಹಿಸುವೆನು. ಅದಕ್ಕೆ ಮುಂಚಿತವಾಗಿ ಶಕ್ತಿಗಳನ್ನು ಕಾಣುವೆ. ಇನ್ನು ಕೆಲವು ವಿಷಯಗಳನ್ನು ಅವರಿಂದ ತಿಳಿದುಕೊಳ್ಳಬೇಕು. ನಿಕೃಷ್ಟವಾದ ಮಾರ್ಗದಿಂದ ನಿಕೃಷ್ಟವಾದ್ದನ್ನು ತಿಳಿಯದೆ ಬಿಡುವದಿಲ್ಲ. ನನ್ನ ಕ್ಷೇಮಾರ್ಥವಾಗಿ, ಇನ್ನೇನುಬೇಕಾದರು ಮಾಡುವೆನು.

ವೃತ್ತ ॥ ಇರುವೆಂ ನಾನೀಜುತೀ ಶೋಣಿತದ ಕಡಲ ಮಧ್ಯಪ್ರದೇಶಂಗಳೊಳ್ಸಂ । ವರಿದೀಗಳ್ಪೋಪುದುಂ ಪಿಂದೆಗೆದು ನಡೆ

ವುದೀಗೀಜುವಂಗೊಂದೆಯೆನ್ನುತ್ತುಂ ॥ ಬರಿದೀಗೆಳ್ಳಾಂಬಳಲ್ದಿಂ
ತು ಬಸವಳದು ಹಿಮ್ಮೆಟ್ಟಿಯುಂ ಸೌಖ್ಯಮಿಲ್ಲಾ । ಮರೆ
ತಿಂಗಳ್ಳಾನಿದಂ ಮತ್ತೆ ಪಗೆಗಳಸುವಂ ಪೀರ್ದು ಕೇಳ್ದಾತ್ರಿ
ಯಾಳ್ವೆಂ ॥ ೩೯ ॥

ಚಂದ್ರವಲ್ಲಿ — ನಿದ್ರೆಯಿಲ್ಲದೆ ಆಯಾಸಪಡುತ್ತಿರುವೆ.

ವೀರ — ಬಾ, ಮಲಗುವದಕ್ಕೆ ಹೋಗೋಣ.

ಕಂದ ॥ ಭ್ರಮೆಯಿಂತುದು ಮನವಿಗ ।
ಘ್ರಮಣಿಯೆ ಕೆಡಕಿನ ಪೊಸಲತೆ ಪರ್ಬದೆಯಿರಲುಂ॥
ಶ್ರಮುವನ್ನೀಯುದು ಮರುಕಂ ।
ಕ್ರಮದಿಂ ಬೆಳೆಯುತ್ತು ಕೆಡಕಡದ್ದೊಡೆ ಮನವಂ॥

ನಿಷ್ಕ್ರಾಂತರು.

೫ನೇ ಸ್ಥಾನ.

ಮರುಭೂಮಿ, ಗುಡುಗು ಮಿಂಚಾಗುತ್ತಿರುವದು.

ಪ್ರವೇಶ — ಯಕ್ಷಿಣಿ, ಶಕ್ತಿತ್ರಯಗಳು.

೧ನೇ ಶಕ್ತಿ — ಇದೇನು! ಯಕ್ಷಿಣಿ! ಕೋಪದಿಂದಿರುವಂತಿದೆ?

ಯಕ್ಷಿಣಿ — ವೃತ್ತ ॥ ತೋರೆ ಮೊಳ ನೀನು ಮುಖವನುಗಿವೆ ನಾನು
ಮೋರೆಮೇಲ್ । ಸೇರಿ ನೀವುನೀವೆ ನನ್ನನುಳದು ಮಾಡಿ
ಮಾಟವಂ। ವೀರಸೇನಗೀಗತೋರ್ದುನಮ್ಮಘೋರವಿದ್ಯವಂ।
ಮಾರಿರಂತೆಮಾಳ್ದರೀಗ ಕೇಡನೀವು ಸೇರುತಂ ॥೪೧॥
ಕೇಡಿಗೆಲ್ಲ ವೊಡತಿಯಾದ ನನ್ನನುಳದು ನೀವೆನೀ ।
ವೊಡತಿಯನ್ನು ಬಿಟ್ಟದೆಂತು ಕೇಡಗೈದಿರೀಗ ನೀವ್ ॥

ನೋಡಿ ನಾನುಬಿಡುವಳಲ್ಲ ಸಿಗಿದು ಬಗೆದು ನಿಮ್ಮನಾಂ ।
ಮಾಡೆ ಬಿಡದೆ ಮುಂಡೆರನ್ನು ಸುಟ್ಟುನಿಮ್ಮಮಂಡೆಯುಂ ॥
ಇಂತು ನೀವು ಮಾಡಿಫಲವು ತೋರದೀಗ ವೀರಸೇ ।
ನೆಂತು ನಿಮ್ಮ ದೈವನಲ್ಲದಿವನೊಳಲ್ಲ ಭಕ್ತಿಯುಂ ॥
ಮಂತ್ರ ದಿಂದಿವೆಲ್ಲರಂತೆ ತನ್ನ ಕಾರ್ಯವಾಗಮೇಲ್ ।
ಯಂತ್ರತಂತ್ರಮಂತ್ರಮಾಟ ಸುಳ್ಳದೆನುವ ನೋಡಿನೀಂ ॥

ವೃತ್ತ ॥ ಬಿಡುವೆನು ಕೋಪವ ನಾನಿಲೆ ದುಷ್ಟರೆ ಕಾವಲುಮಧ್ಯದ
ಗುಂಡಿಗೆಕೇಳ್ । ಮಡಿಕೆಯು ಬಾನೆಯು ಯಂತ್ರವಗಿರುವ
ಕಂಠದಸಂಗಡ ತನ್ನಿರಿ ನೀವ್ ॥ ಕಡಿದಿಹದುಃಖದಿ ವೀರನು
ಶಕ್ತಿಯು ಮಾತನು ಕೇಳಲು ಗುಂಡಿಗೆಬೇಗ್ । ತಡಕುತ
ಕಾವಲಿಗೀಗಳೆಬರ್ಪನು ಸಾರಿರಿಮುಂಗಡೆ ಬೇಗನೆನೀವ್ ॥ ೪೪ ॥

ತಳಮಳಗುಟ್ಟುವ ನೀರಲಿ ಮಯ್ಯನುತೋಯಿಸಿ ನಳ್ಳ
ಯತಿನ್ನುತನಾಂ । ಕೊಳಗುಳದಿಂದಲೆ ಮೇಲಕೆಪಾರುವ
ಗೃಧ್ರನಸಂಗಡ ಸೇರುತನಾಂ ॥ ಕಳೆವೆನು ರಾತ್ರಿಯ ವಾಲೆ
ಯನೊಲ್ಲದೆ ಮೂಳೆಯ ಮೇಲಿರುಳೆಲ್ಲವುನಾಂ । ಚಳಕದಿ
ಮಾಡುವೆ ಕಷ್ಟದಮಾಟವ ನಾಳೆಯುರಾತ್ರಿಯುಮುನ್ನಮೆ
ಕೇಳ್ ॥ ೪೫ ॥

ಉಡುಪತಿಮೊಡದ ಮುಂಗಡೆ ತೋಡದಬಾಲವು ತೂಗು
ತಲಿರ್ಪುದದಂ। ಕೆಡಹದೆ ಭೂಮಿಗೆ ಭಟ್ಟಯನಿಟ್ಟದ ಮಂತ್ರ
ದತೈಲವ ಹಿಂಡುವರಿಂ ॥ ಗುಡಗಿನಸಂಗಡ ತಂತ್ರದಮಂಡೆಯು
ಮೇಲ್ಗಡೆಕಾಣಿಸಿ ವೀರಗೆನಾಂ । ಗಡಬಿಡಿಮಾಡುತ ಮಂಕಿನ
ಬೂದಿಯು ಚೆಲ್ಲುತಲಿರ್ಪನು ಭೂಮಿಯುಮೇಲ್ ॥ ೪೬ ॥

ತ್ರಿಪದೊನ್ನತಿ || ವೀರನು ನಂಬಿದನೆಲ್ಲರನುಂ |
ಮೀರಿದ ಮಾನವ ತಾನೆನುತಂ ||
ಧೈರ್ಯವ ತಾಳ್ದವ ಕಾರ್ಯವ ಮಾಡದೆ |
ವೈರಿಯು ಕಯ್ಯೊಗೆ ಸಿಕ್ಕುವನುಂ ||೪೭||

(ರಾಗ —ಯಮುನಕಲ್ಯಾಣಿ, ಏಕತಾಳ)

ತೆರೆಯೊಳಗೆ —ಚಂಡಿ ಬಾಸೇರೀ | ಲೋಕವನಸುಡುತಲಿ | ಶಾಕಿನಿಡಾಕಿನಿಬಂದಿ
ಹವು ||ಪ|| ಯಕ್ಷಿಣಿಯೇ | ಶೋಣಿತದ | ಧಾರೆಯಾಧಾತ್ರಿಯು
ಪರಿದೀಗ || ೧ || ಕ್ಷೋಭೆಯನು | ಕ್ಷೋಣಿಯಲಿ | ಕಾಣಿಸೆ
ಶಾಕಿನಿಸಮುದಾಯ ||೨|| ಭೂತಗಳು | ಪ್ರೇತಗಳ | ನುಂಗ
ತಬಂದಿವೆ ಪರಿದಾರಿ ||೩||

(ರಾಗ.—ನಾದನಾಮಕ್ರಿಯೆ, ಏಕತಾಳ ಧಾಟಿ —ಮಿಯ್ಯಾಭಂದೊಭಂದೊ)

ಯಕ್ಷಿಣಿ — ಆಹಾ ನೀವು | ಕೇಳಿ ಕೇಳಿ | ಕರೆಯುವರೀಗ || ಮೊಡದ
ಮೇಲೀಗ ಕೂತು | ಬಾರೆಬೇಗ ನೀನೆಂದು | ಸಾರಿರಈಗ
ಮೊದಲೆನೀವು | ಬರುವೆನುಬೇಗ ನಾನು ||

ನಿಷ್ಕ್ರಾಂತಃ —ಯಕ್ಷಿಣಿ.

ಶಕ್ತಿಗಳು — ಬನ್ನಿ ಹೋಗೋಣ ಮತ್ತೆ ಬಂದು ಸಿಟ್ಟುಮಾಡ್ಯಾಳು*

---

* ರಾಗ.—ಜಂಜೋಟಿ, ಆದಿತಾಳ.

ಬನ್ನಿಬನ್ನಿಪೋಗುವ | ಕಾವಲ ಸೇರುವ ||ಪ|| ಬಾಸೀಯ ತಂದೀಗ |
ಗುಂಡನ್ನುಬಡ್ಡೀಗ | ಬಸ್ಸಿಯ ಸಾಮು | ಪಟ್ಟಾಗಿ ಬಟ್ಟವ ||೧||
ನಳ್ಳಿಯ ಮೂಳೆಯ| ಕೊಳ್ಳಿಯ ಕೊಟ್ಟೀಗ | ಗಟ್ಟಿಗ ಮಾಟವ |
ನೆಟ್ಟಗೆ ಮಾಡುವ ||೨|| ಪಾತ್ರಿವ್ಳಬಂದೀಗ | ಬಗ್ಗೆತ್ತಿಬಡಿಯುತ್ತ |
ಪನ್ನಿನ ಮೂಳೆಯ | ಮುರಿದಾಳು ಬಸ್ಸಿರಿ ||೩||

೬ನೇ ಸ್ಥಾನ. ಅರಮನೆಯಲ್ಲೊಂದು ಕೊಟ್ಟಡಿ.

ಪ್ರವೇಶ — ಕಳಿಂಗರಾಜ, ಉಪರಾಜರು.

ಕಳಿಂಗ — ನನ್ನ ಪೂರ್ವದ ಸಂಭಾಷಣೆಯಿಂದ ನಿಮಗೆ ಅನುಮಾನ ತಟ್ಟಿರುವದು. ಅದನ್ನೀಗ ಪರಿಷ್ಕಾರವಾಗಿ ವಿವರಿಸುವೆನು ಕೇಳಿ. ವಿಷಯವೇನೆಂದರೆ.—ಲೋಕವು ಕಪಟಾವಾಸದಲ್ಲಿ ವಿಶ್ರಮಿಸಿಕೊಳ್ಳುತ್ತಿರುವದು. ಕೃತಘ್ನನಾದ ವಿಜಯಧ್ವಜನ ಮರಣಕ್ಕಾಗಿ ದಯಾಳುವಾದ ವೀರಸೇನ ಪಶ್ಚಾತ್ತಾಪಪಟ್ಟ. ಅಯ್ಯೋ, ಇನ್ನೇತಕ್ಕೆ! ಅವನು ಕಾಲಾಧೀನನಾದ. ಧುರಧೀರನಾದ ಶೂರಸೇನ ಹೊತ್ತು ಮೀರಿ ಪ್ರಯಾಣಮಾಡಿದ. ಅವನನ್ನು ಅವನಮಗ ಅದ್ರಿ ಕೊಂದನೆಂದು ತಿಳಿಯಬೇಕು. ಕೊಲ್ಲದಿದ್ದರೆ ಅವನೇಕೆ ಓಡಿ ಹೋಗಿ ಘಾತಿರುವನು? ಹೊತ್ತು ಮೀರಿ ಜನರು ಪ್ರಯಾಣಮಾಡಬಾರದು. ಆದರೆ ಇವನ್ನೂ ತಿಳಿದುಕೊಳ್ಳದಂತ ಮಂಕುಗಳುಂಟೆ? ತಮ್ಮನೊಡನೆ ಪ್ರತಾಪರುದ್ರಪ್ರಭುವನು ಕರುಣಾಳುವಾದ ತಂದೆಯನ್ನು ಕೊಲ್ಲುವದುಂಟೆ? ಇದೊಂದದ್ಭುತವಲ್ಲವೆ? ಅದಕ್ಕಾಗಿ ವೀರಸೇನ ಹ್ಯಾಗೆ ವ್ಯಸನಪಟ್ಟ! ಪಾನಕ್ಕೆ ಗುಲಾಮರಾಗಿಯೂ, ನಿದ್ರೆಗೆ ತೊತ್ತಾಗಿಯೂ, ಇದ್ದ ಆ ಕಾವಲುಗಾರರನ್ನು ರಾಜಭಕ್ತಿಯಿಂದ ಕೋಪಾವಿಷ್ಟನಾದ ವೀರಸೇನನು ಹ್ಯಾಗೆ ಕೊಂದುಬಿಟ್ಟ! ಅದರಲ್ಲಿ ಯುಕ್ತಿ ಇಲ್ಲವೆ? ಜೀವಂತರಾಗವರಿದ್ದು ಅದನ್ನು ತಾವು ಮಾಡಿದವರಲ್ಲವೆಂದವರು ಹೇಳಿದ್ದರೆ, ಜನಕ್ಕೆ ಅನುಮಾನತೋರುತ್ತಿರಲಿಲ್ಲವೆ? ಅದೆಲ್ಲವನ್ನು ಕ್ರಮಪಡಿಸಿದ್ದುತ್ತಮವಾಗಲಿಲ್ಲವೆ? ವಿಜಯಧ್ವಜನ ಮಕ್ಕಳು ಸಿಕ್ಕಿದ್ದರೆ ಪಿತೃವಧೆಯು ಸುಖವನ್ನನುಭವಿಸುತ್ತಿದ್ದರು. ಅದ್ರಿಗೂ ಅದರ ಸುಖ ತೋರು

ತ್ತಿತ್ತು. ಬಳ್ಳೇದು ಅದು ಹ್ಯಾಗಾದರು ಇರಲಿ. ಖಂಡಿತವಾದ ಕೆಲವು ಮಾತನಾಡಿದ್ದರಿಂದಲೂ, ಆಶಾಧಿಪತಿಯು ಔತಣಕ್ಕೆ ಬಗದೆ ಹೋದ್ದರಿಂದಲೂ ಜಯಸಿಂಹ ಆಸ್ಥಾನಾಪರಾಧಿಯಾಗಿರುವನು. ಸ್ವಾಮಿ! ಈಗವನೆಲ್ಲಿರುವನು ನಿಮಗೆ ಗೊತ್ತುಂಟೆ?

ಉಪರಾಜ.– ಈ ಕ್ರೂರಾತ್ಮನಿಂದ ಪಿತ್ರಾರ್ಜಿತ ರಾಜ್ಯವನ್ನು ಕಳೆದುಕೊಂಡ ವಿಜಯಧ್ವಜನ ಮಕ್ಕಳು ಮಗಧದೇಶದಲ್ಲಿ ಆಶ್ರಿತರಾಗಿರುವರು. ದುರ್ದಶೆಯು ಸಂಕಟ ಅವರಿಗೆ ತಟ್ಟದಂತೆ ಮಗಧನು ಕರುಣವಿಟ್ಟು ಕಾಪಾಡುತ್ತಿರುವನು. ಅವರ ಸೋದರಮಾವನಾದ ಮಗಧ ಸೇನಾಪತಿ ಶೇಖರನನ್ನೂ ಮಗಧನನ್ನೂ ಅವರಿಗೆ ಸಹಾಯಮಾಡುವಂತೆ ಬೇಡಿಕೊಳ್ಳಲು ಜಯಸಿಂಹನಲ್ಲಿಗೆ ಹೋಗಿರುವನು. ಅವರ ಸಹಾಯದಿಂದಲೂ, ಮೇಲಿರತಕ್ಕ ಲೋಕನಾಯಕನ ಕಟಾಕ್ಷದಿಂದಲೂ, ನಮ್ಮ ದೇಶದಕಂಟಕವು ನಿವಾರಣೆಯಾಗಿ, ಮುಂದೆ ರಾತ್ರಿಯಲ್ಲಿ ನಿರಾತಂಕವಾದ ನಿದ್ರೆಯೂ, ನಿರ್ಭಯವಾದ ಔತಣ ಉಡುಗೊರೆಗಳೂ, ಮನಃಪೂರ್ವಕವಾದ ರಾಜನಿಷ್ಠೆಯೂ ಯೋಗ್ಯತಾನುಸಾರ ರಾಜಮರ್ಯಾದೆಯೂ, ನಮ್ಮೋಳ್ಳೆ ಕ್ಷೇತ್ರದಲ್ಲಿರಲಿ. ಇದೆಲ್ಲವನ್ನು ಕೇಳಿ ವೀರಸೇನನು ಕೋಪದಿಂದ ಯುದ್ಧಸನ್ನಾಹ ಮಾಡುತ್ತಿರುವನು.

ಕಳಿಂಗ –ಅವನು ಜಯಸಿಂಹನ ಬಳಿಗೆ ಹೇಳಿಕಳುಹಿಸಿದ್ದನೆ?

ಉಪರಾಜ – ಹೇಳಿಕಳುಹಿಸಿದ್ದ. ಜಯಸಿಂಹ ಬರುವದಿಲ್ಲವೆಂದು ಖಂಡಿತವಾಗಿ ಹೇಳಿದ್ದರಿಂದ ಹೋಗಿದ್ದ ಚರನು ಇದರ ಫಲವನ್ನು ಮುಂದೆ ನೀನು ಅನುಭವಿಸತ್ತಿಯೆಂದು ಮುಖವನ್ನು ಗಂಟುಹಾಕಿಕೊಂಡು ಹೊರಟುಹೋದ.

ಕಳಿಂಗ —ಇನ್ನಾದರು ಅವನು ಎಚ್ಚರವಾಗಿರಲಿ.

ಕಂದ ‖ ಬೇಡುವೆ ನಿಮ್ಮಂ ಕೈಗಳ ।
ಕೂಡಿಸಿ ಖೇಚರಪತಿಗಳೆ ನೋಡಿರಿ ನಮ್ಮಾ ‖
ನಾಡೊಳು ಮಗಧನದಂಡನು ।
ಜೋಡಿಸು ಬಾರೆನುತ ಪೇಳಿ ಜಯಸಿಂಹಗೆ ನೀವ್ ‖

ತರಲವ ಸುಖವಂ ನಮ್ಮಾ ।
ತಿರೆಯೊಳಗೀಗವನರಿತವರಂ ನಾನರಿಯೆಂ ‖
ತ್ವರಿತದಿಬಂದವ ಜೈಸಲಿ ।
ಧರೆಯುನ್ನೀಗಳ್ಪ್ರತಾಪರುದ್ರಂಗವನುಂ ‖೪೯‖

ನಿಷ್ಕ್ರಾಂತಾಃ ಸರ್ವೇ.

೪ನೇ ಅಂಕ.

೧ನೇ ಸ್ಥಾನ.—ಕತ್ತಲೆಗವಿ, ಒಂದು ಬಾನೆಕೆಳಗುರಿ ಹಾಕಿರುವದು

ಪ್ರವೇಶ.—ಮೂರುಶಕ್ತಿಗಳು.

ರಗಳೆ ||

೧ನೇ ಶಕ್ತಿ — ಮಾಳಬೆಕ್ಕು ಮೇಲಿದೆ ಮ್ಯಾವ್‌ಮ್ಯಾವ್ ಎನ್ನುತಲಿದೆ |
ಕೇಳಿ ಕೇಳಿ ಬೆಕ್ಕಿನ ಮೂರು ತಡವೆ ಕೂಗನು|
೨ನೇ ಶಕ್ತಿ.—ಕೇಳಿ ಕೇಳಿ ಗುಟ್ರ್ಯು ಹಾಕಿತೀಗ ಹಂದಿಯು |
೩ನೇ ಶಕ್ತಿ.—ಏಳಿ ಏಳಿ ಹೊತ್ತನು ಮಾಡದಿನ್ನು ಬೇಗನೆ ||೧||

೧ನೇ ಶಕ್ತಿ — ಉರಿಯಂ ಚಾಚುತ ಮರಳಿಸಿ ಬಾನೆಯ |
ಕತ್ತೆಯ ಕರುಳಂ ಕೊತ್ತಿಯ ಕುರುಳಂ |
ಮುತ್ತಿನ ಚಿಪ್ಪೊಳ್ ಕೆತ್ತುವನಾವುಂ |
ಬತ್ತಿಸಿ ಕಲ್ಲಿಗದೊತ್ತಂ ಕೊಡುತಂ |
ತಂತ್ರದ ಬಾನೆಗೆ ಯಂತ್ರವ ಕಟ್ಟುವ |
ಮುತ್ತುತ ಬಾನೆಯ ಸುತ್ತುತ ಲೆತ್ತಲ್ |
ತುತ್ತನು ಮಾಡುವ ಕತ್ತಲೆ ಮುತ್ತಲ್ |
ಶಕ್ತಿಯ ಭುಕ್ತಿಗೆ ಭಕ್ತಿಯೊಳೀಯಲ್ ||೨||

ಎಲ್ಲರು.— ನೂಕಿ ನೂಕಿ ಕೊಳ್ಳಿಯು ಬಾನೆಕೆಳಗೆ ಕೊಳ್ಳಿಯು |
ಹಾಕಿ ಹಾಕಿ ಸೌದೆಯು ಮಾಡುತೀಗ ಕೊಳ್ಳಿಯು |

ಉಕ್ಕಿಸಿನ್ನು ಬಾನೆಯು ಮತ್ತೆ ಚಾಚಿ ಕೊಳ್ಳಯು ।
ಭಕ್ತಿಯಿಂದ ಶಕ್ತಿಯು ಭುಕ್ತಿಗೀಯ್ಯೆ ಕೊಳ್ಳಯು ॥೩॥

೩ನೇ ಶಕ್ತಿ.— ಮೊಳ್ಳಯು ಮಿನಂ ಸೊಳ್ಳಯು ತಂಡವ ।
ಕಳ್ಳಯು ಪಾಲೊಳ್ ಕುದಿಸಿರಿ ಭರದೊಳ್ ।
ತೋಳದ ತೊಳ್ಳಯು ನಳ್ಳಯು ಮೂಳೆಯು ।
ಸೀಳದ ಸರ್ಪದ ನಾಲಿಗೆ ತುಪ್ಪದಿ ।
ಕರಿಯುವ ನಾವುಂ ಗರಿಗರಿಯೆನುವ್ರೋಲ್ ।
ಸದೆಯುವ ಪಿಡಿಯುತ ಮದಗಜ ದಂಡಂ ।
ನೆರೆತಿಹ ಕೂದಲ ನರಿಮುಗಿಯಿಂದೀ ।
ಗಾನೆಯು ಕುದಿಸುವ ಬಾನೆಯೊಳಾನಿಸಿ ॥೪॥

ಎಲ್ಲರು — ನೂಕಿ ನೂಕಿ ಕೊಳ್ಳಯು ಬಾನಿಕೆಳಗೆ ಕೊಳ್ಳಯು ।
ಹಾಕಿ ಹಾಕಿ ಸೌದೆಯು ಮಾಡುತೀಗ ಕೊಳ್ಳಯು ।
ಉಕ್ಕಿಸಿನ್ನು ಬಾನೆಯು ಮತ್ತೆ ಚಾಚಿ ಕೊಳ್ಳಯು ।
ಭಕ್ತಿಯಿಂದ ಶಕ್ತಿಯು ಭುಕ್ತಿಗೀಯ್ಯೆ ಕೊಳ್ಳಯು ॥

೪ನೇ ಶಕ್ತಿ.— ಲಂಗದ ಬೀಬಿಯು ಭಂಗಿಯು ಸಾಬಿಯು ।
ಕೊಂಗರದಂಡನು ಮಂಗನಹಿಂಡನು ।
ಅಂಗಡಿಬೀದಿಯು ಕೋಮಟಿಶೆಟ್ಟಿಯು ।
ಸಿಂಗರದಿಂದಿಹ ಗಂಧದರಾಯನ ।
ಹಂದಿಯುಮುಸುಡಿಯು ವಂಚನೆಮಂತ್ರಿಯು ।
ಸಂದಿಸಿ ಬಾಗಲ ಸಂದಿಲಿ ಕೊಲ್ಲುತ ।
ಗಂದಿಗೆಯಂಗಡಿ ಸರಕಿನಸಂಗಡ ।
ಬೌದ್ಧನಬುರುಡೆಯು ಜೈನನಜಿಹ್ವೆಯು ।

ಹಸುವಿನಕೆಚ್ಚಲೊಳಸಗನ ಹೊಕ್ಕಳು ।
ಬಸುರಿಯುಪೆಣವನು ಪಾವಿನಪೆಡೆಯನು ।
ಎಕ್ಕದಕುಸುಮದ ಲಕ್ಕಿಯುಬೇರಿನ ।
ರಸವನು ಬಾನೆಗೆ ಬಸಿಯುತ ಕುದಿಸುವ ॥೫॥

ಎಲ್ಲರು — ನೂಕಿ ನೂಕಿ ಕೊಳ್ಳಯ ಬಾನೆ ಕೆಳಗೆ ಕೊಳ್ಳಯ ।
ಹಾಕಿ ಹಾಕಿ ಸೌದೆಯ ಮಾಡುತೀಗ ಕೊಳ್ಳಯ ।
ಉಕ್ಕಿಸಿನ್ನು ಬಾನೆಯ ಮತ್ತೆ ಚಾಚಿ ಕೊಳ್ಳಯ।
ಭಕ್ತಿಯಿಂದ ಶಕ್ತಿಯ ಭುಕ್ತಿಗೀಯ್ಯೆ ಕೊಳ್ಳಯ ।
ಒನೇ ಶಕ್ತಿ — ಸಾಕು ಸಾಕು ನಿಲ್ಲಿಸಿ ಕೊಳ್ಳಯಬೇಗಾರಿಸಿ ।
ಉಕ್ಕುತಿಹುದು ಬಾನೆಯು ದಕ್ಕದಿನ್ನು ಬಾನೆಯು ।
ಪಕ್ಕದಿಂದ ರಕ್ತವ ಥಕ್ಕನೀಗ ಸುರಿಯುವ ।
ಮಾಡುವಿನ್ನು ತಣ್ಣಗೆ ನೀಡಲಿದನು ಶಕ್ತಿಗೆ ॥೬॥

(ಶಕ್ತಿಗಳೆಲ್ಲರು ಕುಣಿಯುವರು.*)

ಪ್ರವೇಶ.—ಯಕ್ಷಿಣಿ.

ಯಕ್ಷಿಣಿ.—ತ್ರಿಪದೋನ್ನತಿ ॥ಸಂದುಪ್ರದಿನ್ನಿದು ನಿಲ್ಲಿಸಿನೀವ್ ।
ಬಂದುದ ನಿಮ್ಮೊಳು ಹಂಚುವೆನಾಂ ।
ಮುಂದಿನಮಂತ್ರವ ಬಾನೆಯುಸುತ್ತುತ ।
ಲೆಂದಿನರೀತಿಯೆ ಪೇಳರಿ ನೀವ್ ॥೭॥

---

* ರಾಗ.—ಬೆಹಾಗ್, ಏಕತಾಳ.

ಉಕ್ಕುತ್ತಲಿಹುದು ಬಾನಿ । ಸೈ ಸೈ ಸೈ ॥ಪ॥ ಬಾನಿಯ ಸುತ್ತಲು ನರ್ತಿಸಿ ನೀವು॥೧॥ ಸಾರ್ಥಕ ವಾಯಿತು ಮಾಡಿದ ಕಷ್ಟ ॥೨॥ ಯಕ್ಷಿಣಿ ನಮ್ಮನು ಮೆಚ್ಚುವಳೆಂದು ॥೩॥ ಶಕ್ತಿಗೆ ಕೊತ್ತಿಯ ಆಹುತಿ ನೀಡುವ ॥೪॥

ಸುಂದರವಾಗಿಹ ರಂಭೆಯುನುಂ ।
ಗಂಧವ ಬೀರುವ ಮೇನಕೆಯುಂ ।
ಬಂಧುರದಿಂದಲೆ ಮಿರಿಸಿ ತಾಳಕೆ ।
ನಿಂದಲಿನಿಲ್ಲದೆ ನರ್ತಿಸಿ ನೀವ್ ॥೮॥

(ಶಕ್ತಿಗಳು ಕುಣಿಯುವವು.*)

ರಗಳೆ ॥

೨ನೇ ಶಕ್ತಿ.— ನೋಡಿ ನೋಡಿ ಬೇಗನೆ ಮಾಡದೀಗ ತಡವನೆ ।
ದೊಡ್ಡಬೆಟ್ಟು ಕಡಿವುದು ಡಡ್ಡದಡ್ಡ ತೆಳ್ಳುವ ।
ಕೇಡ ಕೇಳಬಾಗಲ ನೋಡಿ ಯಾರೊ ತೆಳ್ಳುವ ।
ದಂಡಿ ತೆರದು ಬಾಗಲ ಬಿಚ್ಚಿ ಬೇಗ ಬಾಗಲ ॥೯॥

ಪ್ರವೇಶ — ವೀರಸೇನ.

ವೀರಸೇನ.—ಕತ್ತಲೆಮನೆ ಮಾರಿಯರೆ! ಇದೇನು ನೀವು ಮಾಡುವ ಕೆಲಸ.

ಶಕ್ತಿಗಳು —ಇದೊಂದು ಹೆಸರರಿಯದ ಹರಿಬ.

ವೀರಸೇನ.—ಒಳ್ಳೇದು.

ಸೀಸಪದ್ಯ ॥ ಇಂದೊಂದು ಮಾತನ್ನು ಕೇಳುವೆನು ನಿಮ್ಮನ್ನು
ನೀವದನು ತಿಳಿದೀಗ ಹೇಳಿ ನನಗೆ । ಕಂದಿದರು ಮಾರ್ತಾಂಡ
ನೀಗಿದರೊಳುಂಸರಿಯೆ ಭೂಚಕ್ರವನ್ನೀಗ ಸುಡಲು ಸರಿಯೆ ॥

---

* ಹಿಂದುಸ್ತಾನಿನೋಟು, ಏಕತಾಳ. ಧಾಟಿ — ಹವಾರಬಾಗವೆ— ತಂಗಿಯೆ ಯಕ್ಷಿಣಿ ಮೆಚ್ಚಿಹ ಇಂದು ॥ಪ॥ ನಿದಾನಮಾಡದೆ ಸುತ್ತಲುನರ್ತಿಸಿ ತಾಳವ ತಟ್ಟಿ ತಟ್ಟಿ ಬೇಗೀಗನೀವು ॥೧॥ ಯಕ್ಷಿಣಿಮೆಚ್ಚಲು ತಟ್ಟುತ ತಾಳವ ಸುತ್ತಲು ತಕ್ಕತಕ್ಕ ನರ್ತಿಸುತೀಗ॥೨॥ ಉಕ್ಕುವಬಾನೆಗೆ ಮೆಚ್ಚಿತು ಶಕ್ತಿಯು ತಟ್ಟಿರಿ ಬೇಗ ಬೇಗ ತಾಳವನೀಗ ॥೩॥ §

ಮುಂದಿರುವ ಬಾನೆಯೊಳು ಕಡಲನ್ನು ಕುದಿಸೀಗ ನೀವದನು
ತಿಳಿದರುಂ ಸರಿಯು ಕೇಳಿ । ಸಂದೇಹ ಪಡಬೇಡಿರರಿತಿದನು ನನ
ಗೀಗನೀವೆಲ್ಲ ಸರಿಯಾಗಿ ಪೇಳಬೇಗ ॥೧೦॥

೧ನೆ ಶಕ್ತಿ.—ಅದೇಂ ?

೨ನೇ ಶಕ್ತಿ.— ಅಪ್ಪಣೆಯುಂ ಕೊಡು.

೩ನೇ ಶಕ್ತಿ.— ಉತ್ತರವನೀವೇಂ.

೧ನೇ ಶಕ್ತಿ.—ನಿಮ್ಮಿಂದಿದಂ ತಿಳಿಪೆಯೊ ನಮ್ಮ ಯಜಮಾನರಿಂದಿದಂ ತಿಳಿಪೆಯೊ ?

ವೀರಸೇನ.—ಅವರೆಲ್ಲಿರುವರು ಕರೆಯಿರಿ.

೧ನೇ ಶಕ್ತಿ.— ತನ್ನೊಂಭತ್ತು ಮರಿಗಳಂ ಮೊಲ್ದಪಂದಿರಕ್ತದರ್ಘ್ಯವನ್ನೀ. ಶೂಲದಲ್ಲೊಣಗಿದವನ ನೆಣವಂ ಚೆಂಕಿಗಾಹುತಿಯನ್ನೀ.

ಶಕ್ತಿಗಳು.—ರಗಳೆ॥ ಚಿಕ್ಕಪುಟ್ಟದೊಡ್ಡದೆಲ್ಲ ಬೆಕ್ಕುಜನ್ಮಬಿಟ್ಟುಬೇಗ।
ತೊಟ್ಟು ನಿಮ್ಮ ಗಾತ್ರವನ್ನು ನೆಟ್ಟಗೀಗ ಬಂದುಬೇಗ
ಘಕ್ಕನೀಗಕೇಳದುದಕೆ ಘಕ್ಕನೀಗತೋರುವದನು ।
ತಕ್ಕಮಟ್ಟಿಗೆಲ್ಲವನ್ನು ಸಿಕ್ಕುಸಿಲ್ಲದಂತೆ ಪೇಳಿ ॥೧೧॥‡

(ತೇಜಸ್ಸಿನಿಂದಲು ಗುಡುಗಿನಿಂದಲು ಧ್ವನಿಯಿಂದ ಆಯುಧಗಳನ್ನು ಧರಿಸಿರುವ ಒಂದು ಸಿರಸ್ಸು ಮೇಲಕ್ಕೇಳುವದು.)

‡ ಇಂಗ್ಲೀಷ್‌ನೋಟು, ಚಾಪುತಾಳ, ಧಾಟಿ. ಸಿಸ್ಟರ್ ಆರ್ಙ ಷಿವಾಕ್ಸ ಲೈಕದಿಸ ಶಕ್ತಿನೀಂಬ । ಬೇಗ ಬಾ ಬಾ । ಛಟ್ ಪಟ್ ಛಟಪಟ್ ಛಟ್ ಪಟ್ ಛಟಪಟ್ ॥ ಭಕ್ತನನ್ನುನೋಡಲೀಗಲಂ । ಮಮಂಮಮಮಾ । ರಂ । ಮಂ । ಮಾ ॥

ಸಿರಸ್ಸು.—ವೀರಸೇನ ! ವೀರಸೇನ !! ವೀರಸೇನ !!!

ಅಚ್ಚುತ ॥ ಅರಿತಿರು ನೀನಿದ ಪೇಳ್ವೆನು ಕೇಳ್ ।
ವೈರಿಯುಪ್ರೋಲ್ಲಂಘ್ಯಯುಸಿಂಹನ ಕಾಣ್ ॥
ಮರೆಯದೆ ನೀನಿರು ಪೇಳಿದುದಂ ।
ತೀರಿತು ಕಾರ್ಯವು ಸಾರುವೆ ನಾಂ ॥೧೨॥(ಬಾನೆಗಿಳಿಯುವದು)

ವೀರಸೇನ —ನೀನು ಯಾರಾದರೂ ಸರಿಯೆ, ನನ್ನಂ ಎಚ್ಚರಿಸಿದ್ದಕ್ಕೆ ವಂದಿಸುವೆನು. ನನಗೆ ಯಾರಲ್ಲಿ ಭಯವಿತ್ತೊ ಅವನನ್ನೇ ಸರಿಯಾಗಿ ಸೂಚಿಸಿದೆ. ಆದರೆ ಇನ್ನೊಂದು ವಿಷಯವಿರುವದು.
೧ನೇ ಶಕ್ತಿ —ನಿನ್ನಾಜ್ಞೆಯನ್ನದು ಲಕ್ಷಿಸುವದಿಲ್ಲ. ಇಗೋ ಮತ್ತೊಂದಿರುವದು. ಅದಕಿಂತಲು ಇದು ಅತಿಶಯವಾದದ್ದು.

(ಮೊದಲಿನಂತೆ ಬಾನೆಯಿಂದ ರಕ್ತಮಯವಾದ ಒಂದು ಸಿರಸ್ಸೇಳುವದು.)

ಸಿರಸ್ಸು —ವೀರಸೇನ ! ವೀರಸೇನ !! ವೀರಸೇನ !!!

ವೀರ.—ಕರ್ಣತ್ರಯವಿದ್ದರೂ ಸಾಲದು.

ಸಿರಸ್ಸು.—ಅಚ್ಚುತ ॥ ದೃಢತರಶೌರ್ಯದಿ ಬಾಳ್ವುದು ನೀಂ ।
ಕಾಡುವಭೀತಿಯ ನೋಡಿಸು ನೀಂ ॥
ಮಡದಿಯು ಗರ್ಭದಿ ಪುಟ್ಟಿದವಂ ।
ಕೇಡನುಮಾಡನು ವೀರಗೆಕೇಳ್ ॥೧೩॥ (ಬಾನೆಗಿಳಿಯುವದು)

ವೀರಸೇನ.—ಕಂದ ॥ ಇರಲಿನ್ನುಂ ಬಾಳುತೆಯಿಾ ।
ಧರೆಯುಲಿ ಜಯಸಿಂಹನವನ ಭಯವೆನಗಿಲ್ಲಂ ॥
ಮರೆತವನನ್ನೀಗಿದರಿಂ ।
ದಿರಲಾಗದು ಭದ್ರಪಡಿಸದೀ ಭರವಸವಂ ॥೧೪॥

ಮುಂದಿವನಿಂದಂ ಕೇಡೆಂ ।
ದೆಂದಿಗು ನನಗಾಗದೆಂಬ ಪತ್ರವ ವಿಧಿಯಿಂ ॥
ಪೊಂದುವೆ ನಿವನನ್ನೀಗಳ್ ।
ಕೊಂದೊಡೆ ನಾನಿನ್ನು ಸುಮ್ಮನಿರೆನದರಿಂದಂ ॥೧೫॥

(ಮೊದಲಿನಂತೆ ಬಾನಿಯಿಂದ ಕಿರೀಟವನ್ನು ಧರಿಸಿರುವ ಬಂದು ಸಿರಸ್ಸು ಮರದ ಕೊನೆಯೊಡನೆ ಮೇಲಕ್ಕೇಳುವದು.)

ಆಹಾ ! ಇದೇನು.—

ಕಂದ ॥ ಏಳುತಲಿರ್ಪುದು ಭೂಮಿಯು ।
ಬಾಳನ್ನಾಳುವ ತರುಣನತೆರದಿಂ ಸಿರದೋಳ್ ॥
ಬಾಲನುಧರಿಸಿ ಕಿರೀಟವ ।
ಸೋಲಿಪನಿವನೆನ್ನ ಮನವನುರೆ ತಾನೀಗಳ್ ॥೧೬॥

ಶತ್ರುಗಳು.—ಅದು ಹೇಳುವದನ್ನು ಮಾತ್ರ ಕೇಳು. ಅದನ್ನು ಮಾತನಾಡಿಸಬೇಡ.

ಸಿರಸ್ಸು.—ಅಚ್ಚುತ ॥ ನರರೊಳು ಸಿಂಹವಪೋಲುತ ನೀಂ ।
ಧೈರ್ಯವತಾಳರು ಗರ್ವದೊಳುಂ ।
ಧರೆಯೊಳಗಿಲ್ಲವು ನೋಡಲು ಕೇಳ್ ।
ವೀರನಗೆಲ್ಲುವ ಶೂರರುಗಳ್ ॥೧೭॥

ನಡೆಯುತ ವಲ್ಲಭ ಪಟ್ಟಣವಂ ।
ಕಾಡಿನವೃಕ್ಷವು ಮುತ್ತದಿರಲ್ ।
ಕೆಡಕಿಗೆ ಸಿಕ್ಕನು ವೀರನು ಕೇಳ್ ।
ಖಂಡಿತನೆಂಬಿದ ಪೋಗುವೆ ನಾಂ ॥೧೮॥

(ಬಾನೆಗಿಳಿಯುವದು.)

ವೀರಸೇನ.—ಚನ್ನಾಗಿ ಹೇಳಿತು. ಸುವಾರ್ತೆಯೇ ಸರಿ. ಇದೆಂದಿಗಾ ಗುವದು.

ಕಂದ|| ಮರದಂಡಂ ನಡಸುತ್ತಂ |
ಪುರವಂ ಸಾಧಿಪ ನನರ್ಕ್ಷಳಹರೆ ಧರಣಿಯೊಳ್ ||
ಅರಿಗಳರಣ್ಯಯಾವೆನಗೇಂ |
ತಿರೆಯೊಳ್ಬೇರ್ಬಿಟ್ಟು ನಡೆಯುಲವ್ಮವೆ ಮರಗಳ್ ||೧೯||

ಧರೆಯನ್ನಾಳುತ ಸುಖದಿಂ |
ದಿರುವಂ ಕಡುವೀರಸೇನನೆಂವಂತಾಯ್ತೂ ||
ಗರಿಗಳ್ ನಡೆಸುತ ಮರವಂ |
ಬರುವದು ನೀವ್ವೀರಸೇನನಿರುವೆಡೆಗಿನ್ನುಂ ||೨೦||

ಕಳೆದೆನ್ನಯ ಕಾಲವ ನಾ |
ನಳವೆನು ಮುಂದೆಲ್ಲರಂತೆಯೀಧರೆಯೆಡೆಯೊಳ್ ||
ಸಿಲುಕುತ ವೈರಿಯ ಕಯ್ಯೆಗೆ |
ಬಳಲ್ದು ಬಸವಳದು ವೀರಸೇನಿನ್ನಳಯಂ ||೨೧||

ಆದರೆ ಮತ್ತೊಂದು ವಿಷಯವು ನನ್ನ ಹೃದಯವನ್ನು ಬಾಧಿಸುತ್ತಿರುವದು. ನಿಮ್ಮ ಈ ವಿದ್ಯದಿಂದ ನೀವದನ್ನು ತಿಳದು ಹೇಳಬಲ್ಲವರಾದರೆ ಹೇಳಿ. ಶೂರಸೇನನ ಸಂತಾನಕ್ಕೆ ಈ ರಾಜ್ಯ ಯಾವಾಗಲಾದರು ಲಭಿಸುವದೆ?

ಶಕ್ತಿಗಳು.—ಇದುವರಿಗೆ ತಿಳದದ್ದಕ್ಕಿಂತಲು ಹೆಚ್ಚಾಗಿ ತಿಳಯಅಪೇಕ್ಷಿಸಬೇಡ.

ವೀರಸೇನ.—ನಾನಿದನ್ನು ಖಂಡಿತವಾಗಿ ತಿಳಯಬೇಕು. ನೀವಿದನ್ನು

ಹೇಳದಿದ್ದರೆ ಸದಾ ನರಕವಾಸಿಗಳಾಗಿ. ಅದೇಕೆ ಆ ಬಾನೆ ಕೆಳಕ್ಕೆ ಳಯುತ್ತಿರುವದು. ಈ ಶಬ್ದವೇನು. (ಗುಡುಗುವದು)

೧ ನೇ ಶಕ್ತಿ.— ತೋರಿಸಿ.

೨ ನೇ ಶಕ್ತಿ.— ತೋರಿಸಿ.

೩ ನೇ ಶಕ್ತಿ.— ತೋರಿಸಿ.

ಶಕ್ತಿಗಳು.— ಚಿತ್ರಪದಂ || ತೋರಿಸಿ ನಿಮ್ಮಯ ಭಾವವನೀವ್ |
ಹೋರುತಲಿರ್ಪನು ಛಾಯೆಯೊಲುಂ ||
ವೀರಗೆ ಖೇದವ ನೀಡುತ ನೀವ್ |
ಸಾರಿರಿ ಮುಂಗಡೆ ಬೊಗದೊಳಗಂ ||೨೨||

(ನೆರಳಿನಂತೆ, ಎಂಟು ಜನ ದೊರೆಗಳು ಹೋಗುತ್ತಿರುವರು. ಕಡೆಯವನ ಕೈಲಿ ಜಪಸರವಿರುವದು. ಅವರಂತೆಯೆ ಅವರ ಹಿಂದೆ ಶೂರಸೇನನ ನೆರಳು ಹೋಗುತ್ತಿರುವದು.)

ವೀರಸೇನ —ಕಂದ || ಅಹಹ ಇದೇನೀಯಚ್ಚರಿ |
ಯಿಹನಿವನುಂ ಶೂರಸೇನನವೊಲೆಲೆ ನೀನಿ ||
ಟ್ಟಿಹುದೇಂ ಕಿರೀಟವಲ್ಲವೆ |
ಅಹಹ ಸಹಿಸಲಾಗದು ತೆಗೆತೆಗೆಯಿನ್ನದನೀಂ ||

ಬಂದಂ ಕಿರೀಟ ಮುತ್ತೋ |
ರ್ವಂದಹಿಸುತ್ತಿರ್ಪವೆನ್ನ ನಯನಂಗಳ್ ಮ ||
ತ್ತೊಂದೀಗಳ ಹಹಹಾ ನಾ |
ಲ್ಕೊಂದ್ಯೈದಾರೇಳಯ್ತು ನಿಲ್ಲದಿರ್ಪುದಿದಕಟಾ ||
ತೋರಿಸಿದರೇಕಿದ ನನಗೆ |
ಮಾರಿಯರೆ ಕಡಿದಹಬೇನೆಯಾಗಿಹುದಿದರಿಂ |

ಸಾರುತಿಹನೇಳನೆಯುವಂ ।
ತೋರುವ ಮತ್ತೋರ್ವ ಕೈಲಿ ಜಪಮಾಲಿಕೆಯಂ॥

ಸರವಂತಿರುವರುಂ ಕಡೆಸಾ ।
ರರಹಹಹಾ ಶೂರಸೇನನು ನಗುತ್ತೀಗಳ್ ॥
ಕರದಿಂ ತೋರ್ಪರ್ಗಂ ನೋಡಿವ ।
ರರೆನುತ ನಾನೆಂತು ನೋಳ್ಪೆನವನೀ ಸಿರಿಯಂ ॥

(ಕಣ್ಣು ಮುಚ್ಚಿಕೊಂಡು ನಿಲ್ಲುವನು)

ಶಕ್ತಿಗಳು.—ರಗಳೆ ॥ ವಲ್ಲಭೇಶ ಬಲ್ಲಿದಾಳು ಕಲ್ಲಿನಂತೆ ನಿಲ್ಲುತೀಗ।
ಬಿಕ್ಕಿ ಬಿಕ್ಕಿ ದುಕ್ಖಪಡುವನಕ್ಕನೋಡೆ ಗಕ್ಕನೇಳೆ ।
ಮಿಕ್ಕುದನ್ನು ಬಿಟ್ಟುನಾವು ಥಕ್ಕಥಕ್ಕ ಥಕ್ಕನೆನುತ ।
ಸುತ್ತುತಿವನ ಸುತ್ತಕುಣಿದು ಮತ್ತೆಮನವನೆತ್ತುವೇಳೆ॥

(ಶಕ್ತಿಗಳು ಕುಣಿದು ಮಾಯವಾಗುವರು.)

ವೀರಸೇನ.—ಇವರೆಲ್ಲಿ ಹೋದರು ? ಈ ಹಾಳುಗಳಿಗೆ ಹಾಳಾಗಿ ಹೋಗಲಿ. ಹೊರಗೆ ಬಂದಿರುವರ್ಯ್ಯಾರು ?

ಪ್ರವೇಶ —ಕಳಿಂಗರಾಯ.

ಕಳಿಂಗ.—ಜೆಯ್ಯಾ ! ಅಪ್ಪಣೆಯೇನಾಗುವದು ?

ವೀರಸೇನ.—ನೀನು ಮಂತ್ರಶಕ್ತಿಗಳನ್ನು ಕಂಡೆಯಾ ?

ಕಳಿಂಗ.—ಜೆಯ್ಯಾ ! ಇಲ್ಲ.

ವೀರಸೇನ.—ಅವರ ವಾಸಸ್ಥಾನ ನರಕವಾಗಲಿ. ಅವರಲ್ಲಿ ನಂಬಿಕೆಯನ್ನಿಡತಕ್ಕವರೆಲ್ಲರೂ ನರಕವಾಸಿಗಳಾಗಲಿ. ಕುದುರೆಗಳ ಕಾಲು ಶಬ್ದದಂತಾಯಿತು. ಯಾರು ಬಂಧಿರುವರು ?

ಕಳಿಂಗ.–ಜೆಯ್ಯಾ! ಮೂರು ನಾಲ್ಕು ಜನ ವಾಹಕರು ಬಂದರು. ಜಯಸಿಂಹ ಮಗಧದೇಶಕ್ಕೆ ಓಡಿಹೋದನೆಂಬ ವರ್ತಮಾನವನ್ನು ವರು ತಂದಿರುವರು.

ವೀರಸೇನ –ಕಂದ ॥ ಕೆಡಿಸಿಹುದೀಗಳ್ಕಾಲವು ।

ಕಡಿದಹಕಜ್ಜವ ನವನಿಗೆ ಸೂಚಿಸಿ ಮೊದಲೀ ॥

ಪ್ಪೊಡವಿಯ ಬಿಡನವನೀಗಳ್ ।

ಕೆಡಕಿನ ಬುದ್ಧಿಯಿವನೊಡಲಲಂಕುರಿಸದಿರಲ್ ॥೨೪

ಇಂದಿನವೊದಲುಂ ಮನವಾ ।

ಡೆಂದುದನು ಮೊದಲೊಳುಮಾಡದೀಕ್ಕೈಗಳ್ ಮ ॥

ತ್ತೊಂದನ್ನೊಂದುಂ ತಡವಾ ।

ಡಿಂದಿನವ್ರೋಲ್ಮೋಸಪ್ರೋಗವಿನ್ನೀ ಧರೆಯೊಳ್ ॥

ನನ್ನ ಈ ಉದ್ದೇಶ ಸಾರ್ಥಕ್ಯಕ್ಕಾಗಿ ಜಯಸಿಂಹನ ಪುಗವನ್ನು ರಹಸ್ಯವಾಗಿ ಸಾಧಿಸಿ, ಅವನ ದೇಶಕೋಶಗಳನ್ನು ಸೂರೆಗೈದು, ಅವನ ಪತ್ನಿಪುತ್ರರು ಮತ್ತವನಿಗೆ ತಿಲೋದಕವನ್ನು ಕಾಣಿಸುವ ತೊತ್ತುಗಳೆಲ್ಲರನ್ನೂ ಕತ್ತಿಯಬಾಯ್ಗುತ್ತು ಮಾಡುವೆನು. ಈಗ ಬಂದವರನ್ನು ಕರದುಕೊಂಡು ಬಾ.

ನಿಷ್ಕ್ರಾಂತಃ.–ಕಳಿಂಗ.

ಕಂದ ॥ ಮುಳಸಿನ ನನ್ನುರಿ ತಗ್ಗದೆ ।

ಬಳಸುತಮನವಂ ಸುಡುತಿರುವೀಗಿದವಾಳ್ವೆಂ ॥

ಚಳಕದೊಳಗಿದ ಮಾಡದೆ ।

ಗಳಹುತ ನಾನಿರೆ ಗಳಗೆಯು ಬೊಗಳುವನಾಯೊಲ್ ।

ನಿಷ್ಕ್ರಾಂತಃ.

೨ನೇ ಸ್ಥಾನ.

ಜಯಸಿಂಹನ ಕೋಟೆಯಲ್ಲಿ, ಒಂದು ಕೊಟ್ಟಡಿ

ಪ್ರವೇಶ.—ಜಯಸಿಂಹನಪತ್ನಿ, ಅವನಪುತ್ರ, ನಂದರಾಜ.

ಪತ್ನಿ.—ದೇಶಭ್ರಷ್ಟರಂತೆ ಓಡಿಹೋಗಲೇನುತಪ್ಪುಮಾಡಿದ್ದರು ?

ನಂದರಾಜ —ತಂಗಿ ! ತಾಳ್ಮೆತೆಗೆದುಕೊ.

ಪತ್ನಿ.—ಅವರಲ್ಲಿದು ಕೊಂಚವೂ ಇಲ್ಲ. ಓಡಿಹೋದದ್ದು ಹುಚ್ಚೇ ಸರಿ. ಆಚರಣೆಯಲ್ಲಿ ನಾವು ಸರಿಯಾಗಿದ್ದರೂ ; ಭಯದಲ್ಲಿ ರಾಜ ದ್ರೋಹಿಗಳಾಗಿರುವೆವು.

ನಂದರಾಜ —ನಿನ್ನ ಪತಿಯಾದ ಜಯಸಿಂಹ ಓಡಿಹೋದದ್ದು ಭಯ ದಿಂದಲೋ, ಬುದ್ಧಿವಂತಿಕೆಯಿಂದಲೋ ನಿನಗೆ ಗೊತ್ತಿಲ್ಲ.

ಪತ್ನಿ —ಬುದ್ಧಿವಂತಿಕೆಯೊ ? ತಾನಿರದೆ ಓಡಿಹೋಗಬೇಕಾದ ಸ್ಥಳ ದಲ್ಲಿ ತನ್ನ ಪತ್ನಿ ಪುತ್ರರನ್ನೂ ಮನೆಯನ್ನೂ ಮಾನವನ್ನೂ ಬಿಟ್ಟು ಹೋಗುವದು ಬುದ್ಧಿವಂತಿಕೆಯಲ್ಲವೆ ? ಅವರಿಗೆ ನಮ್ಮಲ್ಲಿ ವಿಶ್ವಾಸವಿಲ್ಲ. ಪಶುಪ್ರಾಣಿಗಳಲ್ಲಿರುವ ಸ್ವಭಾವಿಕ ವಾದ ವಿಶ್ವಾಸವೂ ಅವರಲ್ಲಿಲ್ಲ. ಒಂದು ಬಡಗುಬ್ಬಿಯು ತನ್ನ ಮರಿಗಳಿಗಾಗಿ ಶತ್ರುವಿನೊಡನೆ ಗೂಡಿನಲ್ಲಿ ಜಗಳವಾಡಿ ಪ್ರಾಣವ ನ್ನಾದರೂ ಬಿಡುವದು. ಇದು ಭಯದಿಂದಲೇ ಹೊರತು ವಿಶ್ವಾಸ ದಿಂದಬೇರೆ ಅಲ್ಲ. ಅಕಾರಣವಾಗಿ ಓಡಿಹೋಗುವವರಲ್ಲಿ ಬುದ್ಧಿ ವಂತಿಗೆ ಏನಿರುವದು ?

ನಂದರಾಜ —ತಂಗಿ ! ನಿದಾನವನ್ನು ತಾಳಿ, ಕೊಂಚಸಹಿಸಿಕೊಂಡಿರು. ನಿನ್ನೊಡೆಯನು ಉದಾರಿ, ಬುದ್ಧಿಶಾಲಿ, ಕಾಲಕ್ರಮವನ್ನು ತಿಳಿದ ವನು. ಇನ್ನು ವಿಶೇಷವಾಗಿ ಮಾತನಾಡುತ್ತಿರಲು ಅವಕಾಶವಿಲ್ಲ.

ಕಾಲ ಬಹಳ ಸೂಕ್ಷ್ಮವಾಗಿರುವದು. ನಮಗೆ ತಿಳಿಯದಿದ್ದರೂ, ನಾವು ದ್ರೋಹಿಗಳೆಂದು ಪರರು ತಿಳಿದಿರುವರು. ನಮಗೆ ಗೊತ್ತಿಲ್ಲದಿದ್ದರೂ ಪರರು ನಮಗೆ ಭಯವಿದೆಯೆಂದು ಹೇಳುವರು. ಅಗಾಧವಾದ ಅಲೆಗಳಿಂದ ಅಲ್ಲೋಲಕಲ್ಲೋಲವಾದ ಕಷ್ಟಸಮುದ್ರದಲ್ಲಿ ನಾವು ಈಗ ಹೊರಳಾಡುವವರಾಗಿರುವೆವು. ಇನ್ನು ನಿನ್ನಪ್ಪಣೆ ತೆಗೆದುಕೊಳ್ಳುವೆನು. ಕೂಡಲೆ ಮತ್ತೆ ಕಾಣುವೆನು. ತಮವನ್ನಾಂತ ಕೃತ್ಯಹಿಮ್ಮೆಟ್ಟದೆ ಮುಂದಕ್ಕೆ ಬೆಳೆಯಲಾರದು. ಎಲೈ ಮುದ್ದಿನ ಗಿಳಿಯೆ ನೀನು ಕ್ಷೇಮದಲ್ಲಿರು (ಹುಡುಗನಿಗೆ ಮುದ್ದಿಡುವನು)

ಪತ್ನಿ.—ತಂದೆ ಇದ್ದರೂ ಇವನು ತಬ್ಬಲಿಯಾಗಿರುವನು.

ನಂದರಾಜ —ಇನ್ನು ಮರುಕಕ್ಕೆ ನನ್ನ ನ್ನೀಡುಮಾಡುತ್ತಿರುವೆ. ಮುಂದೆ ಇಲ್ಲಿರುವದರಿಂದ ನನಗೆ ಅವಮಾನಕ್ಕೂ, ನಿನಗೆ ಸಂಕಟಕ್ಕೂ ಕಾರಣವಾಗುವದು. ಇಗೋ! ನಿನ್ನಪ್ಪಣೆ ತೆಗೆದುಕೊಂಡೆ.

ನಿಷ್ಕ್ರಾಂತಃ —ನಂದರಾಜ.

ಪತ್ನಿ —ಎಲೊ! ತುಂಟನೆ, ನಿಮ್ಮ ತಂದೆ ಸತ್ತುಹೋದ ನೀನೇನೇ ಮಾಡುವೆ? ಮುಂದೆ ಯಾವರೀತಿ ಜೀವಿಸುವೆ?

ಪುತ್ರ —ಅಮ್ಮಾ! ಪಕ್ಷಿಗಳಂತೆ.

ಪತ್ನಿ —ಏನು! ಚಿಟ್ಟೆ ಹಲ್ಲಿ ಹಾವು ಹುಳಗಳನ್ನು ತಿನ್ನುವೆಯಾ?

ಪುತ್ರ —ಸಿಕ್ಕಿದ್ದನ್ನು. ಪಕ್ಷಿಗಳು ಹಾಗೇ ಅಲ್ಲವೆ ಜೀವಿಸುವದು.

ಪತ್ನಿ —ಅಯ್ಯೋ! ಬಡಗುಬ್ಬಿಯೆ! ನಿನಗಿನ್ನು ಜನರ ಅಂಟೂ ಉರುಳೂ ಬಲೆಗಳೇ ಗೊತ್ತಿಲ್ಲವಲ್ಲ.

ಪುತ್ರ —ಅಮ್ಮಾ! ಅವಕ್ಕೆ ನಾನೇತಕಂಜಲಿ. ಬಡಗುಬ್ಬಿಗಳಿಗೆ

ಜನರು ಅವನ್ನಿಡುವದಿಲ್ಲ. ನೀನು ಹೇಳಿದರೇನು, ನನ್ನ ತಂದೆ ಸತ್ತು ಹೋಗಿಲ್ಲ.

ಪತ್ನಿ.—ಸತ್ಯವಾಗೂ ಸತ್ತುಹೋದರು ನೀನೇನಮಾಡುವೆ ?

ಪುತ್ರ.—ಹಾಗಾದರೆ ಗಂಡನಿಗಾಗಿ ನೀನೇನಮಾಡುವೆ ?

ಪತ್ನಿ.—ನನಗೆ ನು ಸಂತೆಯಲ್ಲಿ ಇಪ್ಪತ್ತು ಜನವನ್ನಾದರು ಕೊಂಡು ಕೊಳ್ಳುವೆನು.

ಪುತ್ರ.—ಆಹ ! ಮಾರುವದಕ್ಕೆ ಕೊಂಡುಕೊಳ್ಳುತ್ತಿರಬಹುದು ?

ಪತ್ನಿ.—ಅಯ್ಯೋ ! ವಯಸ್ಸಿಗೆ ಮೀರಿದ ಬುದ್ಧಿ ನಿನ್ನಲ್ಲಿರುವದಲ್ಲ.

ಪುತ್ರ.—ಅಮ್ಮಾ ! ನನ್ನ ತಂದೆ ರಾಜದ್ರೋಹಿಯೆ ?

ಪತ್ನಿ.—ಜನರು ಹಾಗೆಂದು ಹೇಳುವರು.

ಪುತ್ರ.—ರಾಜದ್ರೋಹಿ ಅಂದರೇನು.

ಪತ್ನಿ.—ರಾಜನಿಗೆ ಅಭಯವನ್ನು ಕೊಟ್ಟು ಸುಳ್ಳನಾಗುವನು ರಾಜ ದ್ರೋಹಿ.

ಪುತ್ರ.—ಅವರನ್ನೆಲ್ಲ ನೇಣುಹಾಕಬೇಕೊ ?

ಪತ್ನಿ.—ಹೌದು.

ಪುತ್ರ.—ಯಾರು ?

ಪತ್ನಿ.—ಸತ್ಯವನ್ತರು.

ಪುತ್ರ.—ಅಯ್ಯಯ್ಯೋ ! ದ್ರೋಹಿಗಳೆಲ್ಲರೂ ಹುಚ್ಚರು. ಲೋಕ ದಲ್ಲಿ ಸತ್ಯವಂತರಿಗಿಂತಲು ದ್ರೋಹಿಗಳೇ ಹೆಚ್ಚಾಗಿರುವರು, ಇವರು ಅವರನ್ನು ನೇಣುಹಾಕುವದಬಿಟ್ಟು ಅವರಕೈಲಿ ಯಾತಕ್ಕೆ ನೇಣು ಹಾಕಿಸಿಕೊಳ್ಳುತ್ತಾರೆ.

ಪತ್ನಿ.—ಆಹ ! ಮುದ್ದಿನಕಪಿಯೆ ! ದೇವರು ನಿನ್ನನ್ನು ಕಾಪಾ ಡಲಿ. ನಿನಗೆ ತಂದೆ ಇಲ್ಲವಲ್ಲ ಮುಂದೇನುಮಾಡುವೆ ಹೇಳು ?

ಪುತ್ರ.—ಅವನು ಸತ್ತಿದ್ದರೆ ನೀನು ಅಳುತ್ತೀಯೆ. ನೀನಳದೆ ಇದ್ದರೆ ಸರಿಯೋಸರಿ, ನಮ್ಮ ತಂದೆ ಮತ್ತೆ ಬರುವನು.

ಪತ್ನಿ.—ಆಹ! ಹ್ಯಾಗೆ ಮಾತನಾಡುತ್ತಿರುವೆ.

ಪ್ರವೇಶ.—ಚರ.

ಚರ.—ಎಲೌ ಮಂಗಳಾಂಗಿ! ನಿಮಗೆ ಶುಭವಾಗಲಿ. ನನ್ನ ಪರಿಚಿತಿ ನಿಮಗಿಲ್ಲದಿದ್ದರು ನಿಮ್ಮನ್ನು ನಿಮ್ಮ ಪದವಿಯಿಂದ ನಾನು ಬಲ್ಲೆನು. ನನ್ನಂತ ದೀನರ ಮಾತಿನಲ್ಲಿ ನಿಮಗೆ ಗೌರವ ತೋರುವದಾದರೆ ನಾನು ಹೇಳುವದನ್ನು ಕೇಳಿ. ನಿಮಗೆ ಈಗೊಂದು ಕಷ್ಟಸಂಭವಿಸುತ್ತಿರುವದು. ಈ ರೀತಿ ನಾನು ಬಂದು ಭಯದ ವರ್ತಮಾನವನ್ನು ಹೇಳಿ ನಿಮ್ಮನ್ನು ಹೆದರಿಸುವದು ಅಸಂಗತ. ಆದರೆ ನಿಮಗಿರತಕ್ಕ ಕಷ್ಟ ನನಗೆ ತಿಳಿದೂ ನಿಮ್ಮನ್ನು ಎಚ್ಚರಿಸದಿರುವದು ಶುದ್ಧಪಾಪ. ಇನ್ನಿಲ್ಲಿರದೆ ಮಗನೊಡನೆ ಮತ್ತೆಲ್ಲಾದರು ಮರೆಯಾಗಿರಿ. ಕಷ್ಟಸಮೀಪಿಸುತ್ತಿರುವದು. ನಿಮ್ಮನ್ನು ಭಗವಂತ ಸಂರಕ್ಷಿಸಲಿ. ಇನ್ನು ನಾನಿಲ್ಲಿರಕೂಡದು.

ನಿಷ್ಕ್ರಾಂತಃ.—ಚರ.

ಪತ್ನಿ.—ಕಂದ ॥ ಹಾನಿಯಿದೇನೆನಗೀಗಳ್ ।
ನಾನಿನ್ನೆಂತಕಟ ಬಾಳ್ವೆಮುಂದೀ ಧರೆಯೊಳ್ ॥
ನಾನೇನನು ಮಾಡದಿರಲ್ ।
ಮಾನವರೇಕೆನ್ನನಿಂತು ಬಾಧಿಸುತಿರ್ಪರ್ ॥ ೭೯ ॥

ಸರಿಸರಿ ತಿಳಿದತ್ತದು ನಾ ।
ನಿರುವೀ ತಿರೆಯೊಳ್ಪಲವೆಡೆ ಜನರುತ್ತಮರ ॥
ನ್ನರಿಯದ ಮಂಕೆಂದೊದೆವರ್ ।
ಶರಣೆನುವರ್ಪಾಪಿಗವನು ಸುಖದಿಂದಿರುವಂ ॥೩೦॥

ಸಂದಪುದೀ ಪರಿಧರೆಯೊಳ |
ಗಿಂದಾನೇನನ್ನು ಮಾಡಿದವಳಲ್ಲೆನಿಪಾ ||
ಎಂದೆಂದು ಪೆಣ್ಗಳಗಿರುವಿ |
ದೊಂದು ಬಲಂ ಬೆಂಬಲಮೆನುತಿರ್ದೊಡೆ ಫಲವೇಂ||

ಇವರ್ಯಾರು ! ! ಪ್ರವೇಶ —ಘಾತುಕರು.

ಘಾತುಕ.—ನಿನ್ನ ಗಂಡನೆಲ್ಲಿ ?

ಪತ್ನಿ.—ನಿಮ್ಮಂತ ಮಹತ್ಮರಿರತಕ್ಕ ಪುಣ್ಯಸ್ಥಳದಲ್ಲಿರದೆ ಇರಲೆಂದು ಹಾರೈಸುವೆ.

ಘಾತುಕ.—ಅವನು ದ್ರೋಹಿ.

ಪುತ್ರ —ಸುಳ್ಳು ಬೊಗಳಬೇಡ ಗುಲಾಮನೆ.

ಘಾತುಕ —ಛೀ ! ದ್ರೋಹದ ಮೊಳಕೆ ! (ಬಾಕಿನಿಂದ ತಿವಿಯುವನು.)

ಪುತ್ರ —ಅಮ್ಮಾ ! ನನ್ನ ಕೊಂದುಬಿಟ್ಟ. ನೀನು ಒಡಿಹೋಗು.

(ಪ್ರಾಣಬಿಡುವನು ಘಾತುಕರು ಜಯಸಿಂಹನ ಪತ್ನಿಯನ್ನು ಅಟ್ಟಿಸಿಕೊಂಡು ಹೋಗುವರು) ನಿಷ್ಕ್ರಾಂತಾಃ ಸರ್ವೇ.

೩ನೇ ಸ್ಥಾನ.

ಮಗಧರಾಯನ ಅರಮನೆಯುಲ್ಲೊಂದು ಭಾಗ.

ಪ್ರವೇಶ —ಪ್ರತಾಪರುದ್ರದೇವ, ಜಯಸಿಂಹ.

ಪ್ರತಾಪರುದ್ರ —ಕಂದ ॥ ಮರದನೆಳಲಲ್ಲಿ ನಾವ್ ಕು |
ಳ್ಳಿರುತಂ ಮನದಳಲ ಸುರಿದು ಪರಿಪರಿಯಿಂದಂ ||
ಬರಿದದನು ಮಾಡುತಂ ನಾವ್ |
ಬರುವ ನಡೆನಡೆ ಜಯಸಿಂಹ ಕಡುಕಾನನದೊಳ್ |

ಜಯಸಿಂಹ —ಪೆತ್ತವನಾಳದ ತಿರೆಯು ।
ನ್ನೆತ್ತೆತ್ತಲು ಪೀಡಿಸುತಿಹ ತೊತ್ತಿನಕಯ್ಯಿಂ ॥
ಕತ್ತಿಯುಮೊನೆಯೊಳ್ಪಡಿಸುವ ।
ದುತ್ತಮವದರಿಂ ಪ್ರತಾಪರುದ್ರನೆ ಕೇಳೈ ॥ ೩೩ ॥

ವೃತ್ತ ॥ ದಿನಮಾಗಲೊಪ್ಪಸದೊಂದುತಂಡ ಬಡಿವರ್ಪ್ಪಾಯಂ ಕಣಾ ಮುಂಡೆಯರ್ । ದಿನಮುಂ ತಬ್ಬಲಿಮಕ್ಕಳೆಚ್ಚುತಳುವರ್ಬಾಯ್ಬಿಟ್ಟು ಮಾರ್ಗಂಗಳೊಳ್ ॥ ಜನದಾಹಾರವಕೇಳ್ವ ಮಾರ್ಧ್ವನಿಯುಂ ದಿಗ್ಭಾಗಂಗಳಂ ತುಂಬುತಂ । ಜನಕಿಂತೀಧ್ರದೊಳಾಯಿತೆಂದಳುವರೆಂಬಂತಿರ್ಪುದಾದಿತ್ಯರುಂ ॥೩೪॥

ಪ್ರತಾಪರುದ್ರ.—ಇದರಲ್ಲಿ ನನಗೆ ನಂಬಿಕೆ ಹುಟ್ಟಿದರೆ ನಾನಿದಕ್ಕಾಗಿ ವ್ಯಸನಪಡುವೆನು. ನನಗೇನೆ ಎಲ್ಲವು ಸ್ಪಷ್ಟವಾಗಿ ತೋರದಿದ್ದರೆ, ಕೇಳಿದಮಾತ್ರಕ್ಕೆ ಯಾವದನ್ನೂ ನಾನು ನಂಬತಕ್ಕವನಲ್ಲ. ಯಾವ ಕಷ್ಟವನ್ನು ಜೈಸಲು ನನ್ನಿಂದಶಕ್ಯವೊ, ಅದನ್ನು ಸಕಾಲದಲ್ಲಿ ನಾನು ಜೈಸುವೆ. ಈಗ ನೀನು ಹೇಳಿದ್ದೆಲ್ಲವು ನಿಶ್ಚಯವಾಗಿದ್ದರೂ ಇರಬಹುದು. ನಾವೋಚ್ಚಾರಣೆ ಮಾಡಿದಮಾತ್ರಕ್ಕೇನೆ ನಾಲಿಗೆ ಸೀಳಹೋಗತಕ್ಕ, ಆ ದುರಾತ್ಮನಾದ ವೀರಸೇನನನ್ನು ಸತ್ಯವಂತನೆಂದು ಜನರರಿತಿದ್ದರು. ನಿನಗೂ ಅವನಲ್ಲಿ ತುಂಬಾ ವಿಶ್ವಾಸವಿತ್ತು. ಅವನು ನಿನಗೇನು ಕೆಡಕುಮಾಡಿಲ್ಲ. ನಾನು ಏನೂ ತಿಳಿಯದ ಅನಾಥನಾದ ಹುಡುಗನಾಗಿರುವೆ. ಈಗ ನನ್ನನ್ನವನಿಗೆ ಒಪ್ಪಿಸುವದರಿಂದ ನಿನಗೇನಾದರು ಪ್ರಯೋಜನವಿರಬಹುದು.

ಕಂದ ॥ ಉರಿಮಾರಿಯುಲ್ಲುರಿಯುನಾ ।
ದರದಿಂದಾರಿಸುವರ್ಕೆ ಜನರಿಳೆಯೊಳೇನ ॥

ಸ್ನರಿಯದ ಕುರಿಮರಿಯಿಂದಂ ।
ದರಿತಿರ್ಪ ಜಗದೊಳದೇಂ ಪೊಸದು ನಡೆಯಲ್ಲೈ ॥

ಜಯಸಿಂಹ.—ನಾನು ಮೋಸಗಾರನಲ್ಲ.

ಪ್ರತಾಪರುದ್ರ.—ಆದರೇನು ? ಈಗ ಓಢ್ರಾಧಿಪತಿಯಾಗಿರುವವನು ಮೋಸಗಾರನು.—

ಕಂದ ॥ ದೊರೆಯುನ್ಮಾದರಿಸಲ್ಜನ ।
ರರಿಯರ್ತರತಮವ ಮಾಳ್ಪರೇನಾದೊಡೆಯುಂ॥
ಗುರುಹಿರಿಯರ್ಮಾಡರೆನ ।
ಲ್ಪಿರಿದನುಚಿತವನ್ನವರರಿಯದೆ ಮಾಡುವರ್ಕೈ ॥೩೬॥

ನೀನೆಂತಾವನೊ ನನಗೆ ಗೊತ್ತಾಗುವದು ಅಸಾಧ್ಯವಾಗಿರುವದು. ಹೀಗೆ ನಾನು ಹೇಳುತ್ತಿರುವದನ್ನು ಕ್ಷಮಿಸುವನಾಗು —

ಕಡಲೊಳ್ಪುಟ್ಟಿದ ವಿಷ ತಾಂ ।
ಸುಡುತಿರೆ ಪೊಡವಿಯ ಕುಡಿದದನೆಲ್ಲಂ ಪೊರೆದಂ ॥
ಮೃಡನಾದೊಡೆಯುಂ ಮೊದಲೊಳ್ ।
ಕೆಡಕಂ ಮಾಡುತ್ತಲಿರ್ಪುದದು ಧಾರುಣಿಯೊಳ್ ॥

ಹರಿ ಯಿಾರ್ಬೈದವತಾರವ ।
ಧರಣಿಯೊಳೆತ್ತುತ್ತಿ ದುಷ್ಟರಂಸದೆಬಡಿದುಂ ॥
ಬರಿದೇ ಬೇಸತ್ತಿಹನವ ॥
ನಿರುವರ್ಖಳಜನರಳಿಯದೆ ಧರೆಯೊಳಗಿನ್ನುಂ ॥೩೭॥

ಇತ್ತುದನುಂ ದ್ಯೂತಗಳೊಳ್ ।
ತೆತ್ತು ಮನವ ಮತ್ತಹರಿಸಿ ಮವ್ಯಾದಿಗಳಂ ॥

ಸುತ್ತುತ ಬೆಲೆವೆಣ್ಮನೆಯೊಳ್ ।
ಪೊತ್ತನು ಕಳೆವಂ ದ್ವಿಜನೆನಿಸನೆ ಬಟ್ಟೆಗಳಂ ॥ ೩೯ ॥

ಜಯಸಿಂಹ –ಆಹಾ ! ನನ್ನಾಸೆ ನಿರಾಸೆಯಾಯಿತು.

ಪ್ರತಾಪರುದ್ರ.–ಪ್ರಾಯಶಃ, ನಿನ್ನ ಈಗಿನ ಆಸೆಯಲ್ಲೇ, ನನಗನುಮಾನ ಹುಟ್ಟಿರಬಹುದು. ಹೇಳಕೇಳದೆ ಒಮ್ಮಿಂದೊಮ್ಮೆ ಪತ್ನಿಪುತ್ರರನ್ನು ಬಿಟ್ಟು ನೀನೇತಕ್ಕೆ ಬಂದೆ. ಅವರಲ್ಲಿರಬೇಕಾದ ಆಸೆಪ್ರೇಮಗಳಿಗಿಂತಲು ಅಧಿಕವಾಗಿ ಲೋಕದಲ್ಲವು ಇತರವಿಷಯಗಳಲ್ಲಿರುವದುಂಟೆ ? ಈರೀತಿ ನಾನು ಹೇಳುತ್ತಿರುವದಕ್ಕೆ ನೀನು ವ್ಯಾಕುಲಹೃದಯನಾಗಬೇಡ.–

ಕಂದ ॥ ಅನುಮಾನವ ಪಡುತಿರ್ಪುದು ।
ಮನವೆನಗೀಗೆನ್ನಯ ಸುಖಕಲ್ಲದೆ ನಾನಿ ॥
ನ್ನನಿದರೊಳಪಮಾನವ ಮಾ ।
ಡೆನಿನಿತುನಾಂ ಪೇಳ್ದೊಡಂ ಸುಜನ ನೀನಕ್ಕುಂ ॥೪೦॥

ಜಯಸಿಂಹ.– ವೃತ್ತ ॥ ಬರಿದಾಯಿತ್ತೆನ್ನೋಧ್ರ ನಿನ್ನಾಸೆ ಬಿಡು ಬಿಡಿದನುಂ ಕಾಣೆನೀಂ ಸಾಖ್ಯಮುನ್ನುಂ । ತಿರೆಯೊಳ್ಬೇರ್ಬಿಟ್ಟತಾಶಾಧಿಪನ ವಿಷಲತಾಜಾಲತಾಂಕುಂದ ದಿನ್ನುಂ॥ ಮರೆತಿರ್ಪಂ ನಿನ್ನ ನಿನ್ನಾಣ್ಮನಣುಗ ಬರಿದೇಭ್ರಾಂತಿಯಿಂದೇಂ ಫಲಂ ಕೇಳ್ । ಕರದಿಂ ಕಿತ್ತೀಗದಂ ನಿನ್ನಪೊರೆಯದಿಹ ನವಿಸ್ಮಾ ಪ್ರತಾಪೇಶ ದೇವಂ ॥೪೧॥

ಇನ್ನು ತಮ್ಮಪ್ಪಣೆಯನ್ನು ತೆಗೆದುಕೊಳ್ಳುವೆನು.–

ಕಂದ ॥ ಒಡೆಯನೆ ಕೇಳ್ಪಳನಾಳುವ ।
ಪೊಡವಿಯ ನೊಂದಲ್ಲದೀ ಭರತಖಂಡವನ ॥

ನ್ನುಡುಗೆರೆಯರಾಗಾಶಾಧಿಪ ।
ಕೊಡಲುಂ ನೀನೆಣಿಸುವ ಖಳನಾನಾಗಿರೆನ್ಯೆ ॥೪೦॥

ಪ್ರತಾಪರುದ್ರ.—ಕೋಪಗೊಳ್ಳಬೇಡ. ನನಗೆ ನಿನ್ನಲ್ಲಿ ಭಯವುಂಟೆಂದು ನಾನೀರೀತಿ ಹೇಳಿದೆನೆಂದು ಭಾವಿಸದಿರು. ನಮ್ಮ ದೇಶವು ಈಗಿನ ಹೊರೆಯನ್ನು ಹೊರಲಾರದೆ ಕುಗ್ಗಿಹೋಗಿರುವದು. ಪ್ರತಿದಿನವು ಹಿಂಸೆ ಅಧಿಕವಾಗುತ್ತ, ಯಾತನೆ ಹೆಚ್ಚಾಗುತ್ತಿರುವದು. ಅನೇಕರಿಂದ ನನಗವರಲ್ಲಿ ಸಹಾಯದೊರೆಯುವದೆಂದು ತೋರುವದು. ಈ ಮಗಧದೇಶದಲ್ಲೂ ನನಗೆ ಪ್ರಬಲವಾದ ಸೈನ್ಯ ಸಹಾಯದೊರಕುವದು. ಆದರೆ ಪ್ರಯೋಜನವೇನು ? ನಾನು ಆ ಖಳ ವೀರಸೇನನ ಶಿರಸ್ಸನ್ನು ನೆಲಕ್ಕುರುಳಿಸಿ ಅದನ್ನು ಮೆಟ್ಟಿ ನಡದರೆ ಆ ನಿರ್ಭಾಗ್ಯವಾದ ನಮ್ಮ ದೇಶವು ಮುಂದೆ ಬರತಕ್ಕವನಿಂದ ಮೊದಲಿಗಿಂತಲು ವಿಶೇಷವಾಗಿ ಯಾತನೆ ಪಡುವದು.

ಜಯಸಿಂಹ —ಅಂತಹ ಪುರುಷನ್ಯಾರಿರಬಹುದು ?

ಪ್ರತಾಪರುದ್ರ —ನಾನೇ ಅವನೆಂದು ತಿಳಿ. ವಿಶಿಷ್ಟ ದುರಾಚಾರಗಳಿಗೂ ನಾನು ಮಾತೃಸ್ಥಾನವಾಗಿರುವೆನು. ಅದೆಲ್ಲ ಹೊರಬ್ಬಿದರೆ, ಈಗ ದುರ್ಮಾರ್ಗಿಯೆಂತಿರುವ ಆ ಪಾಪಿ ವೀರಸೇನನು ನಿರಪರಾಧಿಯಾದ ಪಶುವಿನಂತೆ ಕಾಣುವನು. ನಿಮ್ಮೀಶ್ರದೇಶವು ನನ್ನಲ್ಲಿರತಕ್ಕ ಅನರ್ಥಗಳನ್ನು ಕಂಡರೆ ಮೊದಲಿನ ವೀರಸೇನನೆ ಸರ್ವೋತ್ತಮನಾಗಿದ್ದನೆಂದು ಭಾವಿಸುವದು.

ಜಯಸಿಂಹ —ಕಂದ ॥ ನರಕದೊಳಿರ್ಪಸುರರ ಪಡೆ ।
ಯರಿಯದು ಕೇಳ್ವೀರಸೇನನಂ ಮಾರ್ದವನಂ ॥

ಹರಿಯುಂ ಕಾಣಂ ತನ್ನಯ |
ಪರಿಪರಿ ಜನ್ಮದೊಳವನನು ಮೀರಿದ ಖಳನಂ ||೪೩

ಪ್ರತಾಪರುದ್ರ.—ಹೌದು ಅವನು ಕ್ರೂರಕರ್ಮಿ, ದಯಾರಹಿತ, ವಿಷಯಾಸಕ್ತ, ಕಪಟ, ಮೋಸಗಾರ, ಆತುರನು, ಮರ್ಮಿ, ಮತ್ತಿನ್ನು ಮನುಷ್ಯರಿಗೆ ತಿಳದಿರತಕ್ಕ ವಿಶಿಷ್ಟ ದುರಾಚಾರಗಳಿಂದಲೂ ಕೂಡಿರುವನು. ಆವರೆ ಪಾತಕರ ಪರಿಮಾಣವಿಷ್ಟೇ ಯೆಂದು ತಿಳದಿರತಕ್ಕವರ್ಯಾರು? ನನ್ನಲ್ಲಿರುವದರ ಆಳವನ್ನು ಕಂಡವರೇ ಇಲ್ಲ. ನಿಮ್ಮ ಹೆಂಡತಿ, ಮಕ್ಕಳು, ಗೃಹಣಿ, ಕನ್ಯಾಮಣಿಗಳೆಲ್ಲರಿಂದರೂ ನನ್ನ ಕಾಮ ತೃಪ್ತಿಯಾಗುವದಿಲ್ಲ. ಮತ್ತದರ ಉದ್ದೇಶಕ್ಕಡ್ಡಲಾಗಿ ಬರುವ ವಿಶಿಷ್ಟ ನಿರ್ಬಂಧಗಳನ್ನೂ ನಾನು ನಾಶಪಡಿಸಲುದ್ಯೋಗಿಸುವೆ. ಇಂತವನಿಗಿಂತಲೂ ವೀರಸೇನನೇ ಉತ್ತಮನಲ್ಲವೆ?

ಜಯಸಿಂಹ.—ಮಿತಿಮೀರಿದ ಇಂದ್ರಿಯಬಾಧೆಯು ಲೋಕಕಂಟಕವಾದದ್ದೇ ಸರಿ. ಅದರಿಂದ ಸಿಂಹಾಸನಾಧಿಪತಿಗಳು ಅನೇಕವೇಳೆ ಅಕಾಲಮೃತ್ಯುವಿನ ಬಾಯಿತುತ್ತಾಗಿರುವರು. ಆದರೂ ನೀನು ಭಯಪಡಬೇಡ. ನಿನ್ನ ರಾಷ್ಟ್ರಾಧಿಪತ್ಯವನ್ನು ವಹಿಸು. ಜನರಿಗದರ ಜಾಡು ತಿಳಿಯದೆ, ಅದರಿಂದವರಿಗೊಂದು ಹಿಂಸೆಯೂ ಆಗದಂತೆ, ಅದರ ಸುಖವನ್ನು ಅನೇಕರಲ್ಲನುಭವಿಸುತ್ತ ರಾಜ್ಯವಾಳಬಹುದು. ಪ್ರಭುವಿನಲ್ಲಿ ಅಂತಹ ನಡತೆಯುಂಟೆಂದು ತಿಳಿದರೆ ಅದಕ್ಕೆ ಸಹಕಾರಿಗಳಾಗಿ ಅನೇಕ ನಾರಿಯರು ಎಲ್ಲಾ ದೇಶದಲ್ಲೂ ಇರುವದುಂಟು. ಅವರೆಲ್ಲರಲ್ಲೂ ತೃಪ್ತಿಹೊಂದದಂತ ಕಾಮ ನಿನ್ನಲ್ಲಿರಲಾರದು.

ಪ್ರತಾಪರುದ್ರದೇವ.—ಅದರೊಂದಿಗೆ ನನ್ನ ದುರ್ಬುದ್ಧಿಯಲ್ಲಿ ಮಿತಿ ಮೀರಿದ ದುರಾಸೆ ಹುಟ್ಟಿ ಅದಕ್ಕಾಗಿ, ನಾನು ಪ್ರಭುವಾಗಿದ್ದಲ್ಲಿ, ಉಪರಾಜರನ್ನೆಲ್ಲ ಅವರ ದೇಶಕೋಶಕ್ಕಾಗಿ ಕೊಲ್ಲುವೆ. ಪ್ರಜೆಗಳ ಆಸ್ತಿಯನ್ನೆಲ್ಲ ದೋಚಿಕೊಳ್ಳುವೆ. ಮನೆಗಳನ್ನು ಕಿತ್ತುಕೊಳ್ಳುವೆ. ಅದನ್ನು ಮಾಡಲು ಸಜ್ಜನರಮೇಲೆ ಇಲ್ಲದ ತಪ್ಪಿತಗಳನ್ನು ಹೊರಿಸಿ ಅವರನ್ನೆಲ್ಲ ನಾಶಪಡಿಸುವೆ.

ಜಯಸಿಂಹ —ದ್ರವ್ಯದಾಸೆಯು ಪ್ರಬಲವಾದದ್ದು. ಯೌವನದಲ್ಲೇ ಕಾಮ ಕಡೆಯಾಗುವದು. ದ್ರವ್ಯಾಭಿಲಾಷೆಯು ಕಡೆಯವರಿಗೂ ಹೆಚ್ಚುತ್ತಲಿದ್ದು ವಿಶೇಷ ಕೆಡಕುಮಾಡುವದು. ಆದರೂ ನೀನು ಹೆದರಬೇಡ. ನಮ್ಮೀಥ್ರದೇಶವು ಬಂಜೆಯಾಗಿರುವದಿಲ್ಲ, ರಾಜಕೋಶದಲ್ಲೇ ನೀನು ತೃಪ್ತನಾಗುವಷ್ಟು ಭಾಗ್ಯ ಸದಾ ಇರುವದು. ಈಗ ಹೇಳಿದ ದುರ್ಗುಣಗಳನ್ನೆಲ್ಲ ಇತರ ಸುಗುಣಗಳಲ್ಲಿ ಮರೆಯಬಹುದು.

ಪ್ರತಾಪರುದ್ರ.—ಅಂತಹ ಸುಗುಣಗಳು ನನ್ನಲ್ಲೊಂದೂ ಇಲ್ಲ. ಪ್ರಭುವಿಗೆ ಯೋಗ್ಯವಾದ ಸತ್ಯಸ್ವಭಾವ, ಸುಶೀಲತೆ, ಪ್ರಾಮಾಣಿಕತೆ, ದಯೆ, ನಮ್ರತೆ, ಸ್ಥೈರ್ಯ, ಶೌರ್ಯ, ಔದಾರ್ಯ, ತಾಳ್ಮೆ ಶ್ರದ್ಧಾದಿಗಳನ್ನು ನಾನರಿತವನೇ ಅಲ್ಲ. ಅವುಗಳಿಗೆ ಬದಲಾಗಿ ಲೋಕದಲ್ಲಿರುವ ವಿಶಿಷ್ಟ ಅಪರಾಧಗಳನ್ನು ಸೇರಿಸಿ ಮಾಡಲ್ಪಟ್ಟಿರುವ ಮೂರ್ತಿ ನಾನು. ನಾನು ಭೂಮಿಪಾಲನಾದರೆ.—

ಕಂದ ॥ ಧರೆಯೊಳಿರುವೈಕಮತ್ಯದ ।

ಸುರಭಿಯ ಕೊರಳಂ ಮುದದೊಳು ಕುಯ್ಯದೆ ಬಿಡೆನೇಣ॥

ತರಿಯುತ ಸುಖವುಂ ಪುಟ್ಟುವ ।
ತರುಗಳುರಿಯಲೋಢ್ರವ ಹುರಿಯುವೆನೋಡಿನೊಳಾಂ ||

ಜಯಸಿಂಹ.—ಹಾ ! ಓಢ್ರವೆ ! ನಿನ್ನ ಬಾಳು ಹೀಗಾಯಿತೆ ?

ಪ್ರತಾಪರುದ್ರ.—ನನ್ನ ಸ್ವಭಾವವಿಂತಾದ್ದು. ನಾನು ನಿಮ್ಮ ಓಢ್ರವನ್ನಾಳಬಹುದೆ ಹೇಳು ?

ಜಯಸಿಂಹ.—ಒಢ್ರವನ್ನಾಳಬಹುದೇ ? ಅದರಲ್ಲಿ ಬಾಳುವದಕ್ಕೂ ಯೋಗ್ಯನಲ್ಲ.

ವೃತ್ತ || ಬರಿದಾಯಿತ್ತಾಗೆನಗಿರ್ದಿದೊಂದುಬಿಮೆಯುಂ ಹಾ ! ಓಢ್ರ ನೀಂ ಮುಂದಿದಂ । ಬರಿದೇ ಭ್ರಾಂತಿಸಲೇಂ ಫಲಂ ಬಿಡಿದನೀಂ ರಾಜ್ಯಾಪಹಾರಂ ಸ್ಥಿರಂ || ತಿರೆಯನಿತ್ತಿಹುದಾಳೆನುತ್ತ ಕಡುನಿನ್ನಾಶಾಧಿಪಂಗೀಗ ಕೇ । ಳರಿದಿನ್ನುಂ ಗತಿಮುನ್ನದ್ದಿ ನಿನ್ನಳಲ ಕೇಳ್ವರ್ಕಾಣರೀ ಧಾತ್ರಿಯೊಳ್ || ೪೫ ||

ಆಹಾ ! ನಮ್ಮದೇಶಕ್ಕಿಂನ್ನು ಸುಖವೆಂದರೇನು ? ಅದನ್ನು ಸುಖದಿಂದಾಳುತ್ತಿದ್ದ ಆ ವಿಜಯಧ್ವಜನ ಮಗನೇ ದುರ್ಮಾರ್ಗಿಯಾಗಿರುವನು. ಅವನ ಬಾಯಿಂದಲೇ ಗೊತ್ತಾಗುತ್ತಿರುವದು. ಅಯ್ಯೋ ! ಹುಟ್ಟಿದಮನೆಯನ್ನಿವನು ಅವಮಾನಪಡಿಸುತ್ತಿವನಲ್ಲ.

ಕಂದ|| ಯತಿಯಂತಿರ್ದಂ ಪಿತನುಂ ।
ಮತಿಯುತೆ ಮಾತೆ ಗಿರಿಜಾತೆಯಂತಿರುತಿರ್ದಳ್ ||
ಸುತನಿಂ ತಿಪ್ಪುರ್ದರಿಂದನು ।
ಮತಮೇನಿರ್ಪುದೊ ಹರಹರ ಬೊಮ್ಮನಿಗಿದರೊಳ್||

ಇನ್ನು ನಿನ್ನ ಅಪ್ಪಣೆಯನ್ನು ತೆಗೆದುಕೊಳ್ಳುವೆ.—

ಕಂದ॥ ಪುಟ್ಟಿದತಿರೆಯುಂ ಮೆಟ್ಟಿದೆ ।
ಬಿಟ್ಟೆನು ನೀನೀಗನುರಿದ ದುಷ್ಕೃತೆಯಿಂದಂ ॥
ಅಟ್ಟಲ್ದೇಶಭ್ರಷ್ಟನು ।
ಪುಟ್ಟಿದತಿರೆಯುಂ ಬಿಡುವ್ರೊಲು ನಾನಿನ್ನಡೆವೆಂ ॥೪೬॥

ಆಸೆ ನಿರಾಸೆಯಾಯಿತೇ ?

ಪ್ರತಾಪರುದ್ರ — ಜಾರಿದುದೀಗಳ್ಸಂಶಯು ।
ಧೀರನೆ ಕೇಳ್ಪುಟ್ಟಿತೀಗೆನಗೆ ನಂಬಿಕೆ ನಾಂ ॥
ತೋರುವೆ ಮನವಂ ಮಾಜದೆ ।
ಮಿರಾದಿರಾಯರ್ನನೆ ತಿಳಿದೆನು ನೈಜವ ನಿನ್ನೋಳ್॥ ॥೪೭॥

ಇಂತಹ ಅನೇಕ ಉಪಾಯಾಂತರಗಳಿಂದ ಆ ಕ್ರೂರಾತ್ಮನಾದ ವೀರಸೇನನು ನನ್ನನ್ನು ತನ್ನ ಕೈವಶಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದ. ಆದರೆ ನನಗಿರತಕ್ಕ ಕೊಂಚ ತಿಳುವಳಿಕೆಯು ವಿಚಾರವಿಲ್ಲದ ನಂಬಿಕೆಗೆ ಅವಕಾಶಕೊಡುವದಿಲ್ಲ. ಅದು ಹಾಗಿರಲಿ. ನಮ್ಮಿಬ್ಬರಮನಸ್ಸನ್ನು ಈಗ ಜಗದ್ವ್ಯಾಪಕನು ನೋಡುತ್ತಿರುವನು. ಅವನ ಸಾನ್ನಿಧ್ಯದಲ್ಲಿದನ್ನು ಹೇಳುವೆನು ಕೇಳು. ಇಂದಿನಿಂದ ನನ್ನ ಸುಖದುಃಖಗಳಿಗೆ ನೀನೆ ಬಾಧ್ಯನು. ಇದುವರಿಗೆ ನಾನು ನಿಂದಿಸಿಕೊಂಡದ್ದು ನಿಜವೆಂದರಿಯದಿರು.—

ಕಂದ ॥ ಅರಿಯೆನು ಕೇಳ್ನಾನಿನ್ನಂ ।
ಹರಿಣಾಕ್ಷಿಯುರೋಳ್ಸರಸದಪರಿಯಂ ಪುಸಿಯುಂ ॥
ನರರೊಳ್ನಾಂಪೇಳ್ದವನ ।
ಲ್ಲಿರುವೆಂ ಬಯಸದೆ ನಗಿರ್ಪ ವಸ್ತುವ ಧರೆಯೊಳ್ ॥

ಬಿಡೆನ್ನೈ ಗುಟ್ಟಂ ಖಳನಾ ।
ದೊಡೆಯುಂ ತಿಳದೊಡೆ ನನಗವನೊಳಗಿರ್ಪುದನಾಂ॥
ಬಿಡುವೆಂ ಪ್ರಾಣವನಲ್ಲದೆ ।
ಬಿಡೆನ್ನೈ ಸತ್ಯವ ನರರೊಳು ನಿಜವಿದು ಕೇಳ್ಳೈ ॥

ನನ್ನ ವಿಷಯುವಾಗಿ ಈಗ ನಾನಲ್ಲದ್ದನ್ನು ಹೇಳಿಕೊಂಡದ್ದೆ ನನ್ನ ಮೊದಲಿನ ಅನೃತವು. ನನ್ನಲ್ಲೇನಿದ್ದಾಗ್ಯೂ ಇನ್ನದು ನಿನಗಾಗಿ ಯೂ, ನಮ್ಮ ನಿರ್ಭಾಗ್ಯವಾದ ಓಢ್ರದೇಶಕ್ಕಾಗಿಯೂ ಇರುವದು. ಇಲ್ಲಿಗೆ ನೀನು ಬರುವದಕ್ಕೆ ಮುಂಚೆಯೇ ಮಾಗಧಸೈನ್ಯವು ಸೇನಾ ಪತಿಯಾದ ಶೇಖರನೊಡನೆ ಓಢ್ರದೇಶಕ್ಕೆ ಪ್ರಯಾಣಬೆಳಸಲು ಸಿದ್ಧವಾಗಿತ್ತು. ಅದರ ಸಂಗಡ ನಾವಿಬ್ಬರು ಜೊತೆಯಾಗಿ ಹೋಗ ಬಹುದು.——— ನೀನೇತಕ್ಕೆ ಸುಮ್ಮನಿರುವೆ ?

ಜಯಸಿಂಹ.—ಕಂದ ॥ ತೋರದು ನನಗೇನೀಗಳ್ ।
ನೀರೊಳ್ಪಾಲಂ ಬೆರೆಸಿದವೋಲ್ಸುಖದುಃಖಂ ॥
ಸೇರಿರಲವರೊಳ್ಮನವುಂ ।
ಹೋರುತ್ತಿರ್ಪುದದು ತಿಳಿಯಲೀಗಿನಪರಿಯಂ ॥೫೧

ನೋಡು ! ಅಲ್ಲಿ ಯಾರೊ ಬರುತ್ತಿರುವರು.

ಪ್ರತಾಪರುದ್ರ.— ನಮ್ಮ ನಾಡಿನವನಂತೆ ತೋರುವದು.

ಪ್ರವೇಶ.—ನಂದರಾಜ.

ಜಯಸಿಂಹ — ಆರ್ಯನೆ ! ವಂದಿಸುವೆ.

ಪ್ರತಾಪರುದ್ರ.—ಈಗ ಗೊತ್ತಾಯಿತು. ಈರೀತಿ ಪರಿಚಿತಿ ತಪ್ಪಿ ಹೋಗುತ್ತಿರುವದನ್ನು ಲೋಕನಾಥನು ಜಾಗ್ರತೆ ನಿವಾರಣೆಮಾಡಲಿ.

ನಂದರಾಜ.— ನಾನೂ, ಅದನ್ನೇ ಹಾರೈಸುತ್ತಿರುವೆ.

ಜಯಸಿಂಹ.—ಮೊದಲಿನಂತೆಯೆ, ಓಥ್ರವಿರುವದೊ?

ನಂದರಾಜ.—ಅಯ್ಯೋ! ಅದರ ಹೆಸರೇತಕ್ಕೆತ್ತುವೆ. ತಾನಿಂತಾದ್ದೆಂದು ಹೇಳಿಕೊಳ್ಳುವದಕ್ಕೂ ಭಯಪಡುತ್ತಿರುವದು. ನಮ್ಮ ದೇಶವೆಂದದನ್ನು ಕರೆಯಕೂಡದು.

ಕಂದ|| ಪುಟ್ಟಿದ ತಿರೆಯನುತಕ್ಕರೆ |
ಯಿಟ್ಟಲ್ಲೀಗೋಥ್ರದೊಳ್ಜನರದಂ ತಮ್ಮಂ ||
ಮೆಟ್ಟುವ ಕಡುಸುಡುಗಾಡಿನ |
ತಿಟ್ಟೆಂದೀಗದನು ಮೆಟ್ಟದಿರ್ಪರು ಕೇಳೈ ||೫೦||

ಅಳಿದಂ ಕಲಿಭೀಮಂ ಮುಂ |
ದಿಳೆಯೊಳಗಿಲ್ಲಟ್ಟುಳಿ ನನಗವನಿಂದೆನುತಂ ||
ಬಳಸುತ ಮುಳಿಸಿಂ ಮೊದಲಿನ |
ನೆಲದೊಳ್ಫುಳಘುಳಿಸುತ ಕಡುಬಕನೇಳ್ದೀಗಳ್ ||

ಅಂದಿನ ಮೊದಲಿಂ ಮನೆಗೊಂ |
ದೊಂದರ ಬಲಿಯಂ ಕೊಡಿ ನನಗಿಂದಿನವರೆಗಂ ||
ದೆಂದವ ನುಂಗುತ ಜನರಂ |
ಬಂದಿಹ ನೆಂಬಂದದೊಳಹುದೀಗೋಥ್ರದೊಳಂ ||

ಸತ್ತವರಂ ಕಂಡಳುವರ |
ನೆತ್ತಲು ಕಾಣುತ್ತ ಜನರು ಪೊತ್ತಂ ಕಳೆವರ್ ||
ಎತ್ತದೆ ಪೆಣಗಳ್ಪಾಯಸ |
ಮುತ್ತುತಲಿರ್ಪುದು ಪುರದೊಳಗೆತ್ತೆತ್ತಲು ಕೇಳ್ |

ಅಳುವರ್ಮಡಿಯೊಳ್ಮಡಿಹು |
ದಳವುದರಿಂ ಮುನ್ನಮೆ ಜನರಿಳೆಯೊಳ್ಕೇಳೈ ||

ಎಳೆವರು ಸತ್ತವರಂ ಕಾ ।
ಹೊಳು ಮತ್ತಾ ಜನರರಿಯರು ನೀರೆಳ್ಗಳನಂ॥೫೬॥

ಜಯಸಿಂಹ – ಅಯ್ಯೋ! ಪಾಪವೆ! ಇದೇನದ್ಭುತ. ನಿಜವೆ. ನಿಜವೆ.

ಪ್ರತಾಪರುದ್ರ.– ಯಾವದಾದರು ಹೊಸವರ್ತಮಾನವಿದ್ದರೆ ಹೇಳು ?

ನಂದರಾಜ.–ಕಂದ॥ ಪಳದಾಗಿರ್ಪುದು ವಾರ್ತೆಯು ।
ಗಳಗೆಯ ಮುನ್ನಂ ನಡೆದುದನಾಂ ಪೇಳ್ವಾಡೆಯುಂ॥
ಪಳವುದು ಪೊಸಪೊಸ ವಾರ್ತೆಯು ।
ಪಳದಾಯ್ತೆನುತಂ ನಿಮಿಷದ ವೊದಲಾದುದಕೇಳ್ ॥

ಜಯಸಿಂಹ.–ನನ್ನ ಪತ್ನಿ ಸುಖವಾಗಿರುವಳೆ.

ನಂದರಾಜ –ಸುಖವಾಗಿಯೇ ಇದಾಳೆ.

ಜಯಸಿಂಹ.– ನನ್ನ ಪುತ್ರ.

ನಂದರಾಜ – ಅವನೂ.

ಜಯಸಿಂಹ.–ಖಳನು ಅವರಗೋಜಿಗೆ ಹೋಗದಿರುವದಾಶ್ಚರ್ಯ.

ನಂದರಾಜ.–ಕಡೇಸಲ ಕಂಡಾಗ ಅವರಿಗ್ಯಾವಗೋಜೂ ಇರಲಿಲ್ಲ.

ಜಯಸಿಂಹ –ಮಾತಿನಲ್ಲ್ಯಾತಕ್ಕೆ ಲುಬ್ಧತ್ವ? ವಿಶದವಾಗಿ ಹೇಳು.

ನಂದರಾಜ.–ನಮ್ಮ ದುಃಖವಾರ್ತೆಯನ್ನು ತಿಳಿಸಬೇಕೆಂದು ನಾನು ಬರುತ್ತಿರುವಾಗ, ಪ್ರಜೆಗಳಲ್ಲನೇಕರು ತಿರಗಿಬಿದ್ದಿದಾರೆಂಬದಾಗಿ ಕೇಳಿದೆ. ಅದನ್ನ ಅಡಗಿಸಲು ವೀರಸೇನನ ಬಲವು ಅಲ್ಲಲ್ಲಿ ಚಲಿಸುತ್ತಿದ್ದದ್ದನ್ನು ಕಂಡೆನು. ತಮಗೀಗ ಸಮಯವಾಗಿರುವದು.

ಕಂದ॥ ಒಡೆಯನೆ ನೀಂಪದವೀಗಿ ।
ಟ್ಟೊಡೆ ನಮ್ಮೊಳ್ಪುರದ ಜನರೆಲ್ಲಪ್ರಡೆಯಾಗು ॥

ತ್ತೊಡನೈತರುವರ್ಶಸ್ತ್ರವ ।
ತೊಡುವರ್ಬಡನಡು ಲಲನೆಯರುಂ ನಿನಗೀಗಳ್ ॥

ಪ್ರತಾಪರುದ್ರ.—ಅವರೆಲ್ಲರಿಗು ಕ್ಷೇಮವಾಗಲಿ. ದಂಡೆತ್ತೀಗ ಬರುತ್ತಿರುವೆನು. ದಯಾಳುವಾದ ಮಗಧಭೂಪಾಲನು ತನ್ನ ಸೈನ್ಯವನ್ನೂ, ಸೇನಾಪತಿಯಾದ ಶೇಖರನನ್ನೂ ಕೊಡುವನು.

ಕಂದ॥ ಇಲ್ಲವು ಜಂಬೂದ್ವೀಪದೊ ।
ಳೆಲ್ಲವು ರಣದೋಳ್ಸೆಣಸುವ ನರ ಶೇಖರನೋಳ್ ॥
ಬಲ್ಲನು ರಣಗಳನೇಕಂ ।
ಬಲ್ಲಿದಪಡೆಯಂ ನಡೆಸುತಲೀಗೈತರ್ಪಂ ॥ ೨೯ ॥

ನಂದರಾಜ.—ವೃತ್ತ॥ ಕೇಳೀಮಾತನು ಪೇಳೆನಾಂ ಪ್ರತಿಯನಿಂದೊಂದುಂದಲೀ ರೀತಿಯಿಂ । ಪೇಳಲ್ಕಾಗದು ನನ್ನೊಳಿರ್ಪುದ ಜನಂ ಕೇಳ್ವಂತೆ ಬಾಯ್ಬಿಟ್ಟು ನಾಂ ॥ ತೋಳಂಗಳ್ಘನಕಾನನಂಗಳೊಳು ಕೇಳ್ವಂತೆನ್ನೊಳೀಗಿರ್ಪುದಂ । ಪೇಳಲ್ವೇಳ್ಕು ಧರಾರಮಾರಮಣ ಕೇಳ್ಗೋಳಟ್ಟೆದೇಕಾಂತದೊಳ್ ॥ ೩೦ ॥

ಜಯಸಿಂಹ—ಅದೇನು ಎಲ್ಲರಿಗೂ ಸಾಮಾನ್ಯವಾದ ವಿಷಯಗಳೊ, ಅಥವ ಯಾವನಾದರು ಒಬ್ಬನುಮಾತ್ರ ಅವಕ್ಕೆ ಗುರಿಯಾಗಿರುವನೊ?

ನಂದರಾಜ.—ಕಂದ॥ ನಾನೀಗುಸುರುವವಾರ್ತೆಗೆ ।
ನೀನಲ್ಲದೆ ಪರಜನ ಗುರಿಯಾಗಿಲ್ಲವು ಕೇಳ್ ॥
ಮಾನವನಾದವ ಪರರೊಳ್ ।
ಹಾನಿಯ ಕಂಡರೆ ಮರುಕವ ತೋರದವಿರನೈ ॥

ಜಯಸಿಂಹ—ನನ್ನ ವಿಷಯವಾದರೆ, ನನಗದನ್ನು ಮರೆಮಾಜದೆ ಜಾಗ್ರತೆ ಹೇಳು.

ನಂದರಾಜ.—ಕಂದ॥ ಸೊಲ್ಲಿಸುವದೆನ್ನ ನುಡಿಯುಂ ।
ಬಲ್ಲಿದ ದುರ್ವಾರ್ತೆಯನವನಂ ಪೊಲ್ವುದ ಕೇ ॥
ಳಲ್ಲವು ನಿನ್ನಯಕಿವಿಗಳ್ ।
ಸೊಲ್ಲಿಸುವೀಮಾತ ಕೇಳವು ಶಪಿಸದಿರಲ್ಕೆ ॥೬೦॥

ಜಯಸಿಂಹ.— ಸಾಕು! ನಿಲ್ಲಿಸು! ನನಗೇ ಗೊತ್ತಾಗುತ್ತಿರುವದು.

ನಂದರಾಜ.—ನಿನ್ನ ಕೋಟೆಗೊಡವಾಗಿ ಕೈವಶವಾಗಿ ನಿನ್ನ ಪತ್ನಿ ಪುತ್ರರು ಕಾಲಾಧೀನರಾಗಿರುವರು. ಅವರನ್ನು ವಧಿಸಿದ ರೀತಿಯನ್ನು ಹೇಳದರೆ ಅದನ್ನು ಕೇಳಿ ನೀನೂ ಅವರಗತಿಯನ್ನೇ ಹೊಂದ ಬಹುದೆಂದು ನನಗೆ ಶಂಕೆತೋರುವದು.

ಪ್ರತಾಪರುದ್ರ.— ಹರಿಹರಿ! ವ್ಯಸನವನ್ನು ಬಹಿರಂಗಪಡಿಸು. ಮುಖವಂ ಮರೆಮಾಡಿಕೊಳ್ಳಬೇಡ.

ಕಂದ॥ ಪಡುತಿಹ ನಿನ್ನೀದುಃಖವ ।
ನುಡಿಯೊಳ್ತೋರ್ಕೈ ನುಡಿಯಲಿ ತೋರದ ದುಃಖಂ॥
ಪಿಡಿಯುತ ಮನವನು ಸೆರೆಯುಂ ।
ಸುಡುವುದುತನುವಂ ಬಿಡದದು ತೆಗೆಯ್ಕೈ ಸೆರಗಂ ॥

ಜಯಸಿಂಹ.— ನನ್ನ ಮಕ್ಕಳೂ ಹತರಾದರೆ?

ನಂದರಾಜ.—ಪತ್ನಿಪುತ್ರರು ಮತ್ತಲ್ಲಿದ್ದ ಸೇವಾಜನರೆಲ್ಲರೂ.

ಜಯಸಿಂಹ.—ನಾನಿಲ್ಲದಾಗ ಹೀಗಾಯಿತೆ? ನನ್ನ ಪತ್ನಿಯೂ ಮಡಿದಳೆ?

ನಂದರಾಜ.—ಸಂಗತಿಯನ್ನೆಲ್ಲ ಶೃತಪಡಿಸಿರುವೆ?

ಪ್ರತಾಪರುದ್ರ.— ಮಿತ್ರನೆ! ಸಹಿಸು.—

ಕಂದ॥ ಒಡಲಂ ಬಾಧಿಪ ದುಗುಡದ ।
ಜಡತಾಂ ಮತ್ಸರವನು ಕೊಡಲದು ಗುಣ ಮುಕ್ಕುಂ

ತೊಡು ಮನದೊಳ್ಮತ್ಸರವಂ ।
ಬಿಡುಬಿಡು ದುಗುಡವ ಕೊಡದಿರು ನೀನದಕೆಡೆಯಂ॥

ಜಯಸಿಂಹ -ಅವನಿಗೆ ಮಕ್ಕಳಿಲ್ಲ. ನನ್ನ ಮುದ್ದಿನ ಮರಿಗಳೆಲ್ಲಾ ಹೋದವೆ? ಎಲ್ಲರೂ ಹತರಾದರೆಂದು ಹೇಳಿದಾ? ಅಯ್ಯೋ! ದುರಾತ್ಮನೆ! ಎಲ್ಲರನ್ನೂ ಕೊಂದೆಯಾ? ಏನು! ನನ್ನ ಮೋಹದ ಗಿಳಿಯೂ ಅದರ ಮರಿಗಳೆಲ್ಲ ಏಕಕಾಲದಲ್ಲಿ ಬೆಕ್ಕಿಗೆ ಸಿಕ್ಕಿದವೆ?

ಪ್ರತಾಪರುದ್ರ.-ಪುರುಷೋತ್ತಮನಂತಿದನ್ನು ಸಹಿಸಿಕೊ.

ಜಯಸಿಂಹ.- ಹೌದು. ಹಾಗೇಸಹಿಸುವೆ. ಆದರೆ ಪುರುಷೋತ್ತಮನಂತೆಯೇ ಸಂಕಟವೂ ಪಡಬೇಕು.

ಕಂದ॥ ಮರೆಯಲ್ಬೇಕಾಯಿತ್ತಾಗಳ್ ।
ಧರೆಯೊಳ್ಸಂಸಾರದ ಸುಖಸಾರವನೆಲ್ಲಂ ॥
ಪೊರೆಯದೆ ಪೋದನೆ ಹರಿಯುಂ ।
ಕರನೀಡೆನ್ನವರಸುವನು ಬೇಡುತ್ತಿರಲುಂ ॥ ೬೫ ॥

ಈ ಪಾಪಿ ಜಯಸಿಂಹನಿಗಾಗವರು ಕೆಡಕಿಗೀಡಾದರು. ನಾನು ಅಧಮಾಧಮನು. ಅವರಲ್ಲೇನು ಅಪರಾಧವಿರಲಿಲ್ಲ. ನನ್ನ ತಪ್ಪಿತಕ್ಕಾಗಿ ಅವರು ಮೃತ್ಯುವಿನ ಬಾಯ್ತುತ್ತಾದರು. ಇನ್ನಾದರು ಅವರು ಸ್ವರ್ಗದಲ್ಲಿ ಸುಖದಿಂದಿರಲಿ.

ಪ್ರತಾಪರುದ್ರ.-ಕಂದ॥ ಬಿಡದಿರು ಮನವಂ ಧೀರನೆ ।
ಸಿಡಿಲವ ಮತ್ತಿದನೆನೆಯದೆ ಸಿಲೆಗೈದೆದೆಯಂ ॥
ಖಡುಗವ ಮಸೆ ನೀನದರೊಳ್ ।
ತೊಡು ಪಗೆಯೊಳ್ದ್ವೇಷವ ಬಿಡು ದುಗುಡವನಿನ್ನುಂ॥

ಜಯಸಿಂಹ.– ಜಳಜಾಕ್ಷಿಯರೊಲ್ದುಗುಡದ ।
ಜಳವುಂ ನೇತ್ರಂಗಳೊಳ್ಸುರಿದವಾದೊಡೆ ಕೇಳ್ ॥
ಕಲಭಗಳೆದೆಯುಂ ಸೀಳ್ವುದು ।
ಕೊಳುಗುಳದೊಳ್ಸಿಂಹ ನಾದವಂಗೈದೊಡೆನಾಂ ॥೬೭

ವೃತ್ತ॥ ಕರಗಳ ಕೂಡಿಸಿ ಮನದನುರಾಗದಿ ದಿವಿಜರ ಸತಿಗಳ್ ಬೇಡುವೆ ನಾ । ನರಿಯೆನು ತೋರಿಸಿ ತಡವನು ಮಾಡದಲೆದಿರೊಳು ಬರಲವ ಬೇಗದೊಳುಂ ॥ ನರರನು ಬಾಧಿಪ ಕಡುಬಕನಾಗಿಹ ಖಳನನು ಖಡುಗಕೆ ಸಿಲ್ಕಿಸಿ ನೀವ್ । ತಿರೆಯೊಳು ಮತ್ತವನಾಳದಿರೆ ಮನ್ನಿಸಿ ಬಿಡಿಯುವನೆಸಗಿಹ ಪಾತಕವಂ ॥ ೬೮ ॥

ನಿಷ್ಕ್ರಾಂತಾಃ ಸರ್ವೇ.

೫ನೇ ಅಂಕ.

—:0:—

೧ನೇ ಸ್ಥಾನ. ವೀರಸೇನನ ಶಯನಗೃಹ.

ಪ್ರವೇಶ.—ವೈದ್ಯ, ಚೇಟಿ.

ವೈದ್ಯ—ನಿನ್ನ ಜೊತೆಯಲ್ಲಿರಡು ರಾತ್ರಿ ಕಾದದ್ದಾಯಿತು. ನಿನ್ನ ಹೇಳಿಕೆ ದೃಷ್ಟಾಂತಕ್ಕೆ ಬರಲಿಲ್ಲ. ನೀನು ಹೇಳುವಮೇರೆ ಆಕೆ ಕಡೇಸಲ ನಡೆದದ್ದು ಯಾವಾಗ ?

ಚೇಟಿ—ಪ್ರಭುಗಳು ಯುದ್ಧರಂಗಕ್ಕೆ ದಯಮಾಡಿಸಿದಲಾಗಾಯಿತು ಪ್ರತಿದಿನವೂ ನೋಡುತಿರುವೆನು. ಅಂದಿನಿಂದಲೂ ಈಕೆ ಶಯನದಿಂದೆದ್ದು, ತನ್ನ ಶಾಲು ತೆಗೆದುಹೊದ್ದುಕೊಂಡು ಕೈಸಂದೂಕದ ಬೀಗವನ್ನು ತೆಗೆದು, ಅದರಿಂದ ಕಾಗದವನ್ನು ತೆಗೆದುಕೊಂಡು ಕ್ರಮವಾಗಿ ಮಡಿಸಿ, ಬರೆದು, ಬರೆದದ್ದನ್ನು ಓದಿನೋಡಿಕೊಂಡು, ಲಕೋಟೆ ಮಾಡಿ, ಮುದ್ರೆಯನ್ನು ಹಾಕಿ, ಪುನಃ ಶಯನವನ್ನೈದುವಳು. ಇದೆಲ್ಲವನ್ನು ಸಂಪೂರ್ಣವಾದ ನಿದ್ರೆಯಲ್ಲೇಮಾಡುವಳು.

ವೈದ್ಯ—ಇದು ಸ್ವಭಾವಕ್ಕೆ ಶುದ್ಧವಿರುದ್ಧವಾದ ನಡವಳಿಕೆ. ನಿದ್ರೆಯ ಫಲವನ್ನೂ, ಎಚ್ಚರಿಕೆಯ ಪ್ರಯೋಜನವನ್ನೂ, ಏಕಕಾಲದಲ್ಲಿ ಪಡೆಯುವದು ಕೆಡಕಿಗೆ ಕಾರಣವೆ ಹೊರ್ತು ; ಉಪಯೋಗಕರವಾದದ್ದಲ್ಲ. ಈರೀತಿ ನಿದ್ರೆಯಲ್ಲಿ ನಡೆಯುವದು ; ನೀನು ಹೇಳಿದಕೆಲಸಗಳನ್ನು ಮಾಡುವದು ವಿನಃ, ಇನ್ನೇನಾದರು ಈಕೆ ಬಾಯಿಬಿಟ್ಟು ಹೇಳಿಕೊಂಡದ್ದ ನೀನು ಕೇಳಿ ಬಲ್ಲೆಯಾ ?

ಚೇಟ.—ಸ್ವಾಮಿ! ಅದನ್ನು ಅವರ ಹಿಂದೆಗಡೆ ನಿಮ್ಮ ಸಂಗಡ ನಾನು ಹೇಳತಕ್ಕವಳಲ್ಲ.

ವೈದ್ಯ—ಅದೇನಿದ್ದರು ನನ್ನ ಸಂಗಡ ಹೇಳಬಹುದು. ಅದನ್ನು ಹೇಳತಕ್ಕದ್ದು ಅವಶ್ಯಕವಾಗಿರುವದು.

ಚೇಟ—ಅವು ಅದ್ಭುತವಾದ ವಿಷಯಗಳು. ಅವೆಲ್ಲವನ್ನು ನಿಜವೆಂದು ದೃಢಪಡಿಸಲು ನನಗಲ್ಲದೆ ಅವು ಮತ್ತೆ ಯಾರಿಗು ತಿಳಿಯವು. ಅದುಕಾರಣ ಆ ವಿಷಯಗಳನ್ನು ತಮ್ಮ ಸಂಗಡಮಾತ್ರವೇ ಅಲ್ಲ, ಯಾರಸಂಗಡ ಹೇಳಲೂ ಸಂಕೋಚಪಡುವೆನು.

ಪ್ರವೇಶ.—ಚಂದ್ರವಲ್ಲಿ. (ಕೈಲ್ಲಿ ಉರಿಯುವ ಬತ್ತಿ ಹಿಡಿದಿರುವಳು)

ಸ್ವಾಮಿ! ಸ್ವಾಮಿ! ನೋಡಿ! ಅಗೊ ಬರುತ್ತಿರುವಳು. ಇದೇ ಉಡುಪಿನಲ್ಲಿ ಈಕೆ ಯಾವಾಗಲು ಬರತಕ್ಕದ್ದು. ಸತ್ಯವಾಗಿ, ಇವಳು ಗಾಢನಿದ್ರೆಯಲ್ಲಿರುವಳು. ಸಮೀಪದಲ್ಲಿ ನಿಂತು ಮಾಡತಕ್ಕ ಚರ್ಯಗಳನ್ನು ನೋಡಿ.

ವೈದ್ಯ—ಉರಿಯುವ ಬತ್ತಿ ಇವಳ ಕೈಗೆ ಹ್ಯಾಗೆ ಬಂತು?

ಚೇಟ—ಮಲಗಿದ್ದ ಬಳಿ ಇತ್ತು. ಸದಾ ಬೆಳಕು ಸಮೀಪದಲ್ಲಿ ಇದ್ದೇ ಇರಬೇಕು. ಅದನ್ನಿಟ್ಟಿರುವಂತೆ ಆಜ್ಞಾಪಿಸಿರುವಳು.

ವೈದ್ಯ.—ಕಣ್ಣುಗಳ ತೆರದಿರುವಳು! ನೀನೂ ನೋಡು.

ಚೇಟ.—ತೆರದಿದ್ದರೂ ನೋಡತಕ್ಕ ಜ್ಞಾನವಿಲ್ಲ.

ವೈದ್ಯ—ಈಗ ಮಾಡುತ್ತಿರುವದೇನು? ನೋಡು! ನೋಡು! ಕೈಗಳ ಯಾತಕ್ಕೆ ಹೊಸಕಿಕೊಳ್ಳುವಳು.

ಚೇಟ.—ಕೈಗಳನ್ನು ಈರೀತಿ ತೊಳೆದುಕೊಳ್ಳುವಂತೆ ನಟಿಸುವದು ಈಕೆಗೆ ಸಹಚರ್ಯವಾಗಿರುವದು. ಕಾಲುಗಂಟೆವರಿಗೂ ಈರೀತಿ

ಕೈಗಳ ತೊಳೆದುಕೊಳ್ಳುತ್ತಿರುವದನ್ನು ನಾನು ನೋಡಿರುವೆನು.

ಚಂದ್ರವಲ್ಲಿ—ಇನ್ನೂ ಒಂದು ಕಲೆಯಿದೆ.

ವೈದ್ಯ—ಮಾತನಾಡುತ್ತಿರುವಳು. ನೀನೂ ಕೇಳು. ಹೇಳುವದು ಮರೆತುಹೋಗದಂತೆ ನಾನು ಬರೆದುಕೊಳ್ಳುವೆನು.

ಚಂದ್ರವಲ್ಲಿ—ಛೀ! ಛೀ! ಅಸಹ್ಯವಾದ ಕಲೆಯೆ! ತೊಲಗು; ತೊಲಗು; ತೊಲಗೆಂದರೂ ತೊಲಗದಿರುವೆ—ಒಂದು—ಎರಡು! ಹೊತ್ತಾಯಿತು—ಮಾಡಬೇಕು—ಇನ್ನು ಮಾಡಬೇಕು—ನರಕ ಕತ್ತಲಾಗಿರುವದು—ಛೀ! ಛೀ! ಇದೇನು! ವಲ್ಲಭನೆ! ಧುರ ಧೀರನಾಗಿಯೂ, ಹೆದರುವೆ? ಇದಕ್ಕೆ ನಾವ್ಯಾತಕ್ಕೆ ಹೆದರ ಬೇಕು. ಯಾರುತಾನೆ ಕಾಣುವರು? ಕಂಡರೆ ಭಯವೇನು? ಮಹತ್ವದವಿಯಲ್ಲಿರತಕ್ಕ ನಮ್ಮನ್ನು ಆಕ್ಷೇಪಿಸಲು ಯಾರಿಗೆ ತಾನೆ ಧೈರ್ಯವುಂಟು? ಆದರೆ ವೃದ್ಧನಲ್ಲಿಷ್ಟು ರಕ್ತವಿತ್ತೆಂದು ಯಾರು ತಿಳದಿದ್ದರು.

ವೈದ್ಯ—ನೀನಿದನ್ನು ಕೇಳದೆಯಾ?

ಚಂದ್ರವಲ್ಲಿ—ಜಯಸಿಂಹನಿಗೆ ಹೆಂಡತಿ ಇದ್ದಳು. ಈಗವಳೆಲ್ಲಿರು ವಳು? ಇದೇನು! ಈ ಕೈಕಲೆ ಅಡಗುವದೇ ಇಲ್ಲವೇ? ಸಾಕು! ಇಷ್ಟೇಸಾಕು! ವಲ್ಲಭನೆ! ಇನ್ನು ಸಾಕು ಸಾಕು! ಇನ್ನಿದನ್ನು ಬಿಡು. ನೀನೀರೀತಿ ಬೆಚ್ಚುವದರಿಂದ ಈ ಉತ್ಸವ ಭಂಗವಾ ಗುವದು.

ವೈದ್ಯ—ಅಯ್ಯೋ! ತಿಳಿಯಬಾರದ್ದನ್ನೆಲ್ಲ ತಿಳದಿರುವಳು.

ಚೇಟಿ—ಹೇಳಬಾರದ್ದನ್ನೆಲ್ಲ ಹೇಳಿರುವಳು. ಇದುಮಾತ್ರ ನಿಜ. ಇವಳು ತಿಳದಿದ್ದದ್ದನ್ನೆಲ್ಲ ದೇವರೊಬ್ಬನೇ ತಿಳದಿದ್ದನು.

ಚಂದ್ರವಲ್ಲಿ.-ರಕ್ತದ ವಾಸನೆ ಇನ್ನೂ ಇದೆಯಲ್ಲ. ಆಹ! ಬ್ರಹ್ಮನಿರ್ಮಿತವಾದ ವಿಶಿಷ್ಟ ಪರಿಮಳದಿಂದಲೂ ಈ ಚಿಕ್ಕ ಕೈವಾಸನೆ ಹೋಗದೆ? ಹುಶ್! ಹುಶ್! ಹುಶ್!

ವೈದ್ಯ – ಅಯ್ಯೋ! ಎಷ್ಟು ಕಷ್ಟದಿಂದ ನಿಟ್ಟುಸುರು ಬಿಡುವಳು. ವಿಪರೀತವಾದ ಸಂಕಟದಿಂದ ಹೃದಯ ತಲ್ಲಣಿಸುತ್ತಿರುವದು.

ಚೇಟಿ – ಶರೀರಕ್ಕದು ಘನತೆಯನ್ನುಂಟುಮಾಡಿದರೂ ನಾನು ಆ ಹೃದಯವನ್ನು ನನ್ನೆದೆಯಲ್ಲಿಟ್ಟುಕೊಳ್ಳುವದಿಲ್ಲ.

ವೈದ್ಯ.– ಒಳ್ಳೇದು!

ಚೇಟಿ – ಒಳ್ಳೇದಾಗಲೆಂದು ಹಾರೈಸುವೆ.

ವೈದ್ಯ.– ಈ ವ್ಯಾಧಿ ವೈದ್ಯಶಾಸ್ತ್ರವನ್ನು ಮೀರಿದ್ದು. ಇವಳಂತೆ ನಿದ್ರೆಯಲ್ಲಿ ನಡೆದವರು ಅವಸಾನಕಾಲದಲ್ಲಿ ಪರಿಶುದ್ಧಾತ್ಮರಾಗಿದ್ದವರನ್ನು ಅನೇಕವಾಗಿ ನಾನು ಬಲ್ಲೆ. ಆದರೆ——

ಚಂದ್ರವಲ್ಲಿ – ಕೈತೊಳೆ. ನಿಲುವಂಗಿ ತೊಡು. ಖಿನ್ನ ಮನಸ್ಸು ಬಿಡು. ನಾ ಹೇಳುವದ ಕೇಳು. ಶೂರಸೇನನನ್ನು ಹೂಳಿಬಿಟ್ಟರು. ಅವನಿನ್ನು ಸಮಾಧಿಯಿಂದೆದ್ದು ಬರಲಾರ.

ವೈದ್ಯ.– ಹಾಗೇಸರಿ.

ಚಂದ್ರವಲ್ಲಿ.– ಶಯನಕ್ಕೆ ನಡೆ. ಮಲಗು ನಡೆ ನಡೆ. ಬಾಗಲ ಬಳಿ ಶಬ್ದವಾಗುವದು. ಬಾ, ಬಾ, ಹೋಗೋಣ ಬಾ, ಬಾ. ಕೈಕೊಡು. ಆದದ್ದಾಯಿತು. ಇನ್ನದನ್ನು ತಪ್ಪಿಸಲ್ಯಾರಿಂದಾಗುವದು. ಮಲಗಲಿಕ್ಕೆ ಹೋಗೋಣ, ನಡೆ! ನಡೆ! ನಡೆ–

ನಿಷ್ಕ್ರಾಂತಾ.–ಚಂದ್ರವಲ್ಲಿ.

ವೈದ್ಯ – ಈಗಿವಳು ಶಯನವನ್ನೈ್ದುವಳೊ?

ಚೇಟಿ – ಸ್ವಲ್ಪವೂ ಸಾವಕಾಶವಿಲ್ಲದೆ ಮಲಗುವಳು.

ವೈದ್ಯ – ಜನರು ಭಯಂಕರವಾದ ವರ್ತಮಾನಗಳನ್ನು ಗುಸಗುಟ್ಟಿಕೊಳ್ಳುತ್ತಿರುವರು. ಮಾಡಬಾರದ ಕೃತ್ಯಗಳನ್ನು ಮಾಡಿದರೆ, ಅನುಭವಿಸಲಾಗದ ಸಂಕಟಗಳುಂಟಾಗುವವು. ಮನದ ಯಾತನೆ ಮಲಗಿರುವ ಶಯನಕ್ಕಾದರೂ ಗೊತ್ತಾಗದಿರುವದಿಲ್ಲ. ಇನ್ನಿವಳಿಗೆ ದೈವಸಹಾಯಬೇಕೆ ಹೊರ್ತು ವೈದ್ಯರಿಂದೇನು ಅನುಕೂಲವಾಗುವದಿಲ್ಲ. ಲೋಕನಾಥನು ಈಕೆಯನ್ನು ಸಂರಕ್ಷಿಸಲಿ. ನೀನು ಜಾಗರೂಕಳಾಗಿ ನೋಡಿಕೊಳ್ಳುತಿರು. ತಾನಾಗಿ ಕೆಡಕು ಮಾಡಿಕೊಳ್ಳಲು ಅವಕಾಶಕೊಡದೆ ಸಮೀಪದಲ್ಲೇ ಇರು. ಇನ್ನು ನಾನು ಹೋಗಿಬರುವೆನು.

ಕಂದ ॥ ಮನವಂ ಮುತ್ತುತಲಿರ್ಪುದು ।
ವನಜಾಕ್ಷಿಯ ರೀತಿಗೆ ಕಡುಭಯ ಮತ್ತಿದನುಂ ॥
ಮನದೊಳ್ಬೆಗೆಯುವುದಲ್ಲದೆ ।
ಜನಂಗಳೊಳುಬಾಯ್ದೆರೆದುಸುರಲ್ಕಾಗದು ನಾಂ ॥೧

ನಿಷ್ಕ್ರಾಂತಾ.

೨ನೇ ಸ್ಥಾನ.

ವಲ್ಲಭಪಟ್ಟಣಕ್ಕೆ ಹೋಗುವದಾರಿ.

ಪ್ರವೇಶ.—ಕಳಿಂಗರಾಯ, ವಾಮದೇವ, ನಳ, ಮಿತ್ರ, (ಅವರವರ ಸೈನ್ಯದೊಡನೆ)

ನಳ.– ಮಗಧಸೈನ್ಯದ ಸಮೀಪವನ್ನೈದುತ್ತಿರುವೆವು. ಪ್ರತಾಪರುದ್ರದೇವನು ಅವರ ಮಾವನಾದ ಶೇಖರನು ನಮ್ಮ ಜಯಸಿಂಹ

ಸಹ ಅದನ್ನು ತರುತ್ತಿರುವರು. ತಾವು ಪಟ್ಟ ಸಂಕಟದಿಂದ ಅವರಲ್ಲಿ ಈಗ ಮತ್ಸರವು ಕುದಿಯುತ್ತಿರುವದು. ಈಗವರನ್ನು ನೋಡಿದರೆ, ಕೈಲಾಗದ ಹೆಳವರಿಗೂ, ಲೋಕವ್ಯವಹಾರವನ್ನು ತೊರೆದ ಯತಿಗಳಿಗೂ, ವೀರಾವೇಶಲುಂಟಾಗುವದು.

ವಾಮದೇವ.–ಬನ್ನಿ! ಈಶಾನ್ಯದಿಕ್ಕಿನ ಕಾಡಿನಲ್ಲಿ ಅವರ ಜೊತೆ ಸೇರೋಣ. ಆ ಮಾರ್ಗವಾಗವರು ಬರುತ್ತಿರುವಂತಿದೆ.

ಮಿತ್ರ–ಪ್ರತಾಪಸಿಂಹ ಅವರ ಜೊತೆಯಲ್ಲಿದ್ದಾನೆಂದು ಯಾರಿಗಾದರು ಗೊತ್ತುಂಟೆ?

ಕಳಿಂಗ–ಅವರ ಜೊತೆಯಲ್ಲವನಿಲ್ಲವೆಂದು ನನಗೆ ಚನ್ನಾಗಿ ಗೊತ್ತುಂಟು. ಆ ಬರುತ್ತಿರುವ ಮಗಧಸೈನ್ಯದಲ್ಲಿರುವ ರಥಿಕರ ಹೆಸರಿನ ಪಟ್ಟಿ ನನ್ನಲ್ಲಿರುವದು. ಶೇಖರನ ಮಗನಿಗುವನು. ಅವನ ವಯಸ್ಸಿನ ಇನ್ನೂ ಅನೇಕ ಕುಡಿಮೀಸೆಯ ಹುಡುಗರಿರುವರು. ಆದರೆ ಪ್ರತಾಪಸಿಂಹಮಾತ್ರ ಇಲ್ಲ.

ನಳ.–ದುರುಳನಾದ ಆ ವೀರಸೇನನು ಈ ದಿಗ್ವಿಜಯಕ್ಕೇನು ಮಾಡಬೇಕೆಂದಿರುವನು.

ಮಿತ್ರ–ತನ್ನ ವಲ್ಲಭಪಟ್ಟಣದ ಕೋಟೆಯನ್ನು ಬಲಪಡಿಸುತ್ತಿರುವನು. ಕೆಲವರು ಅವನಲ್ಲಿ ಬುದ್ಧಿವಿಕಲ್ಪವಾಗಿದೆಯೆಂದು ಹೇಳುವರು. ಅವನಲ್ಲಿ ಅಸೂಯೆ ಇಲ್ಲದವರು ಅದನ್ನು ವೀರಾವೇಶವೆಂದು ಹೇಳುವರು. ಅದು ಹ್ಯಾಗಾದರು ಇರಲಿ. ಒಂದುಮಾತ್ರ ನಿಜ. ಅವನ ದುರ್ನಡತೆಯಿಂದಲೇ ಈಗ ಜನರು ಅವನನ್ನು ಬಿಟ್ಟು ಚದರಿಹೋಗುತ್ತಿರುವರು. ಅವರನ್ನೆಲ್ಲ ತನ್ನ ಆಜ್ಞೆಗೆ ಒಳಪಡಿಸಿಕೊಂಡು ಈಗಿನ ಕಾರ್ಯಸಾಧನೆಯನ್ನವನು ಮಾಡಿಕೊಳ್ಳಲಾರ.

ವಾಸುದೇವ.—ವೀರಸೇನನಿಗೆ ಈಗ ಗೊತ್ತಾಗುವದು. ರಹಸ್ಯವಾಗಿ ತಾನು ಮಾಡಿದ ಕೊಲೆಗಳಿಗೆ ತಕ್ಕ ಫಲವನ್ನು ಈಗವನು ಅನುಭವಿಸದೆ ಇರುವದಿಲ್ಲ. ಪ್ರತಿಗಳಿಗೆಯಲ್ಲು ಜನರು ಅವನ ಆಜ್ಞೆಯನ್ನು ತಿರಸ್ಕರಿಸಿ, ಮೋಸಗಾರನೆಂದು ನಿಂದಿಸದೆ ಇರುವದಿಲ್ಲ. ಅವನಾಜ್ಞೆಯಂತೆ ನಡೆಯುವವರುಸಹ ಆಜ್ಞೆಗೆ ಬಳಪಟ್ಟಿರುವರೆ ಹೊರ್ತು ಅವನಲ್ಲಿ ವಿಶ್ವಾಸವನ್ನಿಟ್ಟಿಲ್ಲ. ಈಗವನು ರಾಜಪದವಿಗೆ ಸಲ್ಲದವನಾಗಿದಾನೆ.—

ಕಂದ|| ಆರಡಿಯಾಳಿನ ಕವಚವ |
ಮೂರಡಿಯಾಳ್ಗೊತ್ತಟ್ಟ ತೆರದಿನೆಸೆಯುವದೀಗೀ ||
ಧಾರುಣಿಯನ್ನಾಳುತ್ತಿರೆ |
ಮಾರಿದ ಖಳ ವೀರಸೇನಸಲ್ಲದೆ ಜನರೋಳ್ ||೨||

ನಳ.— ಕೊಂದಿವನೆಸಗಿದ ಪಾತಕ |
ಕಿಂದಿವನೋಳ್ಮನಮುರುಗುತಲದಿವನನೀಗಳ್ ||
ನಿಂದಿಸುತಿರ್ದೊಡೆ ಮುದಕಿವ |
ನಿಂದದಕಾರೇನೆಸಗಿದರೆನ್ನುತ ಬಗೆವಂ || ೩ ||

ವಾಸುದೇವ.— ನಡೆಯಿರಿ ಪದವೀಗಿಟ್ಟ |
ನ್ನೊಡೆಯಂಗರ್ಪಿಸೆ ಮನದನುರಾಗವ ನೀಗಳ್ ||
ದೃಢದಿಂ ಚೆಲ್ಲುವ ನಾವವ |
ನಡಿಗಳಗಾಗೆಂಮೊಡಲಿನ ರಕ್ತವನೆಲ್ಲಂ || ೪ ||

ಕಳಿಂಗ.— ಚೆಲ್ಲುವ ನಡೆಯಿರಿ ರಕ್ತವ |
ನಿಲ್ಲದೆ ನಾವೀಪ್ರತಾಪರುದ್ರನಿಗೀಗಳ್ ||

ಸಲ್ಲದ ಪಾಪಿಯ ರಕ್ತವ ।
ವಲ್ಲಭದೊಳ್ಚೆಲ್ಲುವ ನಡೆಯಿರಿ ಬೇಗನೆನೀವ್ ॥

ನಿಷ್ಕ್ರಾಂತಾಃ ಸರ್ವೆ.

೩ನೇ ಸ್ಥಾನ.

ವಲ್ಲಭಪುರಿ ಅರಮನೆಯಲ್ಲೊಂದು ಕೊಟ್ಟಡಿ.

ಪ್ರವೇಶ.—ಊಳಿಗದವರೊಡನೆ, ವೀರಸೇನ, ವೈದ್ಯ.

ವೀರಸೇನ.— ಇನ್ನು ಯಾವವರ್ತಮಾನವನ್ನೂ ನನಗರಿಕೆಮಾಡಬೇಡಿ. ಎಲ್ಲರೂ ಓಡಿಹೋಗಲಿ. ಬಾಧಕವೇನು.

ಆಜ್ಞಾತ ॥ " ನಡೆಯುತ ವಲ್ಲಭ ಪಟ್ಟಣವಂ ।
ಕಾಡಿನ ವೃಕ್ಷವು ಮುತ್ತದಿರಲ್ " ॥
ಕೊಡುತಿವ ಭೀತಿಗೆ ಚಿತ್ತವಕೇಳ್ ।
ಮಾಡನು ಯೋಚನೆ ಭೂಮಿಯಮೇಲ್ ॥ ೬ ॥

ಆ ಪ್ರತಾಪರುದ್ರನೆಂಬುವನ್ಯಾರು ? ನನ್ನೆದುರಿನ ಹುಡುಗನಲ್ಲವೆ? ಸ್ತ್ರೀಗರ್ಭಸಂಭವನಲ್ಲವೆ ? ಭವಿಷ್ಯತ್ಕಾಲವನ್ನು ತಿಳಿದಿರತಕ್ಕ ಆ ಶಕ್ತಿಗಳು ಏನೆಂದು ಹೇಳಿರುವರು.—

" ಮಡದಿಯ ಗರ್ಭದಿ ಪುಟ್ಟಿದವಂ ।
ಕೇಡನು ಮಾಡನು ವೀರಗೆಕೇಳ್ " ॥

ಎಂದು ಹೇಳಿಲ್ಲವೆ. ಹೀಗಿರುವಲ್ಲಿ ಆ ವಂಚಕರಾದ ಉಪರಾಜರು ನನ್ನಬಿಟ್ಟು ಓಡಿಹೋದರೇನಾಗುವದು ? ಆ ಮಗಧಾಧಮನ ಪಡೆ ಯಂ ಸೇರಿ ಅವರೇನ ಮಾಡಬಲ್ಲರು ?

ಕಂದ|| ನನ್ನೊಳ್ಬಲಿಯಿಸು ಮನಮುಂ |
ನನ್ನೊಳಗಡಗಿರ್ಪ ಗುಂಡಿಗೆಯು ದೃಢತರಮಾ |
ಗೆನ್ನೊಳಗಿರ್ಪುದು ನೀಂ ವೈರಿ |
ದೆನ್ನೊಳು ಗುಮ್ಮನೆನುತಮಿರೆನಾಂ ಹೆದರೆನುಕೇಳ್||

ಪ್ರವೇಶ.—ಪದಾತಿ.

ನಿನ್ನ ಮುಖವನ್ನು ಸುಡುಗಾಡಿನಲ್ಲಿ ಸುಡಬೇಕು. ಎಲೋ! ಗೂಬೆ, ಬಾಣಂತಿಯಂತೆ ಬೆಳ್ಳಗೇತಕ್ಕಿರುವೆ. ಈ ಕಾಮಾಲೆ ನಿನಗೆ ಯಾವಾಗ ಸಂಘಟಿಸಿಕೊಂಡಿತು ?

ಪದಾತಿ.— ಜೀಯ್ಯಾ! ಹತ್ತು ಸಹಸ್ರ ———

ವೀರಸೇನ.— ಗೂಬೆಗಳೇನೊ ?

ಪದಾತಿ — ಜಿಯ್ಯಾ! ಪಡೆ.

ವೀರಸೇನ —ಎಲೋ ಕಾಮಾಲೆ! ಹೋಗು! ಹೋಗು! ಮುಳ್ಳಿನಿಂದಲಾದರು ಮುಖವನ್ನು ಚುಚ್ಚಿ ಅದರಲ್ಲಿ ವೀರಾವೇಶದ ಅರುಣತೆಯಂತೋರಿಸು. ಎಲೋ, ಹೇಡಿ! ಪಡೆ ಅಂದರೇನೊ? ಭಯವೆನ್ನುವದು ನಿನ್ನ ಕಾಮಾಲೆಮುಸಡಿಯಲ್ಲೇ ಹುಟ್ಟಿದಂತಿರುವದಲ್ಲ! ಇನ್ನದನ್ನಾಕಡೆ ತಿರಗಿಸಿಕೊಂಡು ಪಡೆಯಾವದು ಬೊಗಳು.

ಪದಾತಿ.— ಜಿಯ್ಯಾ! ಲಾಲಿಸಬೇಕು. ಮಗಧನಪಡೆಯು———

ವೀರಸೇನ.—ಸಾಕು! ಸಾಕು! ಇನ್ನು ಬೊಗಳಬೇಡ. ನಿನ್ನ ಮುಖವನ್ನು ಆಚೆಗೆ ಸಾಗಿಸು. ಎಲೈ ಪಾರ್ಶ್ವಕ! ಎಲ್ಲಿರುವೆ! ಅವರ ಈ ದಿಗ್ವಿಜಯದಿಂದ ರಾಜ್ಯವು ನನ್ನ ಕೈತಪ್ಪಿಹೋಗುವದು; ಅಲ್ಲದಿದ್ದರೆ ನಾನೇ ಸ್ಥಿರವಾಗಿರುವೆನು. ಇದರಲ್ಲಿನ್ನು ಬಾಳಬೇಕೆಂಬಾಶೆಯು ನನಗಿಲ್ಲ.—

ವೃತ್ತ|| ಧರೆಯುನ್ನಾಳಿದೆ ಸೌಖ್ಯದಿಂ ಬಹುದಿನಂ ಮುಪ್ಪಾಂತು ಕೇಶಾಳಿಗಳ್ | ನರೆತೀಗೆನ್ನೊಳಗಿರ್ಪ ವಿಸ್ಮಿರದ ಮುನ್ನಂ ಬಾಳ್ದೊಡೀ ಸೌಖ್ಯ ನಾಂ || ತೊರೆದೆಂ ಮುಸ್ಸಿಜರಾಸೆಯುಂ ಮುದುಕರೋಳ್ಪ್ರೊತ್ರೀ ಪೊಂದು ಮರ್ಯಾದೆಯುಂ ನರರಿಂ ಮುಂದಿನ ಗಾಗ ದೀಧರಣಿಯುಂ ನಾನಾಳುತಿಸ್ಸಿದ್ರೋಡಂ || ೮ ||

ಪ್ರವೇಶ.—ಪಾರ್ಶ್ವಕ.

ಪಾರ್ಶ್ವಕ —ಮಹಾಸ್ವಾಮಿ! ಆಪ್ಪಣೆ ಏನಾಗುವದು.

ವೀರಸೇನ — ವರ್ತಮಾನವೇನು ?

ಪಾರ್ಶ್ವಕ.— ಜೆಯ್ಯಾ! ಕೇಳಿದ್ದೆಲ್ಲ ನಿಜವೆಂದು ದೃಷ್ಟಾಂತಕ್ಕೆ ಬಂದಿರುವದು.

ವೀರಸೇನ — ಒಳ್ಳೇದಾಗಲಿ.—

ಕಂದ|| ನೀಡೀಗೆನ್ನಯ ಕವಚವ |
ಮಾಡುವೆ ನಾಂ ಯುದ್ಧವ ನಿವರೊಳು ತನುವಿನ ಬಾ|
ಡೀಡಾಡುವವರಿಗೀಗಿ |
ಹೇಡಿಗಳನ್ನೋಡಿಸುವೆನು ಕೊಡು ಖಡ್ಗವನೀಂ||

ಪಾರ್ಶ್ವಕ —ಜೆಯ್ಯಾ! ಇನ್ನು ಅಲ್ಲೆವರಿಗೆ ಬಂದಿಲ್ಲ.

ವೀರಸೇನ.— ಆದರು ತಂದುತೊಡಿಸು,—ಇನ್ನು ಕೊಂಚ ಅಶ್ವಬಲವನ್ನು ಕಳುಹಿಸು.—ಸುತ್ತಣದೇಶವನ್ನೆಲ್ಲಾ ಕದನಕ್ಕೇಳಿಸು.—ಭಯದ ವಿಚಾರವನ್ನೆತ್ತುವರನ್ನೆಲ್ಲ ಶೂಲಕ್ಕೆ ಹಾಕಿಸು.—ಕೊಡು, ನನ್ನಾಯುಧವನ್ನು—ವೈದ್ಯರೆ! ನಿಮ್ಮ ರೋಗಿ ಹ್ಯಾಗಿರುವಳು.

ವೈದ್ಯ — ಮಹಾಸ್ವಾಮಿ! ಅವರಲ್ಲಿ ವ್ಯಾಧಿ ಯಾವದು ಕಾಣಿಸುವ

ದಿಲ್ಲ ನಾನಾಬಗೆಯಾದ ಆಲೋಚನೆಯಿಂದ ಮನಸ್ಸು ಸಂಕಟಪ ಡುತ್ತ ಹೃದಯ ತಲ್ಲಣಿಸುತ್ತಿದೆ.

ವೀರಸೇನ – ಅದನ್ನೇ ವಾಸಿಮಾಡಿ. ಮನೋವ್ಯಥೆಗೆ ತಕ್ಕ ಔಷಧ ವನ್ನು ಕೊಡಿ. ಚಿತ್ತದಲ್ಲಿದು ಬಿಟ್ಟಿರುವ ಮೂಲಗಳನ್ನು ನಿರ್ಮೂ ಲಮಾಡಿ, ಪರಿಪರಿಯಾದ ಆಲೋಚನೆಯು ಸಂಕಟವನ್ನು ಹೋಗ ಲಾಡಿಸಿ ಹೃದಯವನ್ನು ತಲ್ಲಣಿಸುವಬಗೆಗಳನ್ನು ಹೋಗಲಾಡಿ ಸುವಂತ, ಅನುಪಾನ ಲೇಹ್ಯಾದಿಗಳ್ಯಾವದು ನಿಮ್ಮಲ್ಲಿಲ್ಲವೆ?

ವೈದ್ಯ – ಮನೋವ್ಯಥೆಯನ್ನು ರೋಗಿಯೇ ಗುಣಮಾಡಿಕೊಳ್ಳ ಬೇಕಲ್ಲದೆ, ವೈದ್ಯನಿಂದದು ಗುಣವಾಗತಕ್ಕದ್ದಲ್ಲ.

ವೀರಸೇನ.–ಹಾಗಾದರೆ ನಿಮ್ಮೌಷಧವ ನಾಯಿಗೆ ಹಾಕಿ. ನನಗೆ ಒಂದೂ ಅವಶ್ಯಕವಿಲ್ಲ.–ನೀನು ಕವಚವನ್ನಿನ್ನು ತೊಡಿಸು.–– ನನ್ನ ರಾಜದಂಡವನ್ನು ತೆಗೆದುಕೊಂಡುಬಾ.––ಪಾರ್ಶ್ವಕ! ಕಳು ಹಿಸಿದೆಯಾ?–ವೈದ್ಯರೆ! ಉಪರಾಜರು ನನ್ನಬಿಟ್ಟು ಓಡಿಹೋಗು ತ್ತಿರುವರು.–ನೀನಿನ್ನು ಜಾಗ್ರತೆಪಡಿಸು.–ವೈದ್ಯರೆ! ನಿಮ್ಮ ಸಾಹ ಸವನ್ನೆಲ್ಲ ತೋರಿಸಿ ಈ ವ್ಯಾಧಿಯನ್ನು ಗುಣಪಡಿಸಿ.

ಕಂದ॥ ತಿಳಿಯಿರಿ ಜಾಡ್ಯದ ಮೂಲವ ।
ಲಲನಾಮಣಿಯೊಳ್ ಬಿಡದದ ವೈದ್ಯರೆ ಮತ್ತೀ ॥
ಕಳವಳಕವಳಡೆಯಿಂ ಕೊಡ ।
ದೊಲು ತಕ್ಕುದ ಕೊಟ್ಟದ ಗುಣಮನ್ನೆಸಗಿರಿಸೀವ್ ॥

ನುತಿಪೆಂ ನಿಮ್ಮನು ಧರೆಯೊಳ ।
ಗತಿಜಾಣರೆನುತ್ತ ಮುಟ್ಟದು ಮುಗಿಲ್ಗಳ ಮ ॥

ತ್ತಿಶಯದಿಂ ಪಡಿದನಿಗಳ |
ತತಿಯಿಂ ಜಗವನು ಮುಸುಕುತಲಿರ್ಪಾತೆರದಿಂ ||

ಕವಚವನ್ನು ತೆಗೆದುಬಿಡು.—

ಕಂದ|| ಪೇಳಿರಿ ವೈದ್ಯರೆ ಮಾಗಧ |
ಖೂಳರ ಪೊರಮಡಿಸಲೋಧ್ರದಿಂ ಭೇದಿಯ ಜಾ||
ಪಾಳವೊ? ಸುನಾಮುಖಿಯೊ? ಕರ |
ವಾಲವೊ? ಓಥ್ರಕ್ಷದನ್ನು ಪೇಳಿ ಕೊಡಿಸುವೆಂ ||

ವೈದ್ಯರೆ! ಮಗಧಸೈನ್ಯ ಬರುತ್ತಿರುವದು ನಿಮಗೆ ಗೊತ್ತುಂಟೆ?
ವೈದ್ಯ — ಜೆಯ್ಯಾ! ತಾವು ಮಾಡುತ್ತಿರುವ ಯುದ್ಧಸನ್ನಾಹಗಳನ್ನು ನೊಡಿ ಇದೇತಕೆಂದು ವಿಚಾರಿಸಿ ತಿಳಿದು ಕೊಂಡಿರುವೆನು.
ವೀರಸೇನ.—ಇದನ್ನು ನನ್ನ ಹಿಂದೆ ತೆಗೆದುಕೊಂಡು ಬಾ.—

ಕಂದ || ಮರಗಳ್ ಪುರವಂ ಮುತ್ತುವ |
ವರಿಗುಂ ವೀರನ ಮನವನು ಮುತ್ತದು ಭಯವುಂ||
ಅರಿಗಳ ಹತಿಗಂ ಮಿತ್ತುವಿ |
ನುರಿಗಂ ನಾಂ ಹೆದರೆನು ತರುಗಳ್ನಡಿಯದಿರಲ್ ||

ವೈದ್ಯನಬಿಟ್ಟೆಲ್ಲರು, ನಿಷ್ಕ್ರಾಂತಾಃ.

ವೈದ್ಯ.—ಕಂದ || ವಲ್ಲಭವ ಬಿಟ್ಟು ತೆರಳುವೆ |
ನಲ್ಲದೆ ನಾನಿಲ್ಲೆನಿಲ್ಲಿ ಮತ್ತಿಲ್ಲಿಗೆ ನಾ ||
ನೊಲ್ಲೆನಿವಕೊಡುವ ವಿತ್ತವ |
ನೊಲ್ಲೊಲ್ಲೆನು ನಾನು ನಿಲ್ಲೆನಿಲ್ಲೆನು ಹರಿಯೇ ||

ನಿಷ್ಕ್ರಾಂತಃ.

೪ನೇ ಸ್ಥಾನ.

ವಲ್ಲಭಪುರಿಯ ಬಂದು ಕಾಡಿನ ಸಮೀಪ.

ಪ್ರವೇಶ —ಪ್ರತಾಪರುದ್ರದೇವ, ಶೇಖರ ಶೇಖರನಮಗ, ಜಯಸಿಂಹ, ನಳ, ಕಳಿಂಗ, ಮಿತ್ರ, ವಾಮದೇವ ನಂದರಾಜ, ಸೈನ್ಯ.

(ಸೇನಾನಿವೇಶನದ ಅಟ್ಟಹಾಸದೊಡನೆ)

ಪ್ರತಾಪರುದ್ರ —ಎಲೈ ! ಸೇನಾಪತಿಗಳಿರ ! ಮಲಗಿದೆಡೆಯು ನಿರ್ಭಯವಾಗಿರತಕ್ಕಸಮಯ ಸಮೀಪಿಸುತ್ತಿರುವದೆಂದು ನಂಬಬಹುದೊ?

ನಳ.—ಅದರಲ್ಲಿ ಲೇಶವು ಅನುಮಾನವಿಲ್ಲ.

ಶೇಖರ —ಅಲ್ಲಿ ಕಾಣಿಸುವ ಕಾನನವ್ಯಾವದು.

ನಳ —ವಲ್ಲಭೆಯ ಈಶಾನ್ಯದಿಕ್ಕಿನ ಕಾಡು.

ಪ್ರತಾಪರುದ್ರ —ಈ ಕಾಡಿನಲ್ಲಿ ಪ್ರತಿಯೊಬ್ಬನು ಬಂದೊಂದು ಕೊಂಬೆಯನ್ನು ಕಡಿದು ಕೈಲಿ ಹಿಡಿದುಕೊಂಡು ಶತ್ರುವಿಗೆ ನಮ್ಮಸಂಖ್ಯೆ ತಿಳಿಯದ ಹಾಗೆ ವಿಶೇಷವಾಗಿರುವಂತೆ ತೋರ್ಪಡಿಸಿಕೊಳ್ಳುತ್ತ ಮುಂದಕ್ಕೆ ತೆರಳಿ *

ಸೈನ್ಯ —ಅಪ್ಪಣೆ ‡

ಶೇಖರ.—ಆ ಖೂಳ ವೀರಸೇನನು ನಮ್ಮ ಮುತ್ತಿಗೆಯನ್ನು ನಿರೀ

---

* ರೂಪಕತಾಳ, ಜುಂಜೋಟಿಚಾಲ್. ಧಾಟಿ.—ಚಲಾವ್, ಚಲಾವ್, ಚಲಾವ್. ನಡೀರಿ ನಡೀರಿ ನಡೀರಿ । ನಗಾರಿ ಹೊಡೀರಿ ‖ಪ‖ ಕೊಡಲಿಯಿಂದ ಕೊಂಬೆ ಕಡಿದು ಪಿಡಿದು ಕಯ್ಯೊಳುಂ ‖ ೧ ‖ ಪಡೆಯು ಕಾಣದಂತೆ ಮರೆಯನೆಸಗಿ ಕೊಂಬೆಯಿಂ ‖ ೨ ‖ ಪಡೆಯ ಸಂಖ್ಯೆ ಪಗೆಗೆ ತಿಳಿಯ ದಿರುವತೆರದೊಳುಂ ‖ ೩ ‖

‡ ರಾಗ —ಹಿಂದುಸ್ಥಾನಿ ಜುಂಜೋಟಿನೋಟು, ಏಕತಾಳ. ಧಾಟಿ.— ಜಕಮಿಮೇಗಂಪೆನಾಸಿತಂಪೆ—

ಧೀರ ವೀರ ಶೂರರೆಲ್ಲ ಕೊಂಬೆ ಕಡಿಯುವ ‖ ಪ ‖ ಕೊಡಲಿ ಮುಚ್ಚಿನಿಂದ

ಕ್ಷಿಸಿಕೊಂಡು ವಲ್ಲಭಪುರಿಯಲ್ಲೇ ಧೈರ್ಯದಿಂದಿರುವನೆಂದು ಮಾತ ವರ್ತಮಾನ ತಿಳಿದಿರುವದು.

ಪ್ರತಾಪರುದ್ರ—ಅವನಿಗಿರತಕ್ಕದ್ದದೊಂದೇಮಾರ್ಗ. ಅದನ್ನು ಬಿಟ್ಟರೆ ಮತ್ತೆ ಬೇರೆ ಇಲ್ಲ.—

ಕಂದ ॥ ಸಮಯವ ನೋಡೀಗವನಿಂ ।
ಗಮಿಸುತಲಾಬಾಲ ವೃದ್ಧರೆಲ್ಲರಿರುವರು ॥
ಶ್ರಮದಿಂದಿವನೊಡವೆರೆದೀ ।
ಸಮರವ ಮಾಳ್ಪರವರಲ್ಲದಿಲ್ಲಕ್ಕರೆಯುಂ ॥೧೪॥

ಜಯಸಿಂಹ— ನುಡಿಯಿಂ ಪೇಳುತಲಿರ್ಪುದ ।
ನಡೆಯೊಳ್ತೋರುವ ಕಡುಗಲಿಗಳ ನೀವಿನ್ನಿ ॥
ಟ್ಟಡಿಯಂ ನಡೆಯಿರಿ ನಡುಗಿಸಿ ।
ಪೊಡವಿಯ ಕದನದ ಕವಚವ ಕಡುಮೈಸಿರಿಯೊಳ್ †

ಕಡಿದು ಕೈಲಿ ಹಿಡಿಯುವ ॥ ಅ ॥ ಅತ್ತ ಆಲ ಮತ್ತ ಮರವ ಮುತ್ತಿ ತರಿಯುವ । ಕಾಡು ಮರವನೆತ್ತ ತರಿದು ಎತ್ತಿ ಹಿಡಿಯುವ ॥೧॥ ಬಿಕ್ಕೆ ಬ್ಯಾಲ ಎಕ್ಕ ಲಕ್ಕಿ ಬಕ್ಕಲಿಕ್ಕುವ । ಕಕ್ಕ ಮಿಕ್ಕ ಯಾಗುವಂತೆ ಕಾಲನಿಕ್ಕುವ ॥೨॥ ಕಡಿದು ಮುರಿದು ಮರವ ತರಿದು ಪಡೆಯ ನಾಶಿಸುವ । ಅಡಗಿ ಕೊನೆಗಳೊಳಗೆ ನಾವು ಪೊಡವಿ ಬಳಸುವ ॥೩॥

† ರಾಗ.—ಶಂಕರಾಭರಣ ನೋಟು, ಏಕತಾಳ. ಧಾಟಿ.—

ಬದುಕಿದೆ ಬದುಕಿದೆ ನಾನಿಂದು

ಕಳೆವುದು ಕಳೆವುದ ಕಾಲವು । ಕಳೆವುದು ಕಳೆವುದು ಕಾಲವು ॥ಪ॥ ವೇಗನೇಳಿ ವೀರಸೇನ ಬಾಳುತಿರ್ಪ ಭೂಮಿಯಲ್ಲಿ ಬಿಟ್ಟುಮಾತ ಶೌರ್ಯವನ್ನು ತೋರುವ ನಾಪಕತ್ತಿಯೊಳು ॥೧॥ ಖೂಳನನ್ನು ಕೊಲ್ಲದೆನ್ನ ಪತ್ನಿ ಪುತ್ರರಿಂಗೆ ನಾನು ನೀಡೆನೈಯ್ಯ ತರ್ಪಣವ ಏಳಿರಿ ನೀವ್ ಬೇಗದೊಳು ॥೨॥

ಶೇಖರ.—ಕಂದ || ಒದಗುತಲಿದೆ ಕಾಲವು ನ |
ಮ್ಮಗೆಯೊಳ್ಪರಿಯುವ ರಕುತದ ಬಿಸಿಯುಂ ತೋರಲ್||
ಎದುರಿಸಿ ಪಗೆಯಂ ತಿಳಿಯುವ |
ಕದನದೊಳೀಗೆಮ್ಮಯ ಕಡುತೋಳಿನ ಬಲವಂ ||೧೭ §

ಸಲ್ಲು ತಬಗೆಯೊಳಗಿಪುದೀ |
ಗಿಲ್ಲದುದೆಲ್ಲವು ನಿಜವಿಂದು ವೆಂಬುದ ನಾವ್ಕಾ ||
ದಲ್ಲದೆ ತಿಳಿಯಲ್ಕಾಗದು |
ವಲ್ಲಭದೆಲ್ಲೆಗೆ ತೆರಳರಿ ಬಲ್ಲಿದ ಭಟರುಂ ||೧೮|| §

ನಿಷ್ಕ್ರಾಂತಾಃಸರ್ವೇ.

§ ರಾಗ.—ಜಾಂಜೋಟಿ ನೋಟು, ಏಕತಾಳ.

ನಡೆನಡೆ ನಡೆಸುತ ಪಡೆಯನು | ನಡೆನಡೆ ನಡೆಸುತ ಪಡೆಯನು ||ಪ|| ಒದಗುತಲಿರ್ಪುದು | ಕಡಿದಹ ಕೃತ್ಯವು | ಪುರವನು ಮುತ್ತುವ | ಪಗೆಯನು ನೋಡುವ ||೧|| ನುಡಿದಿಹ ಮಾತಿನ | ನಿಜವನು ತೋರಿಸಿ | ಖಳನನು ಕೊಲ್ಲುವ | ಪೊಡವಿಯ ಗೆಲ್ಲುವ ||೨|| ಬಿಡುತಿಹ ಬಾಣಕೆ | ಮಡಿವರನೇಕರು | ಹರಿತದ ಶೂಲಕೆ ತುರಗಗಳ್ಬಾಳವು ||೩|| ಹೊಡೆಯುವ ಗುಂಡಿಗೆ | ಪುಡಿಪುಡಿ ಕೋಟೆಯು ಮದಗಜ ದಂಡೊಳು | ಮಡಿವವನೇಕವು ||೪|| ಪಿಡಿಯುತ ಕೋವಿಯ | ಕುದರಿಸಿ ರಂಜಕ | ಸುಡುವುದ ದಾರಿಲಿ | ಬರುತಿಹ ವೀರರ ||೫|| ಒಡೆಯನ ಉಪ್ಪಿಗೆ | ರಕುತವ ಚಲ್ಲಿರಿ | ಬರುತಿಹ ಗುಂಡಿಗೆ | ಎದೆಯನು ಒಡ್ಡಿರಿ ||೬||

೨ನೇ ಸ್ಥಾನ.

ವಲ್ಲಭಪುರಿ ಕೋಟೆ.

ಪ್ರವೇಶ.—(ಸೇನಾನಿವೇಶನಸೂಚಕನೆಯೊಡನೆ) ವೀರಸೇನ, ಪಾರ್ಶ್ವಕ, ಸೈನ್ಯ.

ವೀರಸೇನ.—ನಮ್ಮ ಪತಾಕೆಗಳನ್ನೆಲ್ಲ ಹೊರಗಣ ಪ್ರಾಕಾರದಲ್ಲೆತ್ತಿ ಕಟ್ಟು. "ಬರುವರು," "ಬರುವರು," "ಬರುವರು" ಎಲ್ಲರ ಬಾಯೊಳಲ್ಲು ಬರುವರೇ ಇರುವದು. ಬಂದರೇನು ? ನಮ್ಮ ಕೋಟೆ ಬಲವನ್ನು ನೋಡಿದರೆ ಅದಕ್ಕೆ ಮುತ್ತಿಗೆ ಹಾಕಲು ಬರುವವರ ಆ ಮೂಢತನಕ್ಕೆ ನಗಬೇಕು. ಕ್ಷಾಮದಿಂದಲು ಕ್ಷುದ್ರರೋಗದಿಂದಲು ನಮ್ಮ ಅಗಳನಲ್ಲಿ ಆ ಬರುವವರೆಲ್ಲರು ಸಾಯುವವರಿಗೆ ಮುತ್ತಿಗೆ ಹಾಕಿ ಬಿದ್ದಿರಲಿ. ನಮಗೆ ಪಡಿಬಲರಾಗಿದ್ದವರು, ಈಗ ಆ ಬರುವ ವರನ್ನೊಳ್ಳೈಸದಿದ್ದರೆ ಆ ಬರುವ ನಾಯಿಗಳನ್ನು ಆ ಬರುತ್ತಿರುವ ದಾರಿಯಲ್ಲೇ ಬಡಿದು ಓಡಿಸಬಹುದಾಗಿತ್ತು. ಆ ಶಬ್ದವೇನು ?

(ಒಳಗೆ ಸ್ತ್ರೀರೋದನವಾಗುವದು.)

ಪಾರ್ಶ್ವಕ.—ಅಯ್ಯೋ ! ಸ್ತ್ರೀಯರ ರೋದನ.

ವೀರಸೇನ.—ಭಯವೆನ್ನುವದನ್ನೇ ನಾನು ಮರೆತು ಬಿಟ್ಟೆ. ನನ್ನ ಸ್ವಭಾವವೆ ವ್ಯತ್ಯಾಸವಾಗಿರುವದು.—

ಕಂದ ‖ ಬೆದರುತ್ತಲಿರ್ದುದು ಮನಂ ।
ಹೆದರದು ಗದರಿಕೆಯು ಕೇಳ್ದೊಡೆ ನಿಶೀಥಿನಿಯೊಳ್ ‖
ಮೊದಲೀರೋಮಾಳಿ ಸೆಣಸು ।
ತಿದಿರೇಳುತ್ತಿರ್ದವು ಭಯಮಾತಿಂಗೆದೆಯೊಳ್ ‖೧೯‖

ಬೆಳೆದಿಹುದೆನ್ನೀ ತನುವಿಳ್ ।
ಯೊಳು ಭೀಕೃತಿಯನು ಮೆಲ್ದು ಮನುದಿನಂ ‖

ಬೆಳೆದಿಹುದದರೊಳ್ಮನವುಂ । [ಶಂ ||೨೦||
ಕಳೆಯುತ ಕಾಲವನು ಬಗೆಬಗೆದು ಕೊಲೆಯುಮನಿ

ಅದುಕಾರಣ ಭಯವೆನ್ನುವದು ನನಗೆ ಹ್ಯಾಗೆ ತೋರುವದು. ಆ ಧ್ವನಿ ಯಾತಕ್ಕಾಯಿತು.

ಪಾರ್ಶ್ವಕ —ಜಿಯ್ಯಾ ! ಮಹಾರಾಣಿಯವರು ಗತಿಸಿಹೋದರಂತೆ.

ವೀರ.—ಇದು ಮುಂದಾಗಬಹುದಾಗಿತ್ತು. ಈ ವಾರ್ತೆಯನ್ನು ಇನ್ನು ಕೆಲವು ಕಾಲ ಕಳೆದ ನಂತರ ಕೇಳಬೇಕಾಗಿತ್ತು.—

ಕಂದ ॥ ಇಂದೆಂದು ನಾಳೆ ನಾಳೆಂ ।
ದೆಂದಾಯುಷ್ಯ ಕಳೆವುದೆಮಗಿಳೆಯೊಳ್ದಿನವುಂ ॥
ಪಿಂದಾದ ದಿನಗಳಲ್ಲೊಂ !
ದೊಂದೆ ಕಳೆದು ಪ್ರೋಗಿ ಮೋಸಗೈದಿಹವೆಮ್ಮಂ ॥

ಮಾಳ್ಪ ನಿದೊಮಾಳ್ಪ ಮುಂದಿದ ।
ಮಾಳ್ಪ ನೆನುತ ಕಾಲವಂ ನರನು ಕಳೆಯುತಿರಲ್ ॥
ಕೇಳ್ವುದೆ ಪೇಳ್ಮತ್ತದನಂ ।
ಸೀಳ್ವುದದುಂ ಕಾಲವೊದಗೆ ನರರನ್ನಿಳೆಯೊಳ್ ॥

ನಾಟಕದೊಳ್ನಟಿಸುತ ತ ।
ನ್ನಾಟವನು ನಡೆ ನುಡಿ ನೋಟದಿಂ ನಟ ತೋರ್ಪ ॥
ಮಾಟವೆಲೆ ಜೀವ ಕೇಳ್ನ ।
ನ್ನಾಟ ವಿದಕೆ ಕೋಟಲೆಯು ಪಡುತಿರಲ್ಫಲವೇಂ ॥

ಅಡಗಡಗು ಜೀವದೀಪವೆ ।
ಕಡೆಯಾಯ್ತಾಗೆನ್ನ ನಿನ್ನೊಳಿರ್ದುದದೆಲ್ಲಂ ॥

ನಡೆತರ್ಪ ಪಡಿನೆಳಲು ನೀಂ ।
ಕಡೆಯೊಳಡಗದಿರ್ಪ್ಪೆಯ ದೃಢವಾಗಿ ಪೊಡವಿಯೊಳ್
ಭಂಗಿಯನು ಮೊಲ್ದವನ ಮನ ।
ಭಂಗಿಯೊಲಿರ್ಪುದು ಕಣಾ ಜನಕೆ ಧರೆ ಮಾಯಾ ॥
ಭಂಗಿಯಲಿ ಶಿಲ್ಕಲದರೊಳ್ ।
ಭಂಗುರವೆಲೆ ಜೀವ ಕೇಳ್ಕನಗದರ ಪರಿಯುಂ ॥

ಪ್ರವೇಶ — ಪದಾತಿ.

ನಿನ್ನಲ್ಲಿ ನಾಲಿಗೆಯಿದೆ ಯೆಂದು ತೋರಿಸಿಕೊಳ್ಳಲು ಬಂದಿರುವೆ. ಆಗಲಿ,—ನಿನ್ನ ವರ್ತಮಾನವೇನು ಹೇಳು.

ಪದಾತಿ —ಜೆಯ್ಯಾ ! ಕಣ್ಣಾರ ನಾನು ಕಂಡದ್ದನ್ನು ವಿಜ್ಞಾಪಿಸಲು ಬಂದಿಗುವೆ ; ಆದರೆ ಅದನ್ನು ಹ್ಯಾಗೆ ಅರಿಕೆಮಾಡಬೇಕೊ ತಿಳಿಯದು.

ವೀರ.—ಶಾಬಾಸು ಧೀರ ! ಪ್ರಯತ್ನವಾದರು ಪಟ್ಟು ಹೇಳು.

ಪದಾತಿ —ನಾನು ಕಾವಲಿದ್ದ ಗುಡ್ಡದಮೇಗಳಿಂದ ಈಶಾನ್ಯದಿಕ್ಕನ್ನು ನೋಡಿದೆ. ಆ ದಿಕ್ಕಿನ ಕಾನನವು ನಡೆದು ಬರುವಂತೆ ನನಗೆ ಕಾಣಿಸಿತು.

ವೀರ.—ಗುಲಾಮನೆ ! ಸುಳ್ಳು ಬೊಗಳಬೇಡ. (ಹೊಡಿಯುವನು)

ಪದಾತಿ.—ಜೆಯ್ಯಾ ! ಇದು ಸುಳ್ಳಾದರೆ, ತಮ್ಮಾಕ್ರೋಶಕ್ಕೆ ನಾನೀಡಾಗಿರುವೆನು. ತಾವೆ ಪರಾಂಬರಿಸಬಹುದು. ಇಲ್ಲಿಗೆಮೂರು ಮೈಲಿಗಳಲ್ಲಿ ಮರಗಳು ಬರುತ್ತಿರುವವು.

ವೀರ.—ಇದೇನಾದರು ಸುಳ್ಳಾದರೆ ಮೊದಲು ಸಿಕ್ಕುವ ಮರಕ್ಕೇನೆ ನಿನ್ನ ನೇಣುಹಾಕಿಸುವೆ. ನಿಜವೇನಾದರು ಆದರೆ ನನಗೆ ಆ ಕೆಲಸ

ವನ್ನು ನೀನು ಮಾಡಿಸಿದರೂ ಸಮನೆ; ನಾನು ಚಿಂತಿಸತಕ್ಕವನಲ್ಲ. ನನಗೇತಕ್ಕೋ ಅನುಮಾನ ತೋರುವದು. ಆ ಪಿಶಾಚಿಗಳು ಅನೃತಗರ್ಭಿತ ನಿಜವನ್ನು ದ್ವಂದ್ವಾರ್ಥದಿಂದ ಸೂಚಿಸಿ ನನ್ನನ್ನು ಮೋಸಪಡಿಸಿದಂತೆ ಕಾಣುವದು.—

“ ನಡೆಯುತ ವಲ್ಲಭಪಟ್ಟಣವಂ ।
ಕಾಡಿನ ವೃಕ್ಷವು ಮುತ್ತದಿರಲ್ ॥
ಕೆಡಕಿಗೆ ಸಿಕ್ಕನು ವೀರನು ಕೇಳ್ ।
ಖಂಡಿತ ನಂಬಿಗ ಪೋಗುವೆ ನಾಂ ॥ ”

ಎಂದವರು ಹೇಳಿದರು. ಅದರಿಂದ ಮರಗಳು ನಡೆಯುವದು ಹ್ಯಾಗೆ ಅಸಾಧ್ಯವೋ ವೀರಸೇನನಿಗೆ ಕೆಡಕುಮಾಡುವದು ಅಸಾಧ್ಯವೆಂದು ಅರ್ಥವಾಗುವದು. ಆದರೆ ಮರಗಳೀಗ ವಲ್ಲಭಗೆ ನಡೆದು ಬರುತ್ತಿರುವವು. ಏಳೇಳಿ! ಆಯುಧಪಾಣಿಗಳಾಗಿ. ಸಮರಕ್ಕೆ ಸಿದ್ಧವಾಗಿ ಹೊರಡಿ.

ಕಂದ ॥ ಚರನಿವ ಪೇಳಿದ ವಾರ್ತೆಯು ।
ಖರೆಯಾದೊಡೆ ನಾಂ ಕೊಳುಗುಳವಂ ಮಾಡುತಲೀ ॥
ಪುರದಲ್ಲಿನ್ನಿರ್ಪುದರೊಳ್ ।
ತೊರೆಯುತದನ್ನಾಚೆ ಪೋಪುದರೊಳೊಂದೆ ಫಲಂ ॥

ಬೇಸರ ಮಾಗುತ್ತಿದೆ ಭೂ ।
ತೇಶನೆ ನಾಂ ವಾಸಿಸುತಿಹುದೀ ಧರೆಯೊಳ್ ನೀಂ ॥
ನಾಶಕೆ ಸಿಲ್ಕಿಸುತದರೀ !
ವಾಸನೆ ಮುತ್ತಿಲ್ಲದಂತೆ ಮಾಡ್ಕೈ ಜಗವಂ ॥೨೫॥

ಭೇರ್ಯಾದಿಗಳಂ ಘೋರ್ಗರಿಸಿ, ದಿಕ್ತಟಗಳು ತಲ್ಲಣಿಸುವಂತೆ ಲೋಕ ವಿನಾಶ ಸೂಚನೆಯನ್ನು ಮಾಡಿ.

ಕಂದ ॥ ದೃಢದಿಂ ಖಡ್ಗವ ಪಿಡಿಯುತ ।
ಜಡಿದೀ ವೈರಿಗಳಸುವನು ಪೀರುತ ನಾನೀ ॥
ಪೊಡವಿಯ ನಡುಗಿಸದಲ್ಲದೆ ।
ಬಿಡೆನೀ ತನುವಂ ಪೊಡೆಯಿರಿ ಭೇರಿಯ ನೀಗಳ್ ॥

ನಿಷ್ಕ್ರಾಂತಾಃ ಸರ್ವೇ.

೬ನೇ ಸ್ಥಾನ.

ವಲ್ಲಭಕೋಟೆ ಮುಂದಣಬೈಲು.

ಪ್ರವೇಶ –(ಸೇನಾನಿವೇಶನಧ್ವನಿಯೊಡನೆ) ಪ್ರತಾಪರುದ್ರದೇವ, ಶೇಖರ, ಜಯಸಿಂಹ ಮೊದಲಾದ ಉಪರಾಜರು, ಕೈಲಿ ಕೊನೆಗಳನ್ನು ಹಿಡದಿರುವಸೈನ್ಯ

ಪ್ರತಾಪರುದ್ರ –ಸಮಿಾಪವಾಯಿತು. ಕೊನೆಗಳನ್ನು ಬಿಸಾಟು ಪ್ರತ್ಯಕ್ಷವಾಗಿ. ನಮ್ಮ ಮಾವಾಜಿಯವರು ತಮ್ಮ ಮಗನೊಡನೆ ಮುಂಭಾಗದ ಸೈನ್ಯದಿಂದ ಯುದ್ಧವನ್ನು ಪ್ರಾರಂಭಿಸುವರು. ಹಿಂಭಾಗದ ಸೈನ್ಯವನ್ನು ನಿಮ್ಮ ಬತ್ತಾಸೆಗೆ ಜಯಸಿಂಹನೊಡನೆ ನಾನು ತರುತ್ತಿರುವೆನು. *

---

* ಶಂಕರಾಭರಣ ನೋಟು, ರೂಪಕತಾಳ. ಧಾಟಿ.–

ಚಲಜಂಗವುಪರ ಜಂಗವುಪರ–

ಎಲ ಧೀರ ಪಡೆಯೆ ದಂಡೆಗೆಸಗಿ ಬಂದೊ ನಾವೀಗ ॥ ಪ ॥ ಕೊನೆಯನ್ನು ಎಸೆ ದೀಗ ಪಡೆಯು ತೋರಿ ಶೌರ್ಯವ ॥ ೧ ॥ ಪಡೆಯನ್ನು ಮೊದಲು ಮಾವ ಕರೆದೊಯ್ವ ಯುದ್ಧಕೆ ॥ ೨ ॥ ಜಯಸಿಂಹನೊಡನೆ ಪಡೆಯನಡೆಸಿ ಪಿಂದೆ ಬರ್ಪೆನು ॥ ೩ ॥

ಜಯಸಿಂಹ.—ರಣಭೇರಿಗಳನ್ನು ಹೊಡದು ತುತೂರಿಗಳನ್ನೂದುತ್ತ ಸೈನ್ಯಕ್ಕೆ ವೀರಗಳೆ ತುಂಬಿ. †

ಶೇಖರ.— ದಿಗ್ವಿಜಯುಮಸ್ತು. ಆ ಖಳನ ಬಲವು ನಮಗೀ ದಿವಸ ಗೋಚರವಾಗಲಿ, ಗೆಲ್ಲುವೆವೊ ಸೋಲುವೆವೊ ಗೊತ್ತಾಗುವದು $

ನಿಷ್ಕ್ರಾಂತಾಃ ಸರ್ವೇ.

———()———

೨ನೇ ಸ್ಥಾನ.

ಯುದ್ಧರಂಗ.

ಪ್ರವೇಶ.— ವೀರಸೇನ.

ಕಂದ ‖ ಬೋನಿನ ಪೆರ್ಬುಲಿಯಂತಿಹೆ ।
ನಾನೀಗಳ್ ಪಗೆಗಳೆನಗೆ ಮಾಡಿದ ಬೋನಿಂ ‖

---

†. ಹಿಂದುಸ್ಥಾನಿನೋಟು, ಏಕತಾಳ.—ಧಾಟಿ .
ಸಬ್ ಜಂಗಲ್ ಸಾರಧುಂಡಿಂಗೆ—

ಎಲವೂದೊ ನೀನು ತತ್ತೂರಿ । ಪಗೆಯನ್ನು ನಾನು ಕೊಲ್ಲುವೆ । ತೋರಿ ಗುಂಡ ತೇಜೆಸಿಪಾಯ್ಗೆ । ಭಲ ವೂದು ನೀ ಮತ್ತುತ್ತೂರಿ । ಹೊಡೆ ಡಂಕವ ನೀ ನೀ ನೀ ನೀನು ‖

$ ರಾಗ. ಏಕತಾಳ.

ಹಲ್ಲಮಾಡೆ ನಿಲ್ಲಿದೆಲ್ಲ ಪೋಗಿ ಭಿಲ್ಲರೀಗ ‖ ಪ ‖ ವಲ್ಲಭಗೆ ಮಲ್ಲರೆಲ್ಲ ‖ ಅ ‖ ಭಿಲ್ಲರೆ ನೀವು । ಎಲ್ಲೆಯೊಳಗಿರುತ । ಎಲ್ಲಿ ನೋಡಲಲ್ಲಿ । ಭಲ್ಲೆಯಲ್ಲಿ ಕೊಲ್ಲಿ । ಹಲ್ಲ ಹತ್ತಿ ನಿಲ್ಲಿ । ಮಲ್ಲ ಯುದ್ಧದಲ್ಲಿ । ಕೊಲ್ಲಿ ಮಲ್ಲರೆಲ್ಲ ‖ ೧ ‖ ಮುತ್ತಿ ಪುರವನ್ನು । ಸುತ್ತ ಬಳಬಳಸಿ । ಸುತ್ತ ಮುತ್ತ ಮುತ್ತಿ । ಎತ್ತ ನೋಡಲತ್ತ । ಕತ್ತಿಯನೀವೆತ್ತಿ । ಬತ್ತಿ ಬರುವತೊತ್ತ । ನೆತ್ತಿಯನ್ನು ಕತ್ತಿ ‖ ೨ ‖

ಕಾನನವಂ ಕಾಣುವೆ ನೀಂ |
ಮಾನವರಾ ಬೋನ ಮುರಿದು ಧೈರ್ಯದೊಳನಾನ್ಕು ||

ಮುಡದಿಯುದರದೊಳ್ಪುಟ್ಟದ |
ಕಡುಗಲಿ ನಮ್ಮಾ ಪೊಡವಿಯುಲಿರ್ಪಂಗಡ ನಾಂ ||
ಪಡೆನವಗಲ್ಲದೆ ಭೀತಿಯು |
ಪೊಡವಿಯನಾಳ್ದವನ ಹುಡುಗನೀ ಪಡೆಗೆಲ್ಲಂ ||೩೦||

ಪ್ರವೇಶ.—ಶೇಖರನಮಗ.

ಶೇಖರನಮಗ.—ನಿನ್ನ ಹೆಸರೇನೊ ? *

ವೀರ—ಹೋಗು ! ಹೋಗು ! ನಿನಗ್ಯಾತಕ್ಕಮು. ನೀನೆಲ್ಲಾದರು ಮೊದಲೆಗಿದಲೆ ಬಡಿ ಹೋಗು. ನನ್ನ ಹೆಸರಕೇಳದ ಮಾತ್ರಕ್ಕೆ ನಿನ್ನ ಜಂಘಾಬಲ ತಪ್ಪಿ ಹೋಗುವದು.

ಶೇಖರನಮಗ.— ನುಡಿಯುಲ ನಿನ್ನಯು ಪೆಸರೇಂ |
ಪೊಡವಿಯು ಬಾಧಿಸಿ ನರಕದೊಳಗೀಗಡಗಿರ್ಪಾ ||
ದೃಢದಾನವ ಧೀರರೊಳಂ |
ಕಡುಗಲಿಯಾದೊಡೆಯು ನೀನು ನಾಂಹೆದರೆನು ಕೇಳ್ ||

---

* ಲಾವಣಿ, ಏಕತಾಳ.

ಯಾರೊ ಎಲ್ಲಿಗೆ ಪೋಗುವೆ ಉಸುರೆಲ ನೀನು| ಖಳ ವೀರಸೇನನು ಎಲ್ಲಿಹ ಪೇಳೆಲೊ ಬೇಗ | ಬರಿದೇಕೆ ತಲೆಯನು ತೂಗುತಲಿರುವೆಲ ನೀನು | ನನ್ನ ತೋಳು ತೀಟೆಯು ಕಳೆಯುಲು ಬಲ್ಲೆನೊ ಪೇಳೊ | ಬಲು ವಾರೆ ನೋಟದಿ ನೋಡುವೆ ನನ್ನನು ಯಾಕೆ | ರಣಧೀರಶೇಖರಪುತ್ರನು ಕಾಣೆಲೊ ನಾನು| ಇದಿರಾಳು ಮಲ್ಲೊಳೆಯು ಮುರಿಯದೆ ಬಿಡದವ ಕಾಣೊ | ಎಲವೇಳೊ ನಿನ್ನಯು ನಾಮವ ನನ್ನೊಡ ನೀಗ | ಬೇಗ ||

ವೀರ — ಎಲ! ನನ್ನನ್ನು ವೀರಸೇನನೆಂದು ತಿಳಿ.

ಶೇಖರನಮಗ.— ನೀನೆ,ನೊ? ಆ ಹೆಸರಿನ ಹೇಡಿ. ಆ ಹೆಸರಿನವನಿಗಿಂತಲು ಅಧಿಕವಾದ ದ್ವೇಷಿ ನನಗ್ಯಾರು ಇಲ್ಲ. ಅವನನ್ನೇ ಹುಡುಕುತ್ತಿದ್ದೆ.

ವೀರ.— ಆ ಹೆಸರಿಗಿಂತಲು ಅಧಿಕವಾದ ಭಯುವನ್ನುಂಟುಮಾಡುವ ಮತ್ತೊಂದು ಹೆಸರಿಲ್ಲವೆಂದು ಹೇಳು, ನಿಜವಾಗಿರುವದು.

ಶೇಖರಕನಮಗ.—ಎಲಾ! ಖೂಳ, ಇದು ಸುಳ್ಳೆಂದು ನನ್ನ ಕತ್ತಿ ಮೊನೆಯಲ್ಲಿ ಸಾಧಿಸುವೆನು ನೋಡು. *

(ಜಗಳವಾಡುವರು. ಶೇಖರನಮಗ ಹತನಾಗುವನು.)

ವೀರಸೇ —ಕಂದ॥ ಮದವಾರಣ ಪ್ರೊಕ್ಕಂತಿದೆ ।
ಕದಳಿಯುವನವಂ ಖಡುಗವ ವಲ್ಲಭ ಪಿಡಿಯಲ್ ॥
ಉದುಭವಿಸಿದಂ ನಿಜಮಡದಿ ।
ಯುುದರದೊಳವ ಕದನವನ್ನು ಮಾಳ್ಪರು ಬರಿದೇ॥

ನಗದಿರ್ಪನೆಂತು ನೋಡಿ ಬ ।
ಣಗುನರರಂ ವೀರಸೇನನಿನ್ನುಂ ಪುಡುಕಲ್ ॥
ಮಗಧನ ಪಡೆಯೊಳಗಿಲ್ಲೀ ।
ನಗರಾಜನ ಗೆಲ್ವ ಧೀರ ದಂಭೋಳಿ ಕರಂ ॥ ೩೩ ॥

ನಿಷ್ಕ್ರಾಂತಃ.

---

* ರಾಗ. ಖರಹರಪ್ರಿಯ, ರೂಪಕತಾಳ.

ಬಲ್ಲ ಬಲ್ಲೆ ನಿನ್ನ ನಿಲ್ಲೊ । ಬಲ್ಲೆ ಬಲ್ಲೆ ನಿಲ್ಲೆಲ ॥ಪ॥ ಎಲ್ಲಿ ಇನ್ನು ನಿಲ್ಲೆಲ ಮಲ್ಲ ಯುದ್ಧ ಮಾಡೆಲ ॥ ಅ ॥ ಕರದ ಕತ್ತಿ ಮೊನೆಯೊಳು । ತರಿದು ನಿನ್ನ ಧರೆಯೊಳು । ಒರೆದನುಡಿಯು ನಿಜವನು । ಭರದೆ ತೋರಿ ಬಿಡುವೆನು॥

ಪ್ರವೇಶ —ಜಯಸಿಂಹ.

ಎಲ್ಲಿ ನೋಡಿದರೂ ವೀರಸೇನ ಸಿಕ್ಕಲಿಲ್ಲವಲ್ಲ. ಈಗೆಲ್ಲಿರಬಹುದು. ಆಕಡೆ ಏನೋ ಶಬ್ದವಾಗುತ್ತಿರುವದು.

ಕಂದ || ತೋರೆಲೆ ಮುಖವಂ ಖಳನೆ |
ಧಾರುಣಿಯೊಳ್ನನ್ನಯ ಹತಿಯಿಂಗಲ್ಲದೆ ನೀಂ ||
ರೌರವಕೀಗೀಡಾದೊಡೆ |
ಸೇರಿಸರೆನ್ನಂ ಸುತಸತಿಯರ್ಸಗ್ಗಕೆದಲ್ ||೩೪||

ಬರೆಯಿಂ ತೆಗೆವೆನು ಕತ್ತಿಯ |
ಮುರಿಯಲ್ಬಳವೀರಸೇನನೆಲುಬುಗಳದರಿಂ ||
ಬರಿದೇ ಹರಿತವ ಕಳೆಯೆನು |
ತರಿಯುತ ಕೊಳಂಗೆ ಸೆಣಸುವ ಭಟರನದರಿಂ||೩೫|

ಖಳನಲ್ಲಿರುವಂತಿರ್ಪುದು |
ಕಲರವ ಮಾಗುತ್ತಿದೆ ಬಿರುದಿನ ಕಹಳೆಗಳಂ ||
ಕೊಳುಗುಳದೊಳ್ತೋರಿಸು ವಿಧಿ |
ಯೊಲಿದೀಗಿವನನ್ನುಳದುದನುಂ ಬೇಡೆನು ನಾಂ ||೩೬

ನಿಷ್ಕ್ರಾಂತಃ.

ಪ್ರವೇಶ.—ಪ್ರತಾಪರುದ್ರದೇವ, ಪಾರ್ಶ್ವಕ, ಸೈನ್ಯ.

ಪಾರ್ಶ್ವಕ.—ಪ್ರಭುವಿಗೆ ಜಯವಾಗಲಿ. ಈ ಕೋಟೆಯ ಬೀಗದಕೈಗಳನ್ನು ಒಪ್ಪಿಸುವೆನು. ಪುರದ ಬಾಕಲು ಈಕಡೆ ಯಿದೆ, ದಯಮಾಡಿಸಬೇಕು. ಯುದ್ಧವನ್ನು ಮಾಡುತ್ತ ವೀರಸೇನ ಹೊರಗಿರು

ವನು. ಕೋಟೆಯು ತನ್ನ ಕೈವಶವಾಗಿ ಜಯಲಕ್ಷ್ಮಿಯು ತನ್ನ ನ್ನು ವರಿಸಬೇಕೆಂದು ಆತುರಪಡುತ್ತಿರುವಳು. *

ಪ್ರತಾಪರುದ್ರ.—ನಮ್ಮ ನೆರಳಸಂಗಡ ಯುದ್ಧವನ್ನು ಮಾಡುತ್ತಿರುವ ಶತ್ರುವನ್ನು ಕಂಡೆವು. ಸುಲಭವಾಗಿ ಕೋಟೆ ಕೈವಶವಾಯಿತು. ಇನ್ನಿದನ್ನಾಕ್ರಮಿಸಿಕೊಳ್ಳ.

ಸೈನ್ಯ — ಧೀರರೆ! ಬನ್ನಿ, ಕೋಟೆಗೆ ನುಗ್ಗೋಣ. †

ನಿಷ್ಕ್ರಾಂತಾಃ ಸರ್ವೇ.

೮ನೇ ಸ್ಥಾನ.

ಯುದ್ಧರಂಗದಲ್ಲಿ ಮತ್ತೊಂದು ಪ್ರದೇಶ.

ಪ್ರವೇಶ.—ವೀರಸೇನ.

ಕಂದ॥ ಕರದೊಳ್ ಶಸ್ತ್ರವ ಪಿಡಿದೀ ।
ಗರಿಗಳ ಗೆಲದೀ ತನುವನು ಪಗೆಗಳಗೀಯಲ್ ॥

---

* ರಾಗ.—ಶಂಕರಾಭರಣ ನೋಟು, ರೂಪಕತಾಳ.

ಕೋಟೆಯು ದೊರೆ । ನಿನ್ನ ಕೈವಶ ವಾಗಿದೆ ಸಮರದೊಳು । ಬಾಗಲ ತೆಗೆಯುತ ದಾರಿಯ ತೋರುವೆ ಬೇಗದೊಳು ॥೧॥ ಬೈಲಿನಪಡೆ, ಯೊಳ್ ಕಯ್ಯನು ತೋರುತ ಹೊರಗಿಹನು । ವೀರನು ಪುರದೊಳಗಿಲ್ಲವು ಮಾಡುತ ಯುದ್ಧವನು ॥೨॥ ಈಕಡೆಯಿಂದೆ। ನಮ್ಮಾ ಪುರಬಾಗಲು ಕದನವನು। ನಿಲ್ಲಿಸು ದೊರೆಯೇ ಸಿಕ್ಕಿತು ವಲ್ಲಭಪಟ್ಟಣವು ॥ ೩ ॥

† ರಾಗ. ಹಿಂದುಸ್ತಾನಿ ಜಂಜೋಟಿ, ರೂಪಕತಾಳ.

ಸಿಕ್ಕಿತು ಕೋಟೆ ಧೀರರೆ । ಲೂಟಿಯ ಮಾಡಿ ಪುರವ ಭಿಲ್ಲರೆ ॥ ಪ ॥ ನೆಗೆದು ಕೋಟೆ ಗೋಡೆಯ । ಬಿಗಿದು ಕಟ್ಟಿರಿನ್ನು ಬಾವುಟ । ಕಿಚಡಿ ರೊಟ್ಟಿ ಚಟ್ನಿಯ । ಬಟ್ಟಿಗೆ ಬಾಯ್ಗೆ ಇಡುವ ಭಟರೆ ॥ ೧ ॥ ಎಸೆದು ನೆತ್ತಿ ಟೋಪಿಯ । ಹೊಸಗಿ ಭಂಗಿ ಬೇಗನೆ ಭಟರೆ । ಬಿಸಟು ಕತ್ತಿ ಪಟ್ಟವ । ಸೇರುವ ನಾವು ನಾರಿರ ಭಲರೆ ॥೨॥

ನರಪತಿ ಕೌರವಸೈನ್ಯವ ।
ಧುರದೊಳ್ನಡೆಸಿದಗುರುವು ಪಿತಾಮಹ ನಲ್ಲಂ ॥
ಸಲ್ವುದು ವೀರನ ತನುವಿಗೆ ।
ಚಲ್ವಿನ ಬಿಸಿರಕುತದಿಂ ಮೆರೆವ ಗಾಯಂಗಳ್ ॥
ಕೊಲ್ವೊಡೆ ಪಗೆಯುವನಂ ಬಿಡು ।
ಗೆಲ್ವನು ರಂಭಾದಿ ಸುರಲಲನೆಯರನೆಲ್ಲಂ ॥೩೮॥

ಪ್ರವೇಶ —ಜಯಸಿಂಹ.

ಜಯಸಿಂಹ.—ವೃತ್ತ॥ ನಿಲ್ಲೊ ನಿಲ್ಲೊ ನಿಲ್ಲೊ ನಿ ।
ನ್ನಿಲ್ಲಿ ಕಂಡೆ ನೀಗನಾಂ ॥
ನಿಲ್ಲೊ ನಾಯೆ ನಿಲ್ಲೊನೀ ।
ನೆಲ್ಲಿ ಪೋಪೆ ನಿಲ್ಲೊ ನೀಂ ॥ ೩೯ ॥ §

ವೀರಸೇನ.—ಕಂದ॥ ಬಂದೆಯ ನೀನೊರ್ವ ನಟುವ ।
ನಿಂದಿಲ್ಲಿಗೆ ಕೊಂದು ನಿನ್ನವರ ಪೊಂದಿಹುದಾ ॥
ನಂದವ ನನ್ನ ಖಡುಗವುದ ।
ರಿಂದಿದಕೆ ರುಚಿಸದು ನಿನ್ನ ಶೋಣಿತವಿನ್ನುಂ ॥೪೦॥

ಜಯಸಿಂಹ — ನುಡಿಸುವೆ ನಿದಕುತ್ತರವಂ ।
ಪಿಡಿದಿಹ ನನ್ನೀ ದೃಢಕರವಾಲದ ಬಾಯಿಂ ॥

---

§ ರಾಗ. ಬಿಲಹರಿ ನೋಟು, ಏಕತಾಳ.

ಕಂಡೆ ಕಂಡೆ ನಾಯಿ ನೀನಿಲ್ಲಿ ಇರ್ಪೆಯ । ಪತ್ನಿ ಸುತರ ಕೊಂದು ಧುರದೊಳಾತು ಇರ್ಪೆಯ ॥ ೧ ॥ ನಿಲ್ಲೊ ನಿಲ್ಲೊ ಕಳ್ಳನೀಂ ಯುದ್ಧ ಮಾಡಲು। ಮೂಳೆ ಮುರಿದು ನಿನ್ನ ನಾನು ಪದ್ದಿಗಿಯ್ಯಲು ॥ ೨ ॥ ಕರದ ಖಡ್ಗವನ್ನು ಕೊಟ್ಟು ಓಡಿಕೊಂಪೆಯೊ । ಸೆಣಸಿ ಪಾಪಿ ಧುರದೊಳಿಂದು ನರಕಸೇರ್ಪೆಯೊ॥

ಕಡುಕನ ಸಂಗಡ ನುಡಿಯಿಂ ।
ಕೊಡೆನುತ್ತರವಂ ಕದನವ ಮಾಡೀಗೆನ್ನೊಳ್ ॥

(ಇಬ್ಬರು ಜಗಳವಾಡುವರು. ಹಿಮ್ಮೆಟ್ಟಿದ ಜಯಸಿಂಹನನ್ನು ಬಿಟ್ಟು ಪಾವಲಿವರಸೆ ತುಳಿಯುತ್ತ.)

ವೀರಸೇನ –ರ॥ ಬರಿದೆ ನೀನು ಬಳಲುವೆ ಧರಣಿಯಲ್ಲಿ ಯುರುಳುವೆ
ಇಹುದು ನನಗೆ ವರವೆಲೆ ನರರು ನನ್ನ ಕೊಲರೆಲೆ ।
ಜನಿಸಿ ತಾಯ ಬಸುರೊಳು ಜನನ ಮಾದ ನರರೊಳು ।
ಗೆಲರು ನನ್ನ ಧರೆಯೊಳು ಬಳಲು ತಿರ್ಪೆ ಧುರದೊಳು ॥

ಜಯಸಿಂಹ.– ಸೋತೆ ನನಗೆ ನೀನೆಲೆ ಮಾತೆಗರ್ಭ ಕುಯಿದೆಲೆ।
ಈಚೆ ನನ್ನ ತೆಗೆದರೊ ನೀಚ ನೀನಿದರಿತಿರೊ ।
ವರವನಿತ್ತ ದೈವವ ಕರೆದು ಕೇಳೊ ನೈಜವ ।
ನಿನ್ನನೀಗ ನಾನೆಲೆ ಗೆಲ್ಲ ಬಲ್ಲೆ ನೋಡಲೆ ॥ ೪೦ ॥

ವೀರಸೇನ.–ಕಂದ॥ ಜಂಭಾರಿಯೆ ಖಳನಿವನೀ ।
ಗಂಭೀರಧ್ವನಿಯ ಗೆಯ್ದು ಜಿಹ್ವೆಯ ಕಡಿನೀಂ ॥
ದಂಭೋಳಿಯೊಳಾ ಮೋಘವಿ ।
ಜೃಂಭಣೆಯಂ ಖಂಡಿಪಂತೆ ನೀನಿತ್ತಂಡಂ ॥ ೪೩ ॥

ನಂಬದಿರಿ ಜನರೆ ನೀವಿ ।
ನ್ನುಂ ಭೂಮಿಯೊಳು ತ್ರಿಕಾಲವಂ ತಿಳಿದವರೆಂ ॥
ದೆಂಬಾ ಪೈಶಾಚಂಗಳ ।
ನಂಬಿಸುತಿನಿದಾದ ಮಾತಿನಿಂ ವಂಚಿಸುವರ ॥ ೪೪ ॥

ಇನ್ನು ನಿನ್ನ ಸಂಗಡ ನಾನು ಯುದ್ಧವನ್ನು ಮಾಡೆನು.

ಜಯಸಿಂಹ — ಅಡಿಯಪಿಡಿಪು ಬೇಡೆಲೊ ಬಿಡುವೆ ನಿನ್ನ ನೀಗೆಲೊ ।
ಇಡುವೆ ನಿನ್ನ ಬೋನೊಳು ಪೊಡವಿ ಜನಕೆ ತೋರಲು।
ನೋಡಿರೆಂದು ಪಾಪಿಯ ಹೇಡಿ ನಿನ್ನ ವೋರೆಯ ।
ಉಗಿವರವರು ಮುಖದೊಳು ತೊಡೆದುಕೊಳ್ಳ ಸೆರೆಯೊಳು।

ವೀರಸೇನ — ಅಡಿಯ ನಾನು ಪಿಡಿವೆನೆ? ಅಡಗಿ ಬೋನೊಳಿರುವೆನೆ? ।
ಕಡಿದು ನಿನ್ನ ಸೀಳುವೆ ಜಡಿದು ಪೊಡವಿ ಯಾಳುವೆ ।
ಪೊಡವಿ ಜನದನುಡಿಗಳಗೆಡೆಯ ನಾನು ಕೊಡುವೆನೆ? ।
ಪಡೆಯನಾಸಿ ಯಿಳೆಯಲಿ ನಡೆದು ಕಾಡದೊವಗಲಿ ।

ಮಡದಿ ಗರ್ಭ ವೊಡೆದವ ಪಿಡಿದು ಖಡ್ಗ ಮಿರಲವ ।
ಪಿಡಿದು ನಾಂ ಗುರಾಣಿಯ ತಡಿವೆ ನಿನ್ನ ತರಿತವ ।
ಜಡಿದು ನಾನು ಖಡುಗವ ಕಡಿವೆ ನಿನ್ನ ತೊಡೆಗಳ ।
ತಡೆದು ಕೊಳ್ಳೊ ತರಿತವ ಮಡದಿಗರ್ಭ ವೊಡೆದವ ॥

(ಇಬ್ಬರೂ ಜಗಳವಾಡುವರು ಜಯಸಿಂಹನನ್ನು ಅಟ್ಟಿಸಿಕೊಂಡು)

ನಿಷ್ಕ್ರಾಂತಾ.

ಪ್ರವೇಶ.— ಸೇನಾನಿವೇಶನ ಸೂಚನೆಯೊಡನೆ, ಪ್ರತಾಪರುದ್ರದೇವ, ಶೇಖರ, ಕಳಿಂಗ, ನಂದರಾಜ, ಸೈನ್ಯ.

ಪ್ರತಾಪರುದ್ರ.—ಇಲ್ಲಿ ಕಾಣಿಸದೆ ಇರುವ ಮಿತ್ರರೆಲ್ಲ ಸುಖವಾಗಿ ಬರಲೆಂದು ಹಾರೈಸುವೆನು.

ಶೇಖರ.— ಅವರಲ್ಲಿ ಕೆಲವರು ಬಾರದೆ ಇರುವದೂ ಸಹಜವೆ. ಈಗಿಲ್ಲಿರುವವರನ್ನು ನೋಡಿದರೇನೆ ಈ ಅಗಾಧವಾದ ಯುದ್ಧವನ್ನು ಸುಲಭವಾಗಿ ಜೈಸಿದಂತಿರುವದು.

ಪ್ರತಾಪರುದ್ರ – ರಥಿಕರಲ್ಲಿ ಜಯಸಿಂಹನು, ನಿಮ್ಮ ಮಗನು ಕಾಣಿ ಸದೆ ಇರುವರು.

ನಂದರಾಜ – ಸ್ವಾಮಿ! ತಮ್ಮ ಕುಮಾರನು ಕ್ಷತ್ರಿಯ ಜನ್ಮವನ್ನು ಸಾರ್ಥಕಮಾಡಿಕೊಂಡ. ತನ್ನ ಶೌರ್ಯವನ್ನು ಸ್ಥಾಪಿಸಿ ಯುದ್ಧ ಮಾಡುತ್ತಿದ ಸ್ಥಳದಿಂದ ಹಿಮ್ಮೆಟ್ಟದೆ ಶಸ್ತ್ರಹತಿ ಸಹಸ್ರಗಳಿಂದ ವೀರಸ್ವರ್ಗವನ್ನೈದಿದನು.

ಶೇಖರ – ಸ್ವರ್ಗವನ್ನೈದಿದನೇ?

ನಂದರಾಜ –ಜಯಲಕ್ಷ್ಮಿಯು ಶರಗನ್ನು ಹಿಡಿದೆಳೆಯುತ್ತ ಸ್ವರ್ಗ ಪಥಲ್ಲೈದಿದನು. ಆವನ ಯೋಗ್ಯತೆಗೆ ತಕ್ಕಂತೆ ತಾವು ಅನುತಾಪ ಪಡಕೂಡದು. ಅದಕ್ಕೆ ಪಾರವೇ ಇರುವದಿಲ್ಲ.

ಶೇಖರ.–ಅವನಿಗೆ ಗಾಯಗಳ್ಯಾವ ಕಡೆ ಇದ್ದವು.

ನಂದರಾಜ –ಮುಂಭಾಗದಲ್ಲೇ ಇದ್ದವು.

ಶೇಖರ –ಹಾಗಾದರವನು ವೀರಲಕ್ಷ್ಮಿಯ ಮಗ. ನನ್ನಂಗದಲ್ಲಿ ರೋಮಗಳಿರುವಷ್ಟು ಜನ ಮಕ್ಕಳು ನನಗಿದ್ದರೂ ಅವರಿಗೆಲ್ಲ ಇಂತಾ ಅಂತ್ಯವನ್ನೇ ಬಯಸುವೆನು. ಇನ್ನವನು ಕೃತಾರ್ಥನಾದ.

ಪ್ರತಾಪರುದ್ರ –ಅವನು ವಿಶೇಷ ವ್ಯಸನಕ್ಕಾಕರವಾದವನು. ಅದ ನ್ನೆಲ್ಲ ನಾನು ಪಡುವೆನು.

ಶೇಖರ.– ಕೊಂಚವೂ ವ್ಯಸನಪಡಬೇಕಾದ್ದಿಲ್ಲ. ಕ್ಷತ್ರಿಯನಂತೆ ಬಾಳಿ ಕ್ಷತ್ರಿಯನಿಗಾಗಿರುವ ವೀರಸ್ವರ್ಗವನ್ನೈದಿದನೆಂದು ಕೇಳಿದ ನಂತರ ವ್ಯಸನವೆಲ್ಲ ಪೂರೈಸಿತು. ದೇವರಿನ್ನವನನ್ನು ಕಾಪಾಡು ವನು. ಇನ್ನವನ ಗೋಜನ್ನು ಬಿಡಿ. ಆದರೆ ಈ ಕಡೆ ನೋಡಿ ಅದಕ್ಕೆ ತಕ್ಕ ಪ್ರತಿಫಲ ಬರುತ್ತಿರುವದು.

ಪ್ರವೇಶ.—ವೀರಸೇನನ ಶಿರಸ್ಸಿನೊಡನೆ, ಜಯಸಿಂಹ.

ಜಯಸಿಂಹ.—ಕಂದ || ನೋಡೈ ನಮ್ಮೋಧೀಶನೆ |
ಕೇಡಿಗನಿವನೀ ಶಿರವನು ತಂದಿಹೆ ನೀಗಳ್ ||
ಕಾಡಿಸುತಿವನಿರ್ದಂ ವಿಭೋ |
ನಾಡೊಳು ಸುಖದಿಂ ಪ್ರತಾಪರುದ್ರನೆ ಬಾಳೈ ||೪೬

ನೀಡಿರಿ ನಿಮ್ಮಯ ಜಿಹ್ವೆಯ |
ನಾಡಿನ ಜನಗಳ್ ಜಯಜಯ ಜಯವೆನುತೆಲ್ಲರ್ ||
ಪಾಡಲ್ಕೀಗೆಮ್ಮೋಧ್ರದ |
ಚೂಡಾರತ್ನಕೆ ಜಯಜಯ ಮಾಗೆನುತ್ತಂ ||೪೭||

ಸೈನ್ಯಸಾಮಾಜಿಕರು.— ಜಯಿಸು ಜಗದೀಶ ಜಯಿಸೈ |
ಜಯನಿಚ್ಚಂ ಜಯಿಸು ನಿತ್ಯ ಶುಭಚಾರಿತ್ರಾ ||
ಜಯದಿ ಮಿಗೆಮೆರೆ ದಯಾನಿಧಿ |
ಜಯಜಯ ಜನಲೋಲ ಜಯಿಸು ನಿಖಿಲೋಧೀಶಾ

-+ ಮಂಗಳ +-

ರಾಗ, ಭೈರವಿ. ರೂಪಕತಾಳ.

ಓಪ್ರಭುಪಾಲನೆ | ಪ್ರ | ತಾಪರುದ್ರನೆ || ಬಂದಿಜಯವ ನೀನು ಈ | ಭೂಮಿಜನರ ನಿಂದು ಕಾಪೆ || ೧ || ಸತ್ಯಸಂಧನೆ | ಜನ | ಲೋಲಸಾಂದ್ರನೆ || ಮುಂದೆ ಭೂಮಿಯಾಳಿನೀಂ | ಚಂದದೊಳಗೊಂದು ಸುಖವ ||೨|| ಓಪ್ರಭುವಾಳುತ | ಚಿರ | ಕಾಲಬಾಳುತ || ಬಂದಿ ಖ್ಯಾತಿಯನ್ನು ನೀಂ | ಮುಂದೆ ಬಾಳುತಿರ್ಪುದೈಯ್ಯ || ೩ ||

ಹಿಂದುಸ್ತಾನಿ ಜಾಂಜೋಟಿ, ರೂಪಕತಾಳ.

ಪಾಲಿಸೈ ಪರಮೇಶನೆ | ಕಟಾಕ್ಷವಿಟ್ಟುಮೇಶನೆ ||ಪ||

ಶ್ರೀ-ಚಾ-ಮ-ರಾ-ಜ-ನೃಪಗಿತ್ತು ನಿತ್ಯವನ್ನು ಧರೆಯೊಳವನ ಪಾಲಿಸೈ||

ವಾ-ಣಿ-ಕೃ-ಪೆ-ಯ-ನಿವನು ಬೇಗ ಬಂದಲೀಗ ಧರೆಯಜನರ ಪಾಲಿಸೆ ||೨

ಶ್ರೀ-ಕೃ-ಷ್ಣ-ರಾ-ಜಂ-ಗಿರಲಿ ಭೂಮಿಭಾಗ್ಯವೆರ್ಚೆ ಮನಿಶ ಜನರಪಾಲಿಸೆ||

ಸಮಾಪ್ತಂ.

ಎಂ. ಎಲ್. ಶ್ರೀಕಂಠೇಶ ಗೌಡರಿಂದ ವಿರಚಿತವಾಗಿರುವ,

ಪುಸ್ತಕಗಳು.

೧. **ಕನ್ಯಾವಿತಂತು.**—ವಚನಕಾವ್ಯ ... ಕ್ರಯ ೮ ಆಣೆ.

೨. **ಚಾಮನೃಪಚಂದ್ರಪ್ರಭೆ.**—ಗತಿಸಿಹೋದ ಮಹಾರಾಜ ಚಾಮರಾಜ ಒಡೆಯರವರ ಸ್ಮೃತಿಶತಕ. ... ೨ ಆಣೆ.

೩. **ಪ್ರತಾಪರುದ್ರದೇವ.**—ನಾಟಕ. ... ೧ ರೂಪಾಯಿ

೪. **ಪ್ರಮೀಳಾರ್ಜುನೀಯ.**—ಶೃಂಗಾರನಾಟಕ. ಅಚ್ಚಿನಲ್ಲಿದೆ.

೫. **ಭವಾನಿಬಾಳ್.**—ನಾಟಕ. .. ... ಅಚ್ಚಿನಲ್ಲಿದೆ.

ಮಹಾರಾಷ್ಟ್ರದ ಚರಿತ್ರೆಗೆ ಸಂಬಂಧಪಟ್ಟ ನವೀನಕಾವ್ಯ. ಸಿವಾಜಿ ಮಹಾರಾಜನ ವಂಶಾವಳಿ ವೃತ್ತಾಂತ—ಅವನು ಹುಟ್ಟುವದಕ್ಕೆ ಮುಂಚೆ ಮಹಾರಾಷ್ಟ್ರವಿದ್ದ ಸ್ಥಿತಿ—ಮರಾಟ ಜನಗಳಲ್ಲಿ ದೇಶಾಭಿಮಾನ ಮತಾಭಿಮಾನ ಹುಟ್ಟಿ ಮುಸಲ್ಮಾನರಲ್ಲಿ ದ್ವೇಷ ಬೆಳಸಲು ಕಾರಣ—ಮುಸಲ್ಮಾನ ದೊರೆಗಳ ಕಾಟವನ್ನು ತಡೆದುಕೊಳ್ಳಲಾರದೆ ರಾಜಾಸ್ಥಾನದ ಅರಸುಗಳು ಅವರಿಗೆ ಹೆಣ್ಣುಗಳನ್ನು ಕೊಟ್ಟುಕೊಂಡು ಕಾಲಹರಣ ಮಾಡುತ್ತಿದ್ದಾಗ ಮುಸಲ್ಮಾನರನ್ನೆಲ್ಲ ತಿಂದು ತೇಗಲು ಶೈಯ್ಯಾದ್ರಿಯಲ್ಲಿ ಅಬ್ಬರಿಸುತ್ತಿದ್ದ ಆ ವೀರ ನಾರೀಮಣಿಯಾದ ಸಿವಾಜಿ ತಾಯಿ, ಜೀಜಿಬಾಯಿಯ ಪರಿಣಯ_ಭವಾನಿ ಪ್ರಸನ್ನ—ಭವಾನಿಬಾಳ್ ಪ್ರಸಾದ —

ವೃತ್ತ.

" ತೊರೆದಾ ತೋಳಿನ ಶೌರ್ಯವಂ ಧರೆಯುತಾಮಾಳುತ್ತಿರಲ್ ಖೂಳರೊಳ್ |
ಬೆರೆಸುತ್ತಮ್ಮಯ ರಕ್ತ ತಾವು ಘಡ ರಾಜಾಸ್ಥಾನದಾಸಿಂಗಳ್ ||
ಸರಿನೀಂ ಮಾಳ್ಪಲೆ ಮೆಲ್ಲ ಮುಂಮುದಿಯರಂ ಶೈಯ್ಯಾದ್ರಿಯಲ್ಲಬ್ಬರಂ |
ಗರೆವೀ ಪೆರ್ಬುಲಿಗಾರವಲ್ಲಿ ಪುಡಿಸಿಂಗಂ ಸಾಟ ತಾನಪ್ಪುದೇಂ || "

ಭವಾನಿಬಾಳ್, ೪ ನೇ ಅಂಕ.